# ಅರ್ಥ-೧೦

ಜೂನ್, 2026

ಅರ್ಥಶಾಸ್ತ್ರವನ್ನು ಕುರಿತ ಪತ್ರಿಕೆ





# ಅರ್ಥ–10

ಜೂನ್ 2026

ಅರ್ಥಶಾಸ್ತ್ರವನ್ನು ಕುರಿತ ಪತ್ರಿಕೆ

# ಒಳಪುಟಗಳಲ್ಲಿ




ನಿಮ್ಮೊಂದಿಗೆ

ಅರ್ಥದ ಹತ್ತನೆಯ ಸಂಚಿಕೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುವುದಕ್ಕೆ ಖುಷಿಯಾಗುತ್ತದೆ. ಕಳೆದ ಮೂರು ಸಂಚಿಕೆಗಳಿಂದ ಪ್ರತಿ ತಿಂಗಳು ತರುವುದಕ್ಕೆ ಸಾಧ್ಯವಾಗಿದೆ. ನಿಜವಾಗಿ ಉಪಯುಕ್ತವಾ, ಯಾರಾದರೂ ಓದುತ್ತಾರಾ ಅನ್ನುವ ಅನುಮಾನ ಕೆಲವೊಮ್ಮೆ ಕಾಡುತ್ತದೆ. ಇದ್ದಕ್ಕಿದ್ದ ಹಾಗೆ ಯಾವುದೋ ಅನಿರೀಕ್ಷಿತ ಮೂಲೆಯಿಂದ ಒಳ್ಳೆ ಕೆಲಸ ಮುಂದುವರಿಸಿ, ಅಂತ ಯಾರೋ ಹೇಳಿದಾಗ ಉಬ್ಬಿ, ಮುಂದುವರಿಸೋಣ ಅನಿಸುತ್ತದೆ. ಇನ್ಯಾರೋ ಒಂದಿಷ್ಟು ಪ್ರತಿಗಳನ್ನು ಮುದ್ರಿಸಿ ಹಂಚುತ್ತೇನೆ ಅಂದಾಗ ಖುಷಿಯಾಗುತ್ತದೆ. ಹಲವರು ನೆರವಾಗುತ್ತಿದ್ದಾರೆ. ಪ್ರಾಜೆಕ್ಟ್ ಸಿಂಡಿಕೇಟ್ ಅಂತಹ ವೇದಿಕೆಗಳು ತಮ್ಮಲ್ಲಿ ಪ್ರಕಟವಾಗುವ ಲೇಖನಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿವೆ. ಅಭಿಜಿತ್ ಬ್ಯಾನರ್ಜಿಯಂತಹ ಖ್ಯಾತ ಅರ್ಥಶಾಸ್ತ್ರಜ್ಞರು ಸಂತೋಷದಿಂದ ತಮ್ಮ ಲೇಖನಗಳನ್ನು ಕೊಟ್ಟಿದ್ದಾರೆ. ಕೆಲವೊಮ್ಮೆ ಪತ್ರಿಕೆಯವರಿಂದ ಅನುಮತಿ ಪಡೆಯುವುದು ಕಷ್ಟವಾಗುತ್ತದೆ. ಹಲವು ಬಾರಿ ಸಿಗುವುದಿಲ್ಲ. ಮಾಡಿದ ಅನುವಾದವನ್ನು ಬಳಸಿಕೊಳ್ಳಲಾಗದೆ ಕೈಬಿಡಬೇಕಾಗುತ್ತದೆ. ಇಲ್ಲವೆ ವರದಿಗಳಂತೆ ಪ್ರಕಟಿಸಬೇಕಾಗುತ್ತದೆ. ಆದರೆ ಸ್ವತಃ ಎಷ್ಟೋ ಕಲಿಯುವುದಕ್ಕೆ ಸಾಧ್ಯವಾಗಿದೆ. ಆದಷ್ಟು ಅರ್ಥವಾಗುವಂತಹ ಭಾಷೆಯಲ್ಲಿ ಅನುವಾದಿಸುತ್ತಿದ್ದೇನೆ. ಬೇರೆ ಪತ್ರಿಕೆಗಳಲ್ಲಿ ಪ್ರಕಟವಾದ ಅಂಕಣಗಳನ್ನು ಒಂದಿಷ್ಟು ತಿದ್ದುಪಡಿಗಳೊಂದಿಗೆ ಪ್ರಕಟಿಸುತ್ತಿದ್ದೇನೆ.

ಈ ಸಂಚಿಕೆಯಲ್ಲಿ ರೂಪಾಯಿ ಬೆಲೆ ಕುಸಿತದ ಬಗ್ಗೆ ಹಲವು ಲೇಖನಗಳ ಅನುವಾದವಿದೆ. ಜಯನ್ ಜೋಸ್, ಸಿ ಪಿ ಚಂದ್ರಶೇಖರ್, ಜಯತಿ ಘೋಷ್, ದುವ್ವೂರಿ ಸುಬ್ಬರಾವ್ ಅವರ ಲೇಖನಗಳು ಇವೆ. ಈ ಬಾರಿ ನೊಬೆಲ್ ಪ್ರಶಸ್ತಿ ವಿಜೇತ ಡೇರೆನ್ ಅಸೆಮೊಗ್ಲು ಪೋಪ್ ಲಿಯೊ ಅವರು ಎಐ ಕುರಿತ ಮಾತುಗಳಿಗೆ ಪ್ರತಿಕ್ರಿಯಿಸಿದ್ದಾರೆ. ಅಭಿಜಿತ್ ಬ್ಯಾನರ್ಜಿಯವರ ಮಾಲಿಕೆ ಮುಂದುವರಿದಿದೆ. ಹಾಗೆಯೆ ರಘುರಾಂ ರಾಜನ್, ಅರವಿಂದ ಸುಬ್ರಮಣಿಯನ್, ನಂದುಲ ರಘುರಾಂ ಅವರ  ಲೇಖನಗಳು ಇವೆ. ಅಮರ್ತ್ಯ ಸೇನ್ ಅವರ ಚಿಂತನೆಗಳ ಮಾಲಿಕೆ ಮುಂದುವರಿದಿದೆ. ಇವ ನಮ್ಮವ ಕಾಲಂ ಈ ಸಲ ಬರೆಯುವುದಕ್ಕೆ ಸಾಧ್ಯವಾಗಲಿಲ್ಲ.

ನಿಮ್ಮ ಸಹಕಾರ, ಸಲಹೆ ಪತ್ರಿಕೆಯನ್ನು ಹೆಚ್ಚು ಉಪಯುಕ್ತವಾಗಿಸುವ ನಿಟ್ಟಿನಲ್ಲಿ ಸಹಾಯಕ. ಯಾವುದೇ ಸಲಹೆಯೂ ಸ್ವಾಗತಾರ್ಹ.

ದಯಮಾಡಿ ಆಸಕ್ತ ಗೆಳೆಯರೊಂದಿಗೆ ಹಂಚಿಕೊಳ್ಳಿ. ಇಮೇಲ್ ತಲುಪಿಸಿದರೆ ಅವರಿಗೂ ತಲುಪಿಸಬಹುದು. 'ಅರ್ಥ' ಪತ್ರಿಕೆಯ ಹಳೆಯ ಸಂಚಿಕೆಗಳಿಗೆ ಮತ್ತು ನಮ್ಮ ಇತರ ಪುಸ್ತಕ ಹಾಗೂ ಬರಹಗಳಿಗೆ www.lokayatha.com ನೋಡಿ.

ಪ್ರೀತಿಯಿಂದ

ಟಿ ಎಸ್ ವೇಣುಗೋಪಾಲ್

statsvenugopal@gmail.com

9900082773




ಇದು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಮೌಲಿಕ ಲೇಖನಗಳನ್ನು ಒಳಗೊಂಡ 'ಅರ್ಥ' ಹೆಸರಿನ ಡಿಜಿಟಲ್ ಪತ್ರಿಕೆ . ಮೈಸೂರಿನಲ್ಲಿ ನೆಲೆಸಿರುವ ಟಿ ಎಸ್ ವೇಣುಗೋಪಾಲ್ ಇವರು ಈ ಪತ್ರಿಕೆ ಹೊರ ತರುತ್ತಿದ್ದಾರೆ. ಆರ್ಥಿಕ ವಿಚಾರಗಳು ಮತ್ತು ಜಾಗತಿಕ ವಿದ್ಯಮಾನಗಳ ಬಗ್ಗೆ ಜಾಗತಿಕ ಖ್ಯಾತಿಯ ವಿಷಯ ಪರಿಣಿತರು ಮತ್ತು ಆರ್ಥಿಕ ತಜ್ಞರುಗಳ ಲೇಖನಗಳನ್ನು ಕನ್ನಡೀಕರಿಸಿ ಪ್ರಕಟಿಸುತ್ತಿರುವ ಇವರ ಸಾಹಸಕ್ಕೆ ಸಾವಿರ ಶರಣು. ಈ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ನಾವೆಲ್ಲರೂ ಪ್ರಯತ್ನಿಸಬೇಕು. ಕನ್ನಡ ಭಾಷೆಯ ಓದುಗರಿಗೆ 'ಅರ್ಥ' ಡಿಜಿಟಲ್ ಪತ್ರಿಕೆ ಅನನ್ಯ ಕೊಡುಗೆಯಾಗಿದೆ.

ವಿಶುಕುಮಾರ್

ನಮಸ್ಕಾರ.

ಬಹಳ ಗಂಭೀರವಾದ ಲೇಖನಗಳನ್ನು ಒಳಗೊಂಡ ಅರ್ಥದ ಈ ಸಂಚಿಕೆ ತುಂಬ ಮಹತ್ವಪೂರ್ಣ. ಹಿಂದಿನ ಸಂಚಿಕೆಗಳೂ ನನಗೆ ಇಷ್ಟವಾಗಿದ್ದವು. ಜಿಡಿಪಿಯ ಕುರಿತ ಲೇಖನ ಅಭಿವೃದ್ಧಿಯ ಕುರಿತ ನಮ್ಮ ಹುಸಿ ನಂಬಿಕೆಗಳನ್ನು, ಮಳ್ಳು ಭ್ರಮೆಗಳನ್ನು ನಿವಾರಿಸಿ, ನಿಜವಾದ ಅಭಿವೃದ್ಧಿ ಎನ್ನುವುದು ಸಾಮಾನ್ಯ ಮನುಷ್ಯ ನೈಜ ಏಳಿಗೆಯನ್ನು, ನೆಮ್ಮದಿಯ ಬದುಕನ್ನು ಒಳಗೊಳ್ಳಬೇಕು ಎನ್ನುವುದನ್ನು ಬಹಳ ಚೆನ್ನಾಗಿ ವಿವರಿಸಿದೆ. ಈ ಹಿನ್ನೆಲೆಯಲ್ಲಿ ಫ್ರಾನ್ಸಿನ ಮಾಜಿ ಅಧ್ಯಕ್ಷರು ಹೇಳಿದ ಮಾತು ಎಷ್ಟು ನಿಜ ಎನ್ನಿಸುತ್ತದೆ. ನನಗೆ ಕುತೂಹಲ ಮೂಡಿಸಿದ ಇನ್ನೊಂದು ಲೇಖನ ಯಾಕೆ ಫಲವತ್ತತೆ ದರ ಇಳಿಯುತ್ತ ಸಾಗಿದೆ ಎಂದು. ನೌಕರಿ ಮಾಡುವ ಮಧ್ಯಮ ವರ್ಗದ ಮಹಿಳೆಯರಿಗೆ ಒಂದು ಮಗುವನ್ನು ಸಾಕುವುದು ಎಷ್ಟು ಹೊರೆ ಎನ್ನಿಸುತ್ತದೆ ಎಂದರೆ ಎರಡನೇ ಮಗು ಮಾಡಿಕೊಳ್ಳಬೇಕು ಎಂದು ಬಯಸಿದರೆ ಮನೆಯಲ್ಲಿ ಅಮ್ಮ ಅಥವಾ ಅತ್ತೆಯ ನೈಜ ಆಸರೆ ಇಲ್ಲದಿದ್ದರೆ ಸಾಧ್ಯವೇ ಆಗುವುದಿಲ್ಲ. ಅಲ್ಲದೇ ಕಚೇರಿ ಕೆಲಸದಲ್ಲಿ ಹಿನ್ನಡೆಯೂ ಆಗುತ್ತದೆ. ಮನೆ + ಕಚೇರಿ ಎರಡೂ ಕಡೆ ಬೆಂಬಲ ವ್ಯವಸ್ಥೆ ಇದ್ದಾಗ, ಸುರಕ್ಷಿತತೆಯ ಭಾವನೆಯಿದ್ದಾಗ ಎರಡನೇ ಮಗುವಿನ ಯೋಚನೆ ಮಾಡಬಹುದೇನೋ.

ನೀವು ಪ್ರತಿ ಸಂಚಿಕೆಗೂ ಎಷ್ಟು ಶ್ರಮ ವಹಿಸುತ್ತೀರಿ ಎನ್ನುವುದು ಪ್ರತಿ ಲೇಖನದಲ್ಲಿಯೂ ವ್ಯಕ್ತವಾಗುತ್ತದೆ.

ಸುಸ್ನೇಹ ವಿಶ್ವಾಸದಿಂದ– **ಸುಮಂಗಲ**

ತುಂಬಾ ಓದುವ, ತಿಳಿವನ್ನು ಹೆಚ್ಚಿಸುವ ಬರಹಗಳಿವೆ. ವಂದನೆಗಳು

**ಸುರೇಶ್ ಕುಮಾರ್**

ಅರ್ಥಶಾಸ್ತ್ರದ ಲೇಖನಗಳು ಕನ್ನಡದಲ್ಲಿ ಹೆಚ್ಚು ಹೆಚ್ಚು ಬರಬೇಕು. ಕೆಲವರಿಗೆ ಇಂಗ್ಲೀಷಿನಲ್ಲಿ ಓದಿ ಅರ್ಥ ಮಾಡಿಕೊಳ್ಳಲು ಕಷ್ಟವಾಗಬಹುದು. ಹಾಗಾಗಿ ನಿಮ್ಮ ಪ್ರಯತ್ನ ಖಂಡಿತ ಸಹಾಯಕಾರಿ.

**ಬಾಲಸುಬ್ರಮಣ್ಯ ಎನ್ ಅರ್**

It is a 'must' read for students of Economics in particular and general public in general. The editor has done a yeoman service and the Kannada is simple but suitable.

T R Chandrashekhar

ಕನ್ನಡದಲ್ಲಿ ಇಂತಹ ನಿಯತಕಾಲಿಕೆಯನ್ನು ತರುವುದು ಒಂದು ಸಾಹಸ. ಅದರಲ್ಲೂ ನೀವು ಒಬ್ಬರೇ ಈ ಸಾಹಸದಲ್ಲಿ ತೊಡಗಿಕೊಂಡಿದ್ದೀರಿ. ನಿಮ್ಮ ಬಗ್ಗೆ ನನಗೆ ಇನ್ನೂ ಗೌರವ ಮತ್ತು ಪ್ರೀತಿಗಳು ಹೆಚ್ಚಾದವು. ಎರಡೂ ಸಂಚಿಕೆಗಳು ಉಪಯುಕ್ತವಾಗಿವೆ. ನನ್ನ ಕೆಲಸ ಅನಿಸಿಕೆಗಳು ಹೀಗಿವೆ.

1. ಸಂಕ್ಷಿಪ್ತ ಲೇಖನಗಳ ಅನುವಾದಗಳು ಸಮಕಾಲೀನ ಸಂಗತಿಗಳನ್ನು ಒಳಗೊಂಡಿವೆ. ಮತ್ತು ನಮ್ಮ ರಾಜಕೀಯ ಅರ್ಥಶಾಸ್ತ್ರವನ್ನು ತಿಳಿದುಕೊಳ್ಳಲು ಪೂರಕವಾಗಿವೆ. ಈ ಲೇಖನಗಳು ಹೀಗೇ ಪ್ರಕಟವಾಗುವುದು ಒಳ್ಳೆಯದು.

2. ಸಂಕ್ಷಿಪ್ತ ಲೇಖನಗಳ ಜೊತೆಗೆ ತಿಂಗಳಿಗೆ ಒಂದು ದೀರ್ಘ (ಸಂಶೋಧನಾ) ಲೇಖನವನ್ನು ಪ್ರಕಟಿಸಿದಲ್ಲಿ ಅನುಕೂಲವಾಗುತ್ತದೆ. ಮುಖ್ಯವಾಗಿ ಸಮಾಕಾಲೀನ ಭಾರತದ ಅರ್ಥ ವ್ಯವಸ್ಥೆಯನ್ನು ವಿಶ್ಲೇಷಿಸುವ ದೀರ್ಘ ಬರಹಗಳನ್ನು ಇಲ್ಲಿ ಪ್ರಕಟಿಸಬಹುದು.

3. ಅನುವಾದಕ್ಕಾಗಿ ಒಂದು ತಂಡವನ್ನು ಹಂತಹಂತವಾಗಿ ಕಟ್ಟಿಕೊಳ್ಳುವುದು ಒಳ್ಳೆಯದು. ನಿಮ್ಮ ಮೇಲಿನ ಭಾರ ಕಡಿಮೆಯಾಗುತ್ತದೆ. .

ಒಟ್ಟಾರೆ ನಿಮ್ಮ ಈ ಸಾಹಸಕ್ಕೆ ನನ್ನ ನಮಸ್ಕಾರಗಳು

Dr. A S Prabhakar

ಪ್ರಿಯ ಶ್ರೀ ವೇಣುಗೋಪಾಲ್,
ಸಂಚಿಕೆ ಅತ್ತ್ಯುತ್ತಮವಾಗಿ ಬಂದಿದೆ. ನೀವು ಮಾಡುತ್ತಿರುವುದು ಸಾಹಸದ ಕೆಲಸ. ಒಂದು ಸಂಚಿಕೆಯನ್ನು ಸಕಾಲಕ್ಕೆ ತರುವುದರ ಹಿಂದೆ ಇರುವ ಶ್ರಮ, ಸಾವಧಾನತೆ ಬಗ್ಗೆ ನನಗೆ ಅರಿವಿದೆ.
ಈ ಸಂಚಿಕೆಯ ಬಗ್ಗೆ ಹೇಳುವುದಾದರೆ, ಇದರಲ್ಲಿರುವ 12 ಲೇಖನಗಳು ಮಹತ್ವಪೂರ್ಣವಾದವು. ವಿಶ್ವದ ಅತ್ಯುತ್ತಮ ಚಿಂತಕರ ಅಭಿಪ್ರಾಯಗಳನ್ನು ಅವು ಒಳಗೊಂಡಿವೆ. ಸೀಬೆಹಣ್ಣಿನ ಮಹತ್ವದಿಂದ ಹಿಡಿದು ನ್ಯಾಯ ಪರಿಕಲ್ಪನೆಯವರೆಗಿನ ವ್ಯಾಪ್ತಿಯನ್ನು ಸಂಚಿಕೆ ಹೊಂದಿದೆ. ಭಾರತೀಯ ಆರ್ಥಿಕ ಚಿಂತಕರ ಚಿಂತನೆಗಳನ್ನು ಕ್ರಮ ಕ್ರಮವಾಗಿ ಪರಿಚಯಿಸುವ ಅಗತ್ಯವಿದೆ. ನಮ್ಮ ದೇಶ ವಿಶಿಷ್ಟವಾಗಿದ್ದು ಇದರ ಅಭಿವೃದ್ಧಿಗೆ ಬೇರೆಯದೇ ರೀತಿಯ ಚಿಂತನೆ ಅಗತ್ಯವಿದೆ. ಬಹುಶಃ ನಮ್ಮ ಪ್ರಾಚೀನ ಚಿಂತನೆ ಮತ್ತು ಮೆಟೀರಿಯಲಿಸ್ಟಿಕ್ ಪಾಶ್ಚಾತ್ಯ ಚಿಂತನೆಯ ಹೈಬ್ರಿಡ್ ಅಗತ್ಯವಿದೆಯೆಂದು ನನ್ನ ಭಾವನೆ.
ಇದರ ಬಗ್ಗೆ ಚಿಂತನೆ ಅಗತ್ಯವಿದೆ .ಸಾವಿರ ಸಾವಿರ ಸಂಖ್ಯೆಯಲ್ಲಿ ಲೇ ಆಫ್ ನೋಡಿ ಗಾಬರಿಯಾಗುತ್ತಿದೆ. ಯುವಬಾಹುಳ್ಯವಿರುವ ನಮ್ಮ ದೇಶಕ್ಕೆ ಯಾವ ರೀತಿಯ ವಿದ್ಯೆ ಬೇಕು? ಉದ್ಯೋಗ ಸೃಷ್ಟಿಸುವ ವಿಧಾನ ಯಾವುದಾಗಿರಬೇಕು? ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಉದ್ಯೋಗ ಯಾವ ವಲಯದಲ್ಲಿ ಸೃಷ್ಟಿಯಾಗಬೇಕು ಎಂಬ ಬಗ್ಗೆ ಚಿಂತನೆ ನಡೆಯಬೇಕಾಗಿದೆ.
ಮುಂದಿನ ಸಂಚಿಕೆಗಳಲ್ಲಿ ಈ ಬಗ್ಗೆ ಚಿಂತನೆ ನಡೆದರೆ ಒಳ್ಳೆಯದೆಂದು ಭಾವಿಸುತ್ತೇನೆ. ಅರ್ಥ ಹೊರ ತರುತ್ತಿರುವುದಕ್ಕಾಗಿ ಅಭಿನಂದನೆಗಳು.

ಸಿ ಕೆ ರೇಣುಕಾರ್ಯ

# ಸಂಕಟದ ಗಳಿಗೆಯಲ್ಲಿ ಸೌರಶಕ್ತಿಯ ಆಶಾಕಿರಣ

## ಅಭಿಜಿತ್ ಬ್ಯಾನರ್ಜಿ

ನನ್ನ ಚಿಕ್ಕಮ್ಮನ ಮನೆಯ ಮೆಟ್ಟಿಲುಗಳನ್ನು ಸಾಧ್ಯವಾದಷ್ಟು ಜೋರಾಗಿ ಇಳಿಯುತ್ತಿದ್ದೆ. ಅದು ಈಗಲೂ ನೆನಪಿದೆ; ಅತ್ತ ಕಡೆಯಿಂದ ಒಂದು, ಎರಡು, ಮೂರು, ಎಣಿಸೋ ಸದ್ದು ಜೋರಾಗುತ್ತಿತ್ತು. ಇನ್ನೇನು ಮುಗಿಯುತ್ತೆ ಅನ್ನೋದರ ಸೂಚನೆ ಅದು. ನಾವು ಕಣ್ಣಾಮುಚ್ಚಾಲೆ ಆಡುತ್ತಿದ್ದೆವು. ಈ ಸಲ ನನ್ನನ್ನು ಹುಡುಕುವ ಸರದಿ ನನ್ನ ಕಸಿನ್‌ದಾಗಿತ್ತು. ಅವನು ನನಗಿಂತ ದೊಡ್ಡವನು. ದಷ್ಟಪುಷ್ಟವಾಗಿಯೂ ಇದ್ದ. ಜೋರಾಗಿ ಓಡುತ್ತಿದ್ದ. ಮೇಲಿನ ಮಹಡಿಯಿಂದ ಯಾರ ಕಣ್ಣಿಗೂ ಬೀಳಬಾರದೆಂದು ಗೋಡೆಗೆ ಅಂಟಿಕೊಂಡೇ ಸರಿಯುತ್ತಾ, ಅಂಗಳವನ್ನು ದಾಟಿ, ಓಡುತ್ತಾ ಎದುರಿದ್ದ ಮುಚ್ಚಿದ ಬಾಗಿಲನ್ನು ಜೋರಾಗಿ ತಳ್ಳಿದೆ. ಒಳಗೆ ನುಗ್ಗಿ ತಕ್ಷಣ ಕದ ಹಾಕಿಕೊಂಡೆ. ಕಿಟಕಿಗಳೆಲ್ಲ ಮುಚ್ಚಿದಂತಿದ್ದವು. ಕತ್ತಲಲ್ಲಿ ಲೈಟ್ ಸ್ವಿಚ್ ಎಲ್ಲಿದೆ ತಿಳಿಯಲಿಲ್ಲ. ಆದರೆ ಗೋಡೆಗಳನ್ನು ಮುಟ್ಟಿ ತಡಕಾಡಿದೆ. ತಂಪಾಗಿ ಜಿಗುಟಾಗಿವೆ ಅನ್ನಿಸಿತು. ತುಂಬಾ ಧೂಳು ತುಂಬಿಕೊಂಡಿತ್ತು.

ಆದರೆ ನಾನಂತೂ ಸುರಕ್ಷಿತವಾಗಿದ್ದೆ; ನನ್ನ ಕಸಿನ್ ಬಾಗಿಲು ದಾಟಿಕೊಂಡು ಮುಂದೆ ಓಡಿದ. ಅವನು ಮತ್ತೆ ಮೆಟ್ಟಿಲು ಹತ್ತಿ ಮೇಲಕ್ಕೆ ಹೋಗುತ್ತಿದ್ದ ಸದ್ದು ಕೇಳಿಸಿತು. ಸ್ವಲ್ಪ ಸಮಯದ ನಂತರ, ನಾನು ನಿಧಾನವಾಗಿ ಹೊರಬಂದು ನನ್ನ ಗೆಲುವನ್ನು ಸಾರಲು ಜೋರಾಗಿ ಕೂಗಿದೆ. ನನ್ನ ಚಿಕ್ಕಮ್ಮ ನನ್ನನ್ನು ನೋಡಿ ಬೆಚ್ಚಿಬಿದ್ದು, ಜೋರಾಗಿ ಕಿರುಚಿಕೊಂಡಳು. ಸಂಪೂರ್ಣ ಕಲ್ಲಿದ್ದಲ ಧೂಳಿನಿಂದ ಮುಚ್ಚಿ ಹೋಗಿದ್ದ ನನ್ನ ಮೈಯ್ಯಲ್ಲಿ ನನ್ನ ಕಣ್ಣು ಮಾತ್ರ ಕಾಣುತ್ತಿದ್ದವಂತೆ. ನಾನು ಅಡಗಿದ್ದು ಅವರ ಕಲ್ಲಿದ್ದಲು ಕೋಣೆಯಲ್ಲಿ! ಅವರ ಅಡುಗೆ ಮನೆಯ ಗೋಡೆಯೊಳಗೆ ಒಂದು ದೊಡ್ಡ ಕಲ್ಲಿದ್ದಲ ಒಲೆಯಿತ್ತು. ಮನೆಯಡುಗೆಯೆಲ್ಲಾ ಅದರಲ್ಲೇ ಆಗುತ್ತಿತ್ತು. ಕಲ್ಲಿದ್ದಲ ಕೋಣೆ ಅದರ ಬದಿಯಲ್ಲಿತ್ತು. ಅಲ್ಲಿ ಕಲ್ಲಿದ್ದಲಿನ ದಪ್ಪ ದಪ್ಪ ಹೆಂಟೆಗಳಿದ್ದವು. ಬೇಕಾದಾಗ ಅವನ್ನು ಸಣ್ಣಸಣ್ಣದಾಗಿ ಒಡೆದು ಬಳಸಿಕೊಳ್ಳುತ್ತಿದ್ದರು. ಕಲ್ಲಿದ್ದಲು ತುಂಬಾ ರೇಜಿಗೆ. ಅದರ ಧೂಳು ಪರಿಸರಕ್ಕೆ ಹಾನಿ ಮಾಡುತ್ತಿತ್ತು. ಆದರೆ ಅದು ತುಂಬಾ ಅಗ್ಗ ಹಾಗೂ ಅತ್ಯಂತ ಅನುಕೂಲಕರವಾಗಿತ್ತು. ಆ ಒಲೆಗಳು ಸಾಕಷ್ಟು ದೊಡ್ಡವು. ಇಪ್ಪತ್ತಕ್ಕೂ ಹೆಚ್ಚು ಜನರಿದ್ದ ಆ ಅವಿಭಕ್ತ ಕುಟುಂಬಕ್ಕೆ ಅನ್ನ ಬೇಯಿಸಲು ದೊಡ್ಡ ಭಾಂಡಿಗಳನ್ನು ಸಲೀಸಾಗಿ ಇಡಬಹುದಿತ್ತು.

ಇದು ಇನ್ನೂ 1960ರ ದಶಕದ ಮಾತು, ಆಗ ಗ್ಯಾಸ್ ಸ್ಟವ್‌ಗಳು ಒಂದು ಹೊಸ ಆಕರ್ಷಣೆ. ನಮ್ಮ ಮನೆಯಲ್ಲಿ ಒಂದಿತ್ತು. ತಂತ್ರಜ್ಞಾನದ ವಿಷಯದಲ್ಲಿ ತಾನು ಎಲ್ಲರಿಗಿಂತ ಮುಂದಿದ್ದೇನೆಂದು ನಮ್ಮಮ್ಮ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಳು. "ಏನೇ ಆದರೂ ನಾನು ಇಂಜಿನಿಯರ್ ಮಗಳು" ಎನ್ನುವಾಗ ಅವಳ ಕಣ್ಣುಗಳು ನಗು ತುಳುಕಿಸುತ್ತಿದ್ದವು. ಆದರೆ ತುಟಿಗಳು ಬಿಗಿದಿರುತ್ತಿದ್ದವು. ಅಂದಿನ ದಿನಗಳಲ್ಲಿ ಲಿವಿಂಗ್ ರೂಂಗಳಲ್ಲಿ ಗ್ಯಾಸ್ ಒಲೆಗಳ ಬಗ್ಗೆ ದೊಡ್ಡ ದೊಡ್ಡ ಚರ್ಚೆಗಳು ನಡೆಯುತ್ತಿದ್ದವು: ಇವು ನಿಜಕ್ಕೂ ಸುರಕ್ಷಿತವೇ? ಇಲ್ಲ, ಪೂರ್ತಿಯಾಗಿ ಸುರಕ್ಷಿತವಲ್ಲ ಎಂದು ತೀರ್ಮಾನಿಸಿದ್ದರು. ಆಗೀಗ ಸಿಲಿಂಡರ್ ಸಿಡಿಯೋದು, ಗ್ಯಾಸ್ ಲೀಕ್ ಆಗಿ ಬೆಂಕಿ ಅವಘಡಗಳು ನಡೆಯೋದು ಇವೆಲ್ಲಾ ಆಗುತ್ತಿದ್ದವು. ಸೀರೆಗಳಿಗೆ ಬೆಂಕಿ ಹೊತ್ತಿಕೊಂಡ ಭೀಕರ ಕಥೆಗಳೂ ಕೇಳಿಬರುತ್ತಿದ್ದವು, ಆದರೆ ಹಾಗೆ ಬೆಂಕಿ ಹೊತ್ತಿದವರಲ್ಲಿ ಬಹುತೇಕರು ನವವಿವಾಹಿತೆಯರು. ಇದರ ಸುತ್ತ ವರದಕ್ಷಿಣೆ ಕಿರುಕುಳದ ಒಂದು ಅಸ್ಪಷ್ಟ ಛಾಯೆಯಿರುತ್ತಿತ್ತು. ಇವೆಲ್ಲ ಕೇವಲ ಆಕಸ್ಮಿಕ ಅಪಘಾತಗಳಲ್ಲ ಎಂಬ ಸಾಧ್ಯತೆಗಳತ್ತ ಅದು ಬೊಟ್ಟು ಮಾಡುತ್ತಿತ್ತು.

ಗ್ಯಾಸ್‌ನಲ್ಲಿ ಮಾಡಿದರೆ ಅಡುಗೆಯ ರುಚಿ ಕೆಡಬಹುದೇ ಎನ್ನುವುದೂ ಸಹಜವಾಗಿಯೇ ಚರ್ಚೆಯಾಗುತ್ತಿತ್ತು. ಕಲ್ಲಿದ್ದಲು ಒಲೆ ಬಳಸುತ್ತಿದ್ದ



**ಅಭಿಜಿತ್ ಬ್ಯಾನರ್ಜಿ ಅವರು ಬಹುತೇಕ ಅಡುಗೆ ಮಾಡುವುದು ಮತ್ತು ಅದನ್ನು ಸೇವಿಸುವುದರ ಬಗ್ಗೆ ಯೋಚಿಸುತ್ತಿರುತ್ತಾರೆ. ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞರಾದ ಅವರಿಗೆ, ಅಂದಿನ ರಾತ್ರಿಯ ಭೋಜನದ ಯೋಜನೆಯಿಂದ ಆರಂಭವಾಗುವ ಆಲೋಚನೆಗಳು ಕೊನೆಗೆ ಆಹಾರದ ಬಳಕೆ, ಉತ್ಪಾದನೆ, ವಿತರಣೆ ಮತ್ತು ನಮ್ಮ ಕಾಲದ ವಿಶಾಲವಾದ ಆರ್ಥಿಕ ಸಮಸ್ಯೆಗಳೊಂದಿಗೆ ಅವುಗಳಿಗಿರುವ ನಿಕಟ ಸಂಬಂಧದ ಕುರಿತಾದ ಪ್ರಶ್ನೆಗಳಿಗೆ ಬಂದು ನಿಲ್ಲುತ್ತವೆ. 'ದಿ ಸಂಡೇ ಟೈಮ್ಸ್' ಪತ್ರಿಕೆಗೆ ಅವರು ಬರೆಯಲಿರುವ ಹೊಸ ಮಾಸಿಕ ಅಂಕಣವು ತಿನ್ನುವುದು ಮತ್ತು ಯೋಚಿಸುವುದು, ಆನಂದ ಮತ್ತು ಜವಾಬ್ದಾರಿ ಹಾಗೂ ಜಾಗತಿಕ ಆಹಾರ ಮತ್ತು ಭಾರತೀಯರ ಸ್ವಾದವನ್ನು ಕುರಿತಾಗಿರುತ್ತದೆ. ಈ ಅಂಕಣವು, ಜೀವನ ಮತ್ತು ಭೋಜನ ಎರಡಕ್ಕೂ ಬೇಕಾದ ರೆಸಿಪಿಗಳನ್ನು ನೀಡುತ್ತದೆ. ಇದಕ್ಕೆ ಶೆಯೆನ್ ಒಲಿವಿಯರ್ ಚಿತ್ರಗಳನ್ನು ಬರೆದಿದ್ದಾರೆ.**

ಮನೆಗಳಲ್ಲಿ ಬಹುಕಾಲ ಕಳೆದಿದ್ದ ನಾನು ಒಂದು ಸಂಗತಿಯನ್ನು ಗಮನಿಸಿದ್ದೆ. ಈ ಒಲೆಗಳಲ್ಲಿ ಕೆಂಡ ಪೂರ್ತಿ ಆರಿಹೋಗೋದಕ್ಕೆ ತುಂಬಾ ಸಮಯ ತೆಗೆದುಕೊಳ್ಳುತ್ತಿತು. ಆ ಕೆಂಡದಲ್ಲಿ ಹುರುಳಿಕಾಯಿ, ಮೆಣಸಿನಕಾಯಿ ಅಥವಾ ಆಲೂಗಡ್ಡೆಯನ್ನು ಹಾಕಿ, ಒಂದೆರಡು ಗಂಟೆಯ ನಂತರ ಅವನ್ನು ಹೊರತೆಗೆದರೆ ಅವು ಪೂರ್ತಿ ಬೆಂದು, ಸ್ವಲ್ಪ ಕರಕಲಾಗಿ, ಹೊಗೆಯ ಸೊಗಸಾದ ಘಮದಿಂದ ಕೂಡಿರುತ್ತಿದ್ದವು. ಒಂದು ಚಿಟಿಕೆ ಉಪ್ಪು ಮತ್ತು ಸ್ವಲ್ಪ ಸಾಸಿವೆ ಎಣ್ಣೆ ಸವರಿಕೊಂಡು ತಿಂದರೆ ಅದರ ರುಚಿಯೇ ರುಚಿ. ಗ್ಯಾಸ್ ಸ್ಟವ್‌ನಲ್ಲಿ ಅದಕ್ಕೆ ಅವಕಾಶವಿಲ್ಲ. ಏಕೆಂದರೆ ನಾಬ್ ತಿರುಗಿಸಿದ ತಕ್ಷಣ ಅದು ಆರಿಹೋಗುತ್ತಿತ್ತು. ಆದರೆ ಗ್ಯಾಸ್ ಸ್ಟವ್‌ನಲ್ಲಿ ಕೆಲಸ ತುಂಬಾ ಬೇಗ ಆಗುತ್ತಿತ್ತು. ಎಣ್ಣೆ ಬೇಗನೆ ಕಾಯುತ್ತಿತ್ತು, ಹಾಗಾಗಿ ಅನಿರೀಕ್ಷಿತವಾಗಿ ಬಂದ ಅತಿಥಿಗೆ ಕಚೋರಿಗಳನ್ನು ತಕ್ಷಣ ಕರಿದು ಕೊಡಬಹುದಿತ್ತು. ನಾನು ತುಂಬಾ ವೇಗವಾಗಿ ಅಡುಗೆ ಮಾಡುತ್ತೇನೆ ಎಂದು ನನಗೊಂದು ಹೆಮ್ಮೆಯಿದೆ. ಆದರೆ ನನ್ನ ದೊಡ್ಡಮ್ಮ–ಚಿಕ್ಕಮ್ಮಂದಿರು ಮತ್ತು ಅವರ ತಲೆಮಾರಿನವರು ಆಲೂಗಡ್ಡೆ ಅಥವಾ ಹೂಕೋಸಿನ ಪಲ್ಯದ ಜೊತೆಗೆ, ರುಚಿರುಚಿಯಾದ ಕಚೋರಿ ಅಥವಾ ಲೂಚಿಗಳನ್ನು (ಪೂರ್ತಿ ಮೈದಾ ಹಿಟ್ಟಿನಿಂದ ಮಾಡೋ ಬೆಂಗಾಲಿ ಶೈಲಿಯ ಪೂರಿ; ಪೂರ್ತಿ ಸ್ಟಾರ್ಚ್ ಮತ್ತು ತುಂಬಾ ಎಣ್ಣೆ. ಆದ್ರೆ ತಿನ್ನೋಕೆ ಮಾತ್ರ ಒಳ್ಳೆ ರುಚಿ) ಮಾಡುತ್ತಿದ್ದ ವೇಗಕ್ಕೆ ಸಾಟಿಯೇ ಇಲ್ಲ! (ನನಗೆ ಗೊತ್ತಿರುವ ಒಬ್ಬರಿಗೆ ಈಗ ಸುಮಾರು 90 ವರ್ಷ, ಈಗಲೂ ನಾನು




*Illustrated by Cheyenne Olivier*

ಹೋದಾಗಲೆಲ್ಲಾ ಅವರು ಹಾಗೆಯೇ ಅಡುಗೆ ಮಾಡಿ ಬಡಿಸುತ್ತಾರೆ).

ಆದರೂ, ಗ್ಯಾಸ್ ಭವಿಷ್ಯದ ತಂತ್ರಜ್ಞಾನ ಎನ್ನುವುದರಲ್ಲಿ ಅನುಮಾನವಿಲ್ಲ. ಅವಿಭಕ್ತ ಕುಟುಂಬಗಳು ವಿಭಜಿತ ಕುಟುಂಬಗಳಾಗಿ, ಜನ ಸಣ್ಣ ಅಡುಗೆಮನೆ ಮತ್ತು ಸಣ್ಣ ಎಕ್ಸಾಸ್ಟ್‌ಗಳು ಇರುವ ಫ್ಲಾಟ್‌ಗಳಲ್ಲಿ ಇರತೊಡಗಿದರು. ಗ್ಯಾಸ್ ಹೆಚ್ಚು ಶುದ್ಧವಾಗಿರುತ್ತಿತ್ತು ಮತ್ತು ಅದಕ್ಕೆ ಕಡಿಮೆ ಜಾಗ ಸಾಕಿತ್ತು. ಅದು ಅವರಿಗೆ ಆದ್ಯತೆಯ ಸಂಗತಿ. ಆದರೆ ಆಗ ಗ್ಯಾಸ್ ಇನ್ನೂ ತುಂಬಾ ದುಬಾರಿಯಾಗಿದ್ದು, ರೇಷನ್ನಿನಲ್ಲಿ ವಿತರಿಸುತ್ತಿದ್ದರು. ಗ್ಯಾಸ್ ಮುಗಿದ ನಂತರ ಎಷ್ಟೋ ದಿನಗಳು ಸಿಲಿಂಡರ್ ಸಿಗದೇ ಇದ್ದ ದಿನಗಳೂ ಇದ್ದವು. ಹೆಂಗಸರು ಗ್ಯಾಸ್ ವಿತರಿಸುವವನಿಗೆ ಸ್ವಲ್ಪ ಭಕ್ಷೀಸು ನೀಡಿ, ಅಥವಾ ಒಳ್ಳೆಯ ಮಾತುಗಳನ್ನಾಡಿ ಬೇರೆಯವರ ಕೋಟಾದ ಸಿಲಿಂಡರನ್ನು ತಾವು ಪಡೆದುಕೊಳ್ಳುತ್ತಿದ್ದ ವರದಿಗಳೂ ಇವೆ. ಇನ್ನು ಕೆಲವರಿಗೆ, ವಿಶೇಷವಾಗಿ ಅವಿಭಕ್ತ ಕುಟುಂಬಗಳಿಗೆ, ತಿಂಗಳಿಗೆ ಒಂದು ಸಿಲಿಂಡರ್ ಸಾಲುತ್ತಿರಲಿಲ್ಲ. ನಮ್ಮ ಮನೆ ಪಕ್ಕದಲ್ಲಿ ಒಳ್ಳೆಯ ಮಹಿಳೆಯೊಬ್ಬಳು ಬೀದಿ ಬದಿಯಲ್ಲಿ ಸಣ್ಣ ಹೋಟೆಲ್ ನಡೆಸುತ್ತಿದ್ದಳು. ಮೀನು-ಅನ್ನ-ಬೇಳೆಸಾರು-ಪಲ್ಯ ಇಷ್ಟಕ್ಕೆ 15 ರೂಪಾಯಿ, ಮೀನಿನ ಬದಲು ಬಾತುಕೋಳಿ ಮೊಟ್ಟೆಯ ಪಲ್ಯ ತೆಗೆದುಕೊಂಡರೆ 3 ರೂಪಾಯಿ ಕಡಿಮೆ ತೆಗೆದುಕೊಳ್ಳುತ್ತಿದ್ದಳು. ಆಕೆ 1980ರ ದಶಕದ ಕೊನೆಯವರೆಗೂ ಸಣ್ಣ ಕಲ್ಲಿದ್ದಲು ಒಲೆ ಮತ್ತು ಸೀಮೆಎಣ್ಣೆ ಸ್ಟವ್‌ನಲ್ಲೇ ಅಡುಗೆ ಮಾಡುತ್ತಿದ್ದಳು. ಆ ದಾರಿಯಲ್ಲಿ ಹಾದುಹೋಗುವಾಗ ಅವರ 'ಮಾಚೆರ್ ಝೋಲ್' (ಮೀನಿನ ಸಾರು) ನಿಂದ ಬರುತ್ತಿದ್ದ ಚೆನ್ನಾಗಿ ಹುರಿದ ಈರುಳ್ಳಿ ಪೇಸ್ಟ್‌ನ ಸಿಹಿ ಮತ್ತು ಖಾರದ ಘಮಘಮ ಪರಿಮಳವನ್ನು ಸೀಮೆಎಣ್ಣೆ ಉರಿಯುವ ಘಾಟು ನುಂಗಿಬಿಡುತ್ತಿತ್ತು. ನಾನು ಯಾವಾಗಲಾದರೂ ಒಮ್ಮೆ ಅಲ್ಲಿ ತಿನ್ನಬೇಕು ಎಂದುಕೊಂಡಿದ್ದೆ, ಆದರೆ ಅದು ಸಾಧ್ಯವಾಗಲೇ ಇಲ್ಲ.

ಆದರೆ ಕ್ರಮೇಣ ದೇಶದಲ್ಲಿ ವಿದೇಶಿ ವಿನಿಮಯದ ಕೊರತೆಯ ಸಮಸ್ಯೆ ಕಡಿಮೆಯಾಗಿ ಗ್ಯಾಸ್ ಸಂಪರ್ಕ ಸಿಗುವುದು ಹೆಚ್ಚು ಸಲೀಸಾಯಿತು. ಆಗ ನನ್ನ ಚಿಕ್ಕಮ್ಮನ ಅತ್ಯಂತ ಸಂಪ್ರದಾಯಸ್ಥ ಅತ್ತೆ-ಮಾವಂದಿರು ಸಹ ಅನಿವಾರ್ಯವಾಗಿ ಗ್ಯಾಸ್‌ಗೆ ಶರಣಾಗಲೇ ಬೇಕಾಯಿತು. ಇಂದು ಭಾರತದಲ್ಲಿ 32 ಕೋಟಿ ಎಲ್‌ಪಿಜಿ ಸಂಪರ್ಕಗಳಿವೆ. ಜೊತೆಗೆ 1 ಕೋಟಿಗೂ ಹೆಚ್ಚು ಜನರಿಗೆ ಪೈಪುಗಳ ಮೂಲಕ ಗ್ಯಾಸ್ ಸರಬರಾಜಾಗುತ್ತದೆ. 10 ಕೋಟಿ ಜನ ಸರ್ಕಾರದ 'ಉಜ್ವಲ' ಯೋಜನೆಯಡಿಯಲ್ಲಿ ದಾಖಲಾಗಿದ್ದಾರೆ. ಈ ಯೋಜನೆಯಲ್ಲಿ ಕಡಿಮೆ ಆದಾಯದ ಕುಟುಂಬಗಳಿಗೆ ಸುಮಾರು ಶೇಕಡಾ 20ರಷ್ಟು ಸಬ್ಸಿಡಿ ಸಿಗುತ್ತದೆ. ಬಡವರು ಬಳಸುವ ಕಲ್ಲಿದ್ದಲು, ಬೆರಣಿ ಅಥವಾ ಕಟ್ಟಿಗೆಯಷ್ಟು ಗ್ಯಾಸ್ ವಾತಾವರಣವನ್ನು ಕಲುಷಿತಗೊಳಿಸುವುದಿಲ್ಲ. ಆದ್ದರಿಂದ ಇದು ಜಗತ್ತಿಗೂ ಒಳ್ಳೆಯದು. ಹಾಗೆಯೇ ಅದು ಅಡುಗೆ ಮಾಡುವವರಿಗೆ ಮತ್ತು ಅವರ ಕುಟುಂಬಕ್ಕೂ ಒಳ್ಳೆಯದು ಅನ್ನೋ ಆಲೋಚನೆ ಈ ಯೋಜನೆಯ ಹಿಂದಿದೆ. ನಮ್ಮ ಮನೆಯ ಪಕ್ಕದಲ್ಲಿದ್ದ ಆ ಸಣ್ಣ ಹೋಟೆಲ್ ಇನ್ನೂ ಉಳಿದುಕೊಂಡಿದ್ದರೆ ಬಹುಶಃ ಬಹುತೇಕ ಬೀದಿ ಬದಿಯ ವ್ಯಾಪಾರಿಗಳಂತೆ ಅವರು ಕೂಡ ಗ್ಯಾಸ್ ಬಳಸಲು ಪ್ರಾರಂಭಿಸಿರಬಹುದು.

ಆದರೆ ಗ್ಯಾಸ್ ನಮ್ಮ ಆರ್ಥಿಕತೆಗೆ ತುಂಬಾ ದೊಡ್ಡ ಹೊರೆಯೂ ಹೌದು. ನಾವು ಬಳಸುವ ಎಲ್‌ಪಿಜಿಯ ಹೆಚ್ಚಿನಂಶ ಆಮದಾಗಬೇಕು. ಒಟ್ಟಾರೆ ಆಮದಿನ ಶೇಕಡ 90ರಷ್ಟು ಭಾಗ ಹಾರ್ಮುಜ್ ಜಲಸಂಧಿಯ ಮೂಲಕವೇ ಹಾದುಬರುವುದು. ಅದೇ ಕಾರಣಕ್ಕಾಗಿ ಗ್ಯಾಸ್ ಮುಗಿದುಹೋದರೆ ಏನಾಗುತ್ತದೆ ಎಂಬ ಕಥೆಗಳು ಮತ್ತು ಮೀಮ್ಸ್‌ಗಳಿಂದ ಇಂಟರ್ನೆಟ್ ತುಂಬಿ ತುಳುಕುತ್ತಿವೆ. ನಿಜ ಈ ಬಿಕ್ಕಟ್ಟು ಕೊನೆಗೊಳ್ಳುತ್ತದೆ. ಆದರೆ ತೈಲದ ಫ್ಯೂಚರ್ಸ್ ಮಾರುಕಟ್ಟೆಯ ವ್ಯಾಪಾರಿಗಳು ಹೇಳುತ್ತಿರುವುದು ನಿಜವಾದರೆ, ಯುದ್ಧ ತಕ್ಷಣ ನಿಂತುಬಿಡುವುದಿಲ್ಲ. ಆಧುನಿಕ ಹಣಕಾಸಿನ ಪರಿಭಾಷೆ ಅಷ್ಟಾಗಿ ತಿಳಿಯದವರಿಗೋಸ್ಕರ, ಫ್ಯೂಚರ್ಸ್ ಮಾರುಕಟ್ಟೆ ಅನ್ನೋದು ಮುಂದೆ ಮೇ, ಜೂನ್ ಅಥವಾ ಮುಂದಿನ ಜನವರಿಯಲ್ಲಿ ನೀವು ಕೊಳ್ಳುವುದಕ್ಕೆ ಇಂದೇ, ಇಂತಿಷ್ಟು ತೈಲ ಬೇಕೆಂದು ಇಂದಿನ ಬೆಲೆಯಲ್ಲಿ ಒಪ್ಪಂದ ಮಾಡಿಕೊಳ್ಳಬಹುದಾದ ಒಂದು ವ್ಯವಸ್ಥೆ.

ಫ್ಯೂಚರ್ಸ್ ಮಾರುಕಟ್ಟೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಕಚ್ಚಾ ತೈಲ ಬಳಸೋ ವೃತ್ತಿಪರರಿರುತ್ತಾರೆ. ಒಂದುವೇಳೆ, ಅವರಿಗೆಲ್ಲಾ ಈ ಬಿಕ್ಕಟ್ಟು ಬೇಗ ಮುಗಿಯುತ್ತದೆ ಅಂತ ಅನಿಸಿದ್ದರೆ, ಮೇ ತಿಂಗಳಲ್ಲಿ ವಿತರಣೆ ಬೆಲೆ ಇಂದಿನ ಮಾರುಕಟ್ಟೆ ಬೆಲೆಗಿಂತ ಗಣನೀಯವಾಗಿ ಕಡಿಮೆಯಿರುತ್ತಿತ್ತು. ಆದರೆ ಹಾಗೆ ಆಗಿಲ್ಲ. ಜೂನ್ ತಿಂಗಳಿನಲ್ಲೂ ಫ್ಯೂಚರ್ ಮಾರುಕಟ್ಟೆಯಲ್ಲಿ ಇಂಧನದ ಬೆಲೆಗಳು ಅಷ್ಟೇನೂ ಕಡಿಮೆಯಾಗಿಲ್ಲ. ಜುಲೈನಲ್ಲಿ ಸ್ವಲ್ಪ ಪರವಾಗಿಲ್ಲ. ಆದರೆ ಡೊನಾಲ್ಡ್ ಟ್ರಂಪ್ ಮತ್ತು ನೆತನ್ಯಾಹು ಈ ಗೊಂದಲವನ್ನು ಸೃಷ್ಟಿಸುವ ಮೊದಲು, ಅಂದರೆ 2025ರ ಡಿಸೆಂಬರ್‌ನಲ್ಲಿದ್ದ ಬೆಲೆಗೆ ಹೋಲಿಸಿದರೆ ಅದು ಇನ್ನೂ ಶೇಕಡಾ 50ರಷ್ಟು ಹೆಚ್ಚಾಗಿದೆ. ಅಷ್ಟೇ ಅಲ್ಲ 2027ರ ಜನವರಿಯಲ್ಲೂ ಸಹ ತೈಲದ ಬೆಲೆ ಶೇಕಡ 20ರಷ್ಟು ಹೆಚ್ಚೇ ಇರುತ್ತದೆ ಎಂದು ಮಾರುಕಟ್ಟೆ ಸೂಚಿಸುತ್ತಿದೆ.

ಮಾರುಕಟ್ಟೆ ಪರಿಣತರ ಲೆಕ್ಕಾಚಾರಗಳಲ್ಲೂ ತಪ್ಪುಗಳಾಗುತ್ತವೆ. ಹಿಂದೆ ದೊಡ್ಡ ದೊಡ್ಡ ತಪ್ಪುಗಳು ಆಗಿವೆ. (ನಾನು ಶೇರ್ ಮಾರ್ಕೆಟ್‌ನ ಮೂರ್ಖತನಗಳ ಬಗ್ಗೆ ಉಪನ್ಯಾಸವೊಂದನ್ನು ಸಿದ್ಧಪಡಿಸುತ್ತಿರುವ ಹೊತ್ತಿನಲ್ಲೇ ಇದನ್ನು ಬರೆಯುತ್ತಿದ್ದೇನೆ!) ಆದರೆ ಮಾರುಕಟ್ಟೆ ಬೆಲೆಗೆ ಒಂದು ಅನುಕೂಲವಿದೆ. ಅದು ಅಪಾರ ಸಂಖ್ಯೆಯ ಜನರ ಅಭಿಪ್ರಾಯವನ್ನು ಕ್ರೋಢೀಕರಿಸಿರುತ್ತದೆ. ಹಾಗಾಗಿ ಸದ್ಯಕ್ಕೆ ನಮಗಿರುವ ಅತ್ಯಂತ ವಿಶ್ವಾಸಾರ್ಹವಾದ ಆಯ್ಕೆಯೆಂದರೆ ಇದು. ಫ್ಯೂಚರ್ಸ್ ಮಾರ್ಕೆಟ್ ಸೂಚಿಸುತ್ತಿರುವುದನ್ನು ನಾವು

ಗಂಭೀರವಾಗಿ ಪರಿಗಣಿಸಿದರೆ, ಯುದ್ಧವು ಕೊನೆಗೊಳ್ಳಬಹುದು (ಟ್ರಂಪ್ ಆ ನಿಟ್ಟಿನಲ್ಲಿ ಒಂದಿಷ್ಟು ಒತ್ತಡವನ್ನು ಎದುರಿಸುತ್ತಿರುವಂತೆ ತೋರುತ್ತಿದೆ). ಆದರೆ ಒಟ್ಟಾರೆ ಹಗೆತನ ತಿಳಿಯಾಗಲು ಇನ್ನು ಬಹಳ ಸಮಯ ಹಿಡಿಯುತ್ತದೆ. ಅಮೇರಿಕಾ ಮತ್ತು ಇಸ್ರೇಲ್ ಏಕಪಕ್ಷೀಯವಾಗಿ ಯುದ್ಧ ಘೋಷಿಸಿದಾಗ ನಮ್ಮ ತಣ್ಣನೆಯ ಪ್ರತಿಕ್ರಿಯೆಯನ್ನು ಗಮನಿಸಿಯೂ (ಪ್ರಧಾನಿ ಮೋದಿಯವರನ್ನು ತಬ್ಬಿಕೊಳ್ಳುವ ನಡುವೆಯೇ ಬೀಬಿ ನೆತನ್ಯಾಹು ಈ ಯೋಜನೆಗೆ ಅಂತಿಮ ರೂಪ ನೀಡುತ್ತಿದ್ದರು ಎಂಬುದು ಸ್ಪಷ್ಟ), ಗೆಳೆಯ ಭಾರತದೊಂದಿಗೆ ಇರಾನ್ ಸೌಜನ್ಯದಿಂದ ನಡೆದುಕೊಳ್ಳುತ್ತಿದೆ. ಅದು ಅದರ ದೊಡ್ಡ ಗುಣ. ಆದರೆ ಮಾರುಕಟ್ಟೆಗಳು ಸೂಚಿಸುವಂತೆ ಜಾಗತಿಕ ಇಂಧನದ ಬೆಲೆ ಸುಮಾರು 20%ರಷ್ಟು ಹೆಚ್ಚಾಗಿಯೇ ಉಳಿದುಕೊಂಡರೆ ನಮ್ಮ ಸಮಸ್ಯೆ ಉಲ್ಬಣಿಸುತ್ತದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಎರಡನ್ನೂ ವಿಪರೀತವಾಗಿ ಖರೀದಿಸುವ ದೇಶಗಳಲ್ಲಿ ಭಾರತವೂ ಒಂದು. ಎಲ್ಲವೂ ನಿಯಂತ್ರಣದಲ್ಲಿದೆ ಎಂದು ಸರ್ಕಾರ ಭರವಸೆ ನೀಡುತ್ತಿದ್ದರೂ, ಬಡವರಿಗೆ ಊಟಕ್ಕೆ ಕಷ್ಟವಾಗುತ್ತಿದೆ ಅನ್ನೋದು ಗೊತ್ತಿರುವ ಸಂಗತಿ (ಬಹುಶಃ ಮುಂದೆ ಸಿಗದೇ ಹೋಗಬಹುದು ಅನ್ನುವ ಆತಂಕದಿಂದ ಕೊಳ್ಳುವ ಶಕ್ತಿಯಿರುವವರು ಮುಗಿಬಿದ್ದು, ವಸ್ತುಗಳನ್ನು ಸೇರಿಸಿಟ್ಟುಕೊಳ್ಳುತ್ತಿರುವುದು ಇದಕ್ಕೆ ಕಾರಣವಿರಬಹುದು). ಈ ಮಾಹಿತಿಗಳಿಂದ ಒಂದಂಶವಂತೂ ಸ್ಪಷ್ಟ. ಗ್ಯಾಸ್ ಪೂರೈಕೆ ಸುಗಮಗೊಂಡು, ಹಣಕೊಟ್ಟು ಕೊಳ್ಳಬಲ್ಲವರಿಗೆ ಸಿಲಿಂಡರ್‌ಗಳು ಸಿಗುವಂತಾದರೂ, ಪೆಟ್ರೋಲ್, ಡೀಸೆಲ್ ಮತ್ತು ಗೃಹಬಳಕೆಯ ಎಲ್‌ಪಿಜಿ ಬೆಲೆಗಳೆಲ್ಲವೂ ತುಟ್ಟಿಯಾಗುವುದರಲ್ಲಿ ಅನುಮಾನವಿಲ್ಲ.

ಬಹುಶಃ ನಾನು ಎಲ್ಲವನ್ನೂ ಸಂಶಯದಿಂದ ನೋಡುತ್ತಿರಬಹುದು. ಆದರೆ, ಚುನಾವಣೆಯ ಫಲಿತಾಂಶ ನೋಡಿದರೆ, ಬೆಲೆ ಏರಿಕೆ, ಮುಂತಾದ್ದು ಯಾವಾಗ ಆಗುತ್ತೆ ಅಂತ ಊಹಿಸೋದು ಕಷ್ಟವೇನಲ್ಲ. ಗ್ಯಾಸ್, ಡೀಸೆಲ್ ಇತ್ಯಾದಿಗಳ ಬೆಲೆ ಏರಿದಾಗ ದುರದೃಷ್ಟವೆಂದರೆ ಆಹಾರ ಪದಾರ್ಥಗಳ ಬೆಲೆಗಳೂ ಹೆಚ್ಚಾಗುತ್ತವೆ. ಯಾಕೆಂದರೆ ಆಹಾರದ ಬೆಲೆ ಸಾರಿಗೆ ವೆಚ್ಚದೊಂದಿಗೆ ತಕ್ಕೆ ಹಾಕಿಕೊಂಡಿದೆ. ಕೊನೆಗೆ ಡೊನಾಲ್ಡ್ ಟ್ರಂಪ್ ಅವರ ಈ ಅನಗತ್ಯ ಪುರುಷಾಹಂಕಾರಕ್ಕೆ ಮತ್ತೆ ಬೆಲೆ ತೆರುವವರು ಜಗತ್ತಿನ ಬಡವರೇ ಆಗಿರುತ್ತಾರೆ.

ಈ ಜಾಗತಿಕ ದುರಂತಕ್ಕಾಗಿ ಸರ್ಕಾರವನ್ನು ದೂಷಿಸುವುದು ನಮ್ಮ ಉದ್ದೇಶವಲ್ಲ. ಬದಲಿಗೆ ಪೆಟ್ರೋಲಿಯಂ ಮೇಲಿನ ನಮ್ಮ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬೇಕು. ಅದು ತುರ್ತಾಗಿ ಆಗಬೇಕು. ಆದರೆ ಕಲ್ಲಿದ್ದಲಿಗೆ ಮರಳುವುದು ಮಾತ್ರ ಖಂಡಿತಾ ಬೇಡ. ನಮ್ಮದು ಈಗಾಗಲೇ ಜಗತ್ತಿನಲ್ಲಿ ಅತ್ಯಂತ ಕಲುಷಿತಗೊಂಡಿರುವ ಗಾಳಿ. ಲಕ್ಷಾಂತರ ಜನರನ್ನು ಕೊಲ್ಲುತ್ತಿದೆ. ನವೀಕರಿಸುವ ಇಂಧನವನ್ನು ಬಳಸುವ ಪ್ರಯತ್ನ ಈಗಾಗಲೆ ಪ್ರಾರಂಭವಾಗಿದೆ. ಆದರೆ ಜನರೂ ವೈಯಕ್ತಿಕ ಮಟ್ಟದಲ್ಲಿ ತಮ್ಮ ಕೈಲಾದಷ್ಟು ಪ್ರಯತ್ನಿಸಬೇಕು. ಅದಕ್ಕೆ ಅವರನ್ನು ಪ್ರೋತ್ಸಾಹಿಸಬೇಕು. ಸೋಲಾರ್ ಪ್ಯಾನಲ್‌ಗಳನ್ನು ಬಳಸಿ ಬ್ಯಾಟರಿ ಚಾರ್ಜ್ ಮಾಡಿ ಸೌರಶಕ್ತಿಯನ್ನು ಬಳಸಬಹುದು. ಅದು ಈಗ ಭಾರತದಲ್ಲಿ ಹಲವೆಡೆ ಬಳಕೆಯಲ್ಲಿದೆ. ಈಗಿನ ಬಿಕ್ಕಟ್ಟಿನಲ್ಲಿಯೇ ಸರ್ಕಾರ ಸೂಕ್ತ ನೀತಿಯನ್ನು ರೂಪಿಸಿದರೆ, ಒಳ್ಳೆಯ ಬದಲಾವಣೆ ತರುವುದಕ್ಕೂ ಸಾಧ್ಯವಾಗಬಹುದು. ಅಡುಗೆ ಮಾಡೋದಕ್ಕೆ ಅಗ್ಗದ ಸೋಲಾರ್ ಬಾಕ್ಸ್ ಕುಕ್ಕರ್‌ಗಳು ಲಭ್ಯವಿವೆ. ಸೋಲಾರ್ ಪ್ಯಾನಲ್ ಮತ್ತು ಬ್ಯಾಟರಿಗೆ ಕನೆಕ್ಟ್ ಮಾಡಬಹುದಾದ ಕುಕ್‌ಟಾಪ್‌ಗಳೂ ಇವೆ. ಅವುಗಳನ್ನು ಮಾಮೂಲಿ ಎಲೆಕ್ಟ್ರಿಕ್ ಸ್ಟವ್ ರೀತಿಯಲ್ಲೇ ಬಳಸಿ ಕಚೋರಿ ಕರಿಯಬಹುದು. ಅಥವಾ ಪ್ರೆಶರ್ ಕುಕ್ಕರ್ ಬಳಸಿ ಅಡುಗೆಮಾಡಬಹುದು. ಆದರೂ ಇದನ್ನು ಎಲ್ಲರೂ ಬಳಸುತ್ತಿಲ್ಲ. ಅದಕ್ಕೆ ಒಂದು ಕಾರಣ ಅವು ಸ್ವಲ್ಪ ದುಬಾರಿ (15,000 ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು). ಅದಕ್ಕೆ ಒಂದು ಪರಿಹಾರವೆಂದರೆ 'ಪೇ-ಆಸ್-ಯೂ-ಗೋ' ಮಾದರಿಯನ್ನು ಅಳವಡಿಸಿಕೊಳ್ಳಬಹುದು. ಅಂದರೆ ಗ್ರಾಹಕರು ಇದನ್ನು ಸಾಲವಾಗಿ ತೆಗೆದುಕೊಂಡು ಪ್ರತಿ ತಿಂಗಳೂ ಕಂತು ಕಟ್ಟುತ್ತಾ, ಬಳಸುತ್ತಾ ಹೋಗಬಹುದು. ಸಾಲ ತೀರುವವರೆಗೂ ಹೀಗೆ ಮಾಡಬಹುದು. (ಕಂತು ಕಟ್ಟೋದನ್ನು ತಪ್ಪಿಸಿದರೆ ರಿಮೋಟ್ ವ್ಯವಸ್ಥೆಯಿಂದಲೇ ಅದನ್ನು ನಿಷ್ಕ್ರಿಯಗೊಳಿಸಬಹುದು). ಇದರಿಂದ ಜನರಿಗಿರುವ ದುಡ್ಡಿನ ಸಮಸ್ಯೆಯನ್ನು ಪರಿಹರಿಸಬಹುದು. ಬಹುಶಃ ಸರ್ಕಾರ ಅಂತಹ ಸಾಲಗಳಿಗೆ ಸಬ್ಸಿಡಿಯನ್ನೂ ನೀಡಬಹುದು. ಪ್ರಪಂಚದಾದ್ಯಂತ ಆಗಿರುವ ಹಲವು ಅಧ್ಯಯನಗಳ ಪ್ರಕಾರ, ಈ 'ಪೇ-ಆಸ್-ಯೂ-ಗೋ' ವ್ಯವಸ್ಥೆಯಲ್ಲಿ ಮರುಪಾವತಿ ಮಾಡೋ ಸಂಖ್ಯೆ ಹೆಚ್ಚಿದೆ. ಸಬ್ಸಿಡಿ ಕೊಡೋದರಿಂದ ಈ ಪ್ರಕ್ರಿಯೆ ಇನ್ನೂ ತ್ವರಿತಗೊಳ್ಳುತ್ತದೆ.

ಆದರೆ ಅತ್ಯಂತ ಅಗ್ಗದ ಬಾಕ್ಸ್ ಕುಕ್ಕರ್ ಬಳಸಿಯೂ ಅಷ್ಟೇ ಸೊಗಸಾದ ದಾಲ್-ಚಾವಲ್ (ಬೇಳೆ ಸಾರು-ಅನ್ನ) ಮಾಡಬಹುದು ಅಂತ ಕೇಳಿದ್ದೇನೆ. ಇದರ ಜೊತೆಗೆ ನನ್ನದೊಂದು ಸಣ್ಣ ಸೇರ್ಪಡೆ ಅಂದ್ರೆ, ಇದರಲ್ಲಿ ಅದ್ಭುತವಾಗಿ ಬಾಟಿ-ಚೋರ್ಚೋರಿ' ಕೂಡ ಮಾಡಬಹುದು! ಬಾಟಿ-ಚೋರ್ಚೋರಿ ಅಂದ್ರೆ ಒಂದು ಮುಚ್ಚಿರೋ ಪಾತ್ರೆಯಲ್ಲಿ ತರಕಾರಿಗಳನ್ನು (ಬೇಕಿದ್ರೆ ಸಿಗಡಿ ಮೀನು ಕೂಡ ಹಾಕಬಹುದು) ಇಟ್ಟು ಅದರ ರಸದಲ್ಲಿಯೇ ಬೇಯಿಸೋ ಒಂದು ಸೊಗಸಾದ ಅಡುಗೆ. ಈ ಪಾತ್ರೆಯನ್ನು ಅನ್ನ ಅಥವಾ ಬೇಳೆ ಬೇಯೋ ದೊಡ್ಡ ಪಾತ್ರೆಯ ಒಳಗೇ ಇಟ್ಟು ಆರಾಮಾಗಿ ತಯಾರಿಸಬಹುದು.

ನೀವು ಒಂದಿಷ್ಟು ಪಕೋಡಾಗಳನ್ನು ಕರಿಯುವುದಕ್ಕೆ ಗ್ಯಾಸ್ ಸ್ಟವ್ ಬಳಸಿದರೂ ಸಹ, ಕನಿಷ್ಠ ಅರ್ಧದಷ್ಟು ಅಡುಗೆಗೆ ಸೋಲಾರ್ ಬಳಸಿದರೆ ನಿಮ್ಮ ಸಿಲಿಂಡರನ್ನು ಇನ್ನೂ ಹೆಚ್ಚು ಕಾಲ ಬಳಸಬಹುದು. ಜೊತೆಗೆ ಆ ಮಟ್ಟಿಗೆ ಪರಿಸರ ಮಾಲಿನ್ಯ ಕಡಿಮೆಯಾಗುತ್ತದೆ.

## ಬಾಟಿ ಚೋರ್ಚೋರಿ ರೆಸಿಪಿ

ಬಾಟಿ ಚೋರ್ಚೋರಿ ಮಾಡೋದಕ್ಕೆ ಮೊದಲಿಗೆ ನಿಮ್ಮ ಪ್ರೆಶರ್ ಕುಕ್ಕರ್ ಒಳಗಡೆ ಹಿಡಿಸುವಂತಹ, ಬಿಗಿ ಮುಚ್ಚಳ ಇರುವ ಒಂದು ಸ್ಟೀಲ್ ಪಾತ್ರೆ ತಗೊಳ್ಳಿ (ಉದಾಹರಣೆಗೆ ಟಿಫಿನ್ ಕ್ಯಾರಿಯರ್).

ಆ ಬಾಕ್ಸ್‌ಗೆ 2 ಚಮಚ ಸಾಸಿವೆ ಎಣ್ಣೆ, 1 ಚಮಚ ಕಲೋಂಜಿ ಹಾಕಿ.

200 ಗ್ರಾಂ ಆಲೂಗಡ್ಡೆ ಸಿಪ್ಪೆ ತೆಗೆದು, ಮಧ್ಯದ ಬೆರಳಿನ ಎರಡರಷ್ಟು ದೊಡ್ಡದಾಗಿ ತುಂಡು ಮಾಡಿಕೊಳ್ಳಿ. ಹಾಗೆ 200 ಗ್ರಾಂ ಹೂಕೋಸನ್ನು ಉದ್ದುದ್ದ ಕತ್ತರಿಸಿಕೊಳ್ಳಿ. ಎಲ್ಲವನ್ನು ಬಾಕ್ಸ್‌ನಲ್ಲಿ ಹಾಕಿ. ಜೊತೆಗೆ 2/3 ಕಪ್ ಹೆಚ್ಚಿದ ಟೊಮ್ಯಾಟೋ, ಎರಡು ಹಸಿಮೆಣಸಿನಕಾಯಿ, 1 ಚಮಚ ಉಪ್ಪು ಮತ್ತು ಅರ್ಧ ಚಮಚ ಅರಿಶಿಣ ಸೇರಿಸಿ. ಕೊನೆಗೆ 2/3 ಕಪ್ ನೀರು ಹಾಕಿ, ಚೆನ್ನಾಗಿ ಮಿಕ್ಸ್ ಮಾಡಿ ಮುಚ್ಚಳವನ್ನು ಗಟ್ಟಿಯಾಗಿ ಮುಚ್ಚಿ. ಬಾಕ್ಸನ್ನು ಕುಕ್ಕರಿನ ಒಳಗಡೆ ಇಡಿ.

ಅದರ ಜೊತೆಗೆ ನೀವು ನಿಮಗೆ ಬೇಕಾದ ಯಾವುದೇ ಬೇಳೆ ಅಥವಾ ಕಾಳನ್ನೂ ಹಾಕಬಹುದು (ಉದಾಹರಣೆಗೆ: ರಾತ್ರಿ ಇಡೀ ನೆನೆಸಿದ 2 ಕಪ್ ಕಪ್ಪು ಕಡಲೆಕಾಳು 2 ಚಮಚ ಉಪ್ಪು ಮತ್ತು 4 ಕಪ್ ನೀರು ಹಾಕಿ ಇಡಿ). 20 ನಿಮಿಷದ ನಂತರ, ಬಾಟಿ ಚೋರ್ಚೋರಿಯನ್ನು ಹೊರಗೆ ತೆಗೆದು, ಅದರ ಮೇಲೆ ತಾಜಾ ಕೊತ್ತಂಬರಿ ಸೊಪ್ಪು ಉದುರಿಸಿ. ಬಿಸಿಬಿಸಿಯಾದ ಬಾಟಿ ಚೋರ್ಚೋರಿ ರೆಡಿ!

### ನಾನ್-ವೆಜ್ ಸ್ಟೈಲ್:

ನಿಮಗೆ ನಾನ್-ವೆಜ್ ಬೇಕಿದ್ರೆ, ಇದನ್ನೇ 'ಚಿಂಗ್ರಿ ಬಾಟಿ ಚೋರ್ಚೋರಿ' ಮಾಡಬಹುದು. ಆಲೂಗಡ್ಡೆ ಮತ್ತು ಕೋಸುಗಡ್ಡೆಯನ್ನು ಸಣ್ಣದಾಗಿ (ಬಾಯಿಗೆ ಸಿಗುವಷ್ಟು) ಕತ್ತರಿಸಿಕೊಳ್ಳಿ. ಆಗ ಬೇಗ ಬೇಯುತ್ತದೆ. ಇದಕ್ಕೆ ಉಪ್ಪು ಮತ್ತು ಅರಿಶಿನ ಹಚ್ಚಿ 5 ನಿಮಿಷ ನೆನೆಸಿಟ್ಟು, ಸಿಪ್ಪೆ ಸುಲಿದು ಶುದ್ಧ ಮಾಡಿದ 150 ಗ್ರಾಂ ಸೀಗಡಿ ಮೀನು ಸೇರಿಸಿ. ಮಿಕ್ಕಿದ್ದನ್ನು ಹಿಂದಿನ ರೆಸಿಪಿಯಲ್ಲಿ ಮಾಡಿದ ಹಾಗೆಯೇ ಮಾಡಿ. ಈ ಡಬ್ಬಿಯನ್ನು ಬೇಳೆ ಬದಲಿಗೆ ಅನ್ನ ಬೇಯಿಸುವ ಪಾತ್ರೆಯ ಒಳಗೂ ಇಡಬಹುದು. ಅನ್ನ ಬೆಂದ ಮೇಲೆ ಡಬ್ಬಿಯನ್ನು ಹೊರಗೆ ತೆಗೆದು, ಕೊತ್ತಂಬರಿ ಸೊಪ್ಪು ಉದುರಿಸಿ, ಬಡಿಸಿ.

**English version first appeared** in TOI on May 3

# ಭಾರತದ ರೂಪಾಯಿ ಬೆಲೆ ಯಾಕೆ ಕುಸಿಯುತ್ತಿದೆ?

**ಜಯನ್ ಜೋಸ್ ಥಾಮಸ್**



ಭಾರತದ ರೂಪಾಯಿ ಮೌಲ್ಯದ ಗ್ರಾಫ್ ದಿನದಿಂದ ದಿನಕ್ಕೆ ಕೆಳಗೆ ಇಳಿಯುತ್ತಲೇ ಇದೆ. ಈ ವರ್ಷದ ಮೇ ತಿಂಗಳಲ್ಲಿ ಒಂದು ಅಮೆರಿಕನ್ ಡಾಲರ್ ಕೊಳ್ಳಲು ನಾವು ಬರೋಬ್ಬರಿ 96 ರೂಪಾಯಿ ಕೊಡಬೇಕು. ಹೋದ ವರ್ಷ ಡಾಲರ್ ಬೆಲೆ ಸುಮಾರು 85 ರೂಪಾಯಿ ಇತ್ತು. ಅಂದರೆ, ಹೋದ ವರ್ಷಕ್ಕೆ ಹೋಲಿಸಿದರೆ ನಮ್ಮ ರೂಪಾಯಿ ಮೌಲ್ಯ ತೀವ್ರವಾಗಿ ಕುಸಿದಿದೆ.

ವಿನಿಮಯ ದರ ಅಂದರೆ ಮಾರುಕಟ್ಟೆಯಲ್ಲಿ ಡಾಲರ್ ಎದುರು ನಮ್ಮ ರೂಪಾಯಿಯಂತಹ ಕರೆನ್ಸಿಗೆ ಇರುವ ಬೆಲೆ. ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಹೇಗೆ ಬೇಡಿಕೆ ಮತ್ತು ಪೂರೈಕೆ ಆಧರಿಸಿ ನಿರ್ಧಾರ ಆಗುತ್ತದೋ, ನಮ್ಮ ರೂಪಾಯಿಯ ಬೆಲೆಯೂ ಹಾಗೆಯೇ ನಿರ್ಧಾರವಾಗುತ್ತದೆ.

ದೇಶದ ವ್ಯಾಪಾರದ ಕೊರತೆ ರೂಪಾಯಿ ಮೌಲ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

ಭಾರತ ಬೇರೆ ದೇಶಗಳಿಗೆ ಮಾಡುವ ರಫ್ತು ಹೆಚ್ಚಾದರೆ ರೂಪಾಯಿಗೆ ಬೇಡಿಕೆ ಜಾಸ್ತಿಯಾಗುತ್ತದೆ. ಅದೇ ರೀತಿಯಲ್ಲಿ ಬೇರೆ ದೇಶದಿಂದ ನಾವು ಆಮದು ಮಾಡಿಕೊಳ್ಳುವುದು ಹೆಚ್ಚಾದಾಗ ರೂಪಾಯಿಗಿರುವ ಬೇಡಿಕೆ ಕುಸಿಯುತ್ತದೆ. ಉದಾಹರಣೆಗೆ, ಲೂಧಿಯಾನದ ಕಂಪನಿಗಳು ವಿದೇಶಕ್ಕೆ ಬಟ್ಟೆಗಳನ್ನು ರಫ್ತು ಮಾಡಿದಾಗ ಆ ಕಂಪೆನಿಗಳಿಗೆ ಡಾಲರ್ ಅಥವಾ ಯೂರೋ ಸಿಗುತ್ತದೆ. ಅವರು ಇಲ್ಲಿನ ಕಾರ್ಮಿಕರಿಗೆ ಮತ್ತು ಸಪ್ಲೈಯರ್‌ಗಳಿಗೆ ಸಂಬಳ ಕೊಡಲು ಆ ಡಾಲರ್‌ಗಳನ್ನು ಕೊಟ್ಟು ರೂಪಾಯಿ ಕೊಳ್ಳುತ್ತಾರೆ. ಆಗ ರೂಪಾಯಿಗೆ ಬೇಡಿಕೆ ಹೆಚ್ಚಾಗುತ್ತದೆ. ಆದರೆ ಭಾರತದ ಕಂಪನಿಗಳು ವಿದೇಶದಿಂದ ತೈಲ ಆಮದು ಮಾಡಿಕೊಳ್ಳುವಾಗ ರೂಪಾಯಿ ಕೊಟ್ಟು ಡಾಲರ್ ಪಡೆಯುತ್ತವೆ. ಆಗ ರೂಪಾಯಿಯ ಬೇಡಿಕೆ ಕಡಿಮೆಯಾಗುತ್ತದೆ. ನಾವು ವಿದೇಶ ಪ್ರವಾಸ ಹೋಗುವಾಗ ಏರ್‌ಪೋರ್ಟ್‌ನಲ್ಲಿ ರೂಪಾಯಿ ಕೊಟ್ಟು ವಿದೇಶಿ ಹಣ ಪಡೆಯುತ್ತೇವಲ್ಲ, ಆಗಲೂ ರೂಪಾಯಿಯ ಬೇಡಿಕೆ ಕುಸಿಯುತ್ತದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ, ನಾವು ಆಮದು ಮಾಡಿಕೊಳ್ಳುವುದು ನಮ್ಮ ರಫ್ತಿಗಿಂತ ಹೆಚ್ಚಾದರೆ, ಆಗ ನಾವು ವಿದೇಶಗಳಿಂದ ಪಡೆಯುವುದಕ್ಕಿಂತ ಹೆಚ್ಚು ಹಣವನ್ನು ಅವರಿಗೆ ಕೊಡುತ್ತಿರುತ್ತೇವೆ. ಅಂದರೆ ಡಾಲರ್ ಕೊಟ್ಟು ರೂಪಾಯಿ ಕೊಂಡಿದ್ದಕ್ಕಿಂತ, ರೂಪಾಯಿ ಕೊಟ್ಟು ಡಾಲರ್ ಕೊಂಡಿದ್ದೇ ಹೆಚ್ಚಿಗೆ ಇರುತ್ತದೆ. ಇದರಿಂದ ರೂಪಾಯಿಗೆ ಬೇಡಿಕೆ ಕಡಿಮೆಯಾಗುತ್ತದೆ. ಆಗ ರೂಪಾಯಿ ಮೌಲ್ಯ ಕುಸಿಯುತ್ತದೆ. ಅಂದರೆ ಒಂದು ಡಾಲರ್ ಕೊಳ್ಳಲು ನಾವು ಮೊದಲಿಗಿಂತ ಹೆಚ್ಚು ರೂಪಾಯಿ ತೆರಬೇಕಾಗುತ್ತದೆ.

ಹೀಗಾಗಿ, ಒಂದು ದೇಶದ ಕರೆನ್ಸಿಯ ವಿನಿಮಯ ದರವು ಆ ದೇಶಕ್ಕೆ ಬರುವ ಮತ್ತು ಆ ದೇಶದಿಂದ ಹೊರ ಹೋಗುವ ವಿದೇಶಿ ಹಣದ ಬ್ಯಾಲೆನ್ಸ್ ಅನ್ನು ಅವಲಂಬಿಸಿರುತ್ತದೆ. ಮರ್ಚಂಡೈಸ್ ವ್ಯಾಪಾರದಲ್ಲಿ ಅಂದರೆ ಸರಕುಗಳ ವ್ಯಾಪಾರದಲ್ಲಿ ಭಾರತ ಯಾವಾಗಲೂ ಕೊರತೆಯನ್ನೇ ಅನುಭವಿಸುತ್ತಿದೆ. ಏಕೆಂದರೆ ನಾವು ವಿದೇಶಗಳಿಂದ ಮಾಡಿಕೊಳ್ಳುವ ಆಮದು (ವಿಶೇಷವಾಗಿ ತೈಲ) ನಮ್ಮ ರಫ್ತಿಗಿಂತ ಹೆಚ್ಚಿರುತ್ತದೆ. ನಮ್ಮ ಮರ್ಚಂಡೈಸ್ ಖಾತೆಯಲ್ಲಿನ ಕೊರತೆಯನ್ನು ಭಾರತದ ಸೇವೆಗಳ ರಫ್ತಿನಿಂದ ಬರುವ ಆದಾಯವು ಸ್ವಲ್ಪ ಮಟ್ಟಿಗೆ ಸರಿದೂಗಿಸುತ್ತದೆ. ನಮ್ಮ ಸಾಫ್ಟ್‌ವೇರ್ ಕಂಪನಿಗಳು ವಿದೇಶಕ್ಕೆ ನೀಡುವ ಸೇವೆಗಳಿಂದಾಗಿ ನಮ್ಮಲ್ಲಿಗೆ ಹರಿದು ಬರುವ ವಿದೇಶಿ ಹಣ ಇದಕ್ಕೆ ಬಹುಮಟ್ಟಿಗೆ ಕಾರಣ. ಇದರ ಜೊತೆಗೆ, ಬೇರೆ ದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಪಶ್ಚಿಮ ಏಷ್ಯಾ ದೇಶಗಳಲ್ಲಿ ದುಡಿಯುತ್ತಿರುವ ನಮ್ಮ ಭಾರತೀಯ ಕಾರ್ಮಿಕರು ತಮ್ಮ ಕುಟುಂಬಗಳಿಗೆ ಕಳುಹಿಸುವ ದೊಡ್ಡ ಪ್ರಮಾಣದ ಹಣವೂ ಕೊರತೆಯನ್ನು ತುಂಬಲು ಸ್ವಲ್ಪಮಟ್ಟಿಗೆ ನೆರವಾಗುತ್ತದೆ. ಇವೆಲ್ಲವನ್ನೂ ಸೇರಿಸಿದ ನಂತರವೂ ಭಾರತದ ಒಟ್ಟಾರೆ ಚಾಲ್ತಿ ಖಾತೆ ಅಂದರೆ ಸರಕು ಮತ್ತು ಸೇವೆಗಳ ಒಟ್ಟು ಲೆಕ್ಕದಲ್ಲಿ ಕೊನೆಗೆ ಕೊರತೆ ಬೀಳುತ್ತದೆ (ಪಟ್ಟಿ–1).

**ರೂಪಾಯಿಯನ್ನು ದುರ್ಬಲಗೊಳಿಸುವ ಬಂಡವಾಳದ ಹೊರಹರಿವು**

ಒಂದು ದೇಶದ ವಿದೇಶಿ ವಿನಿಮಯ ಮೀಸಲು [Forex reserves] ಅನ್ನುವುದು ಒಂದು ಕುಟುಂಬದ ತುರ್ತು ಚಿನ್ನದ ನಿಧಿ ಇದ್ದ ಹಾಗೆ. ದೇಶಕ್ಕೆ ವಿದೇಶಿ ಹಣ ಬರುವುದು ಕಡಿಮೆಯಾದಾಗ ಅಥವಾ ಬಂಡವಾಳ ಹೂಡಿದವರು ಹಣ ವಾಪಸ್ಸು ತೆಗೆದು ದೇಶ ಬಿಟ್ಟು ಹೊರಟಾಗ ರೂಪಾಯಿಯನ್ನು ರಕ್ಷಿಸಲು ಆರ್‌ಬಿಐ ಈ ನಿಧಿಯನ್ನು ಬಳಸುತ್ತದೆ.

ವಿದೇಶಿ ನೇರ ಹೂಡಿಕೆಯನ್ನು ಹೆಚ್ಚಾಗಿ ಹೊಸ ಅಥವಾ ಚಾಲ್ತಿಯಲ್ಲಿರುವ ಫ್ಯಾಕ್ಟರಿ ಮತ್ತು ಉದ್ಯಮಗಳ ಮೇಲೆ ಮಾಡಲಾಗುತ್ತದೆ. ಹೀಗಾಗಿ ಇವಕ್ಕೆ ಆತಿಥೇಯ ದೇಶದೊಂದಿಗೆ ಒಂದು ಬಲವಾದ ನಂಟಿರುತ್ತದೆ. ಆದರೆ ಶೇರು ಅಥವಾ ಬಾಂಡ್‌ಗಳನ್ನು ಕೊಳ್ಳುವ ವಿದೇಶಿ ಪೋರ್ಟ್‌ಫೋಲಿಯೋ ಹೂಡಿಕೆ ಅಥವಾ ಎಫ್‌ಪಿಐ ಹಾಗಲ್ಲ. ಅದು ತುಂಬಾ ಚಂಚಲ. ಅದು ಒಂದು ಬಗೆಯ ಸಟ್ಟಾ ವ್ಯಾಪಾರ. ಪೋರ್ಟ್‌ಫೋಲಿಯೊ ಹೂಡಿಕೆದಾರರು ಬೇಗ ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಹೂಡಿಕೆ ಮಾಡಿರುತ್ತಾರೆ. ಸಣ್ಣದೊಂದು ರಿಸ್ಕ್‌ನ ಸುಳಿವು ಸಿಕ್ಕ ಕೂಡಲೆ ಅಥವಾ ಬೇರೆ ದೇಶದಲ್ಲಿ ಜಾಸ್ತಿ ಬಡ್ಡಿ ಸಿಗುತ್ತದೆ ಎಂದು ತಿಳಿದ ಕೂಡಲೆ ಹಣ ಹಿಂತೆಗೆದುಕೊಂಡು ಮಾಯವಾಗುತ್ತಾರೆ. ಎಫ್‌ಪಿಐ ದೊಡ್ಡ ಪ್ರಮಾಣದಲ್ಲಿ ದೇಶದೊಳಗೆ ಹರಿದುಬಂದಾಗ ಶೇರು ಮಾರುಕಟ್ಟೆ ರಾಕೆಟ್‌ನಂತೆ ಏರುತ್ತದೆ; ಹಾಗೆಯೇ ಅವರು ಹಣ ವಾಪಸ್ ಪಡೆಯುತ್ತಿದ್ದಂತೆ ಇಡೀ ಮಾರುಕಟ್ಟೆ ನೆಲಕಚ್ಚುತ್ತದೆ. ಬಂಡವಾಳದ ಹೊರಹರಿವು ಅಂದರೆ ಇದೇ. ಹೂಡಿಕೆದಾರರು ರೂಪಾಯಿಯಲ್ಲಿದ್ದ ತಮ್ಮ ಹೂಡಿಕೆಯನ್ನು ಹಿಂತೆಗೆದುಕೊಂಡು ಅವನ್ನು ಡಾಲರೊಂದಿಗೆ ವಿನಿಮಯ ಮಾಡಿಕೊಳ್ಳುತ್ತಾರೆ. ಅದರಿಂದ ರೂಪಾಯಿಯ ಬೇಡಿಕೆ ಕುಸಿಯುತ್ತದೆ, ಜೊತೆಗೆ ರೂಪಾಯಿಯ ವಿನಿಮಯ ದರವೂ ಕುಸಿಯುತ್ತದೆ.

ಭಾರತದ ಇತಿಹಾಸದಲ್ಲಿ ರೂಪಾಯಿ ಮೌಲ್ಯ ವೇಗವಾಗಿ ಕುಸಿದಾಗಲೆಲ್ಲಾ

# ಹೆಚ್ಚುತ್ತಿರುವ ಒತ್ತಡ

ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ನಡುವೆ, ಡಾಲರ್ ವಿರುದ್ಧ ರೂಪಾಯಿ ತೀವ್ರವಾಗಿ ದುರ್ಬಲಗೊಂಡಿದೆ. ಜಾಗತಿಕ ಅನಿಶ್ಚಿತತೆ, ಅಸ್ಥಿರ ಬಂಡವಾಳ ಹರಿವು ಮತ್ತು ಹೆಚ್ಚುತ್ತಿರುವ ಆಮದು ವೆಚ್ಚಗಳು ಭಾರತದ ಪಾವತಿಗಳ ಬಾಕಿ ವಿನಿಮಯ ಮೀಸಲುಗಳ ಮೇಲಿನ ಒತ್ತಡವನ್ನು ತೀವ್ರಗೊಳಿಸಿವೆ.






ಕೋಷ್ಟಕ 1: ಭಾರತದ ಪಾವತಿಗಳ ಬಾಕಿ, ಶತಕೋಟಿ ಯು.ಎಸ್. ಡಾಲರ್‌ಗಳಲ್ಲಿ

| ವಿವರ | 2023-24 | 2024-25 |
|---|---|---|
| A. Current account | -26.1 | -23.1 |
| A1. Merchandise trade | -244.4 | -286.9 |
| A2. Invisibles | -23.1 | -23.1 |
| A1. Merchandise trade | -244.9 | -286.6 |
| A2. Invisibles | 218.8 | 263.3 |
| B. Capital account | 86.4 | 16.6 |
| B1. Foreign investment | 54.2 | 4.52 |
| B2. Loans | 6.5 | 29.3 |
| B3. Others | 28.7 | -17.2 |
| C. Forex reserves (increase -/decrease+) | -63.7 | 5 |

ಈ ಕೋಷ್ಟಕವು ಅಯಾ ಅಂಗಗಳ ನಿವ್ವಳ ವೌಲ್ಯಗಳನ್ನು ಕೋರಿನುತ್ತವೆ. ಸರತುಗಳ ವ್ಯಾಪಾರ ಬಾಕಿ ಏಂಡರೆ ಷರಚುಗಳ ಅಮದುಬಟ್ಟಿಮ, ಸರತುಗಳ ವ್ಯಾವಾರ ಬಾಕಿ ಎಂದರ ಸರಶುಗಳ ರಮ್ಮ ಪ್ಶೈನಸ್ ಅಮದು; ಹಾಗೆಯೇ, ವಿದೇಶಿ ಮೊತಿಕೆ ಬುತ್ತು ಬತರ ಅಂತೆಗೆಳ ಒಳವರಿದು ಮ್ಶೈನಸ್ ಹೊರವರಿವೆ).

ಮೂಲ: ಫಾರತೀಯ ಆರ್ಥಿಕಿಕೆಯ ಮೋಲಿಸ ದೇವಾನೇನ್ (DBIE), ಭಾರತೀಯ ರಿನರ್ವ್ ಬ್ಯಾಂಲ್.




ಒಂದೋ ವ್ಯಾಪಾರ ಕೊರತೆ ಹೆಚ್ಚಾಗಿರುತ್ತದೆ, ಇಲ್ಲವೇ ಎಫ್‌ಪಿಐ ಬಂಡವಾಳ ಹೊರಗೆ ಹೋಗಿರುತ್ತದೆ. ಕೆಲವೊಮ್ಮೆ ಇವೆರಡೂ ಒಟ್ಟಿಗೇ ಆಗಿರುತ್ತವೆ. ಆ ಪ್ರಮುಖ ಹಂತಗಳು ಹೀಗಿವೆ:

2013ರ ಏಪ್ರಿಲ್‌ನಿಂದ ಸೆಪ್ಟೆಂಬರ್: ಡಾಲರ್ ಎದುರು ರೂಪಾಯಿ 54.4 ರಿಂದ 63.8ಕ್ಕೆ ಕುಸಿದಿತ್ತು.

2018ರ ಜನವರಿಯಿಂದ ಅಕ್ಟೋಬರ್: ರೂಪಾಯಿ 63.6 ರಿಂದ 73.6ಕ್ಕೆ ಇಳಿಯಿತು.

2020ರ ಫೆಬ್ರವರಿಯಿಂದ ಏಪ್ರಿಲ್: ರೂಪಾಯಿ ಬೆಲೆ 71.5 ರಿಂದ 76.2ಕ್ಕೆ ಇಳಿಯಿತು.

2022ರ ಜನವರಿಯಿಂದ ಅಕ್ಟೋಬರ್: ಬೆಲೆ 74.4 ರಿಂದ 82.3ಕ್ಕೆ ಕುಸಿಯಿತು

2024ರ ಸೆಪ್ಟೆಂಬರ್‌ನಿಂದ 2025ರ ಫೆಬ್ರವರಿ: ರೂಪಾಯಿ ಮೌಲ್ಯ 83.3 ರಿಂದ 87.1 ಇಳಿಯಿತು.

ಇತ್ತೀಚಿನ ಹಂತ ಮೇ 2025ರಿಂದ ಪ್ರಾರಂಭವಾಗಿದೆ. ರೂಪಾಯಿ 85.2ರಿಂದ ನೇರವಾಗಿ 96ರ ಗಡಿ ದಾಟಿದೆ.

ಇತ್ತೀಚೆಗೆ ರೂಪಾಯಿ ಇಷ್ಟೊಂದು ಕುಸಿಯುವುದಕ್ಕೆ ಮುಖ್ಯ ಕಾರಣವೆಂದರೆ ಹೆಚ್ಚುತ್ತಿರುವ ಭೂ–ರಾಜಕೀಯ ಸಂಘರ್ಷಗಳು ಮತ್ತು ಅಮೆರಿಕಾದಲ್ಲಿ ಬ್ಯಾಂಕ್ ಬಡ್ಡಿ ದರ ಹೆಚ್ಚಾಗಿರುವುದು. ಈ ಬೆಳವಣಿಗೆಗಳಿಂದ ವಿದೇಶಿ ಹೂಡಿಕೆದಾರರು ಭಾರತದಿಂದ ತಮ್ಮ ಹೂಡಿಕೆಗಳನ್ನು ಹಿಂತೆಗೆದುಕೊಂಡು ತಮ್ಮ ದೇಶದ ಸುರಕ್ಷಿತ ತಾಣಗಳಿಗೆ ಸಾಗಿಸುತ್ತಿದ್ದಾರೆ.

ರೂಪಾಯಿ ಮೌಲ್ಯ ಕುಸಿಯುವುದರಿಂದ ಭಾರತದ ಅರ್ಥವ್ಯವಸ್ಥೆಗೆ ಭಾರಿ ನಷ್ಟವಾಗುತ್ತದೆ. ಉದಾಹರಣೆಗೆ, ವಿದೇಶದಿಂದ ಒಂದು ಬ್ಯಾರೆಲ್ ಕಚ್ಚಾ ತೈಲವನ್ನು 100 ಡಾಲರ್ ಕೊಟ್ಟು ಕೊಳ್ಳಬೇಕು ಅಂದುಕೊಳ್ಳಿ. ಒಂದು ಡಾಲರ್ ಬೆಲೆ 85 ರೂಪಾಯಿ ಇದ್ದಿದ್ದರೆ ನಮ್ಮ ಕಂಪನಿಗಳು ಬರೀ 8,500 ರೂಪಾಯಿ ಕೊಟ್ಟರೆ ಸಾಕಾಗುತ್ತಿತ್ತು. ಆದರೆ ಈಗ ರೂಪಾಯಿ ಬೆಲೆ ಕುಸಿದು ಡಾಲರಿಗೆ 96ರೂಪಾಯಿಯಾಗಿರುವುದರಿಂದ ಅದೇ ಒಂದು ಬ್ಯಾರೆಲ್ ತೈಲಕ್ಕೆ ಬರೋಬ್ಬರಿ 9,600 ರೂಪಾಯಿ ತೆರಬೇಕಾಗುತ್ತದೆ. ಆದರೆ ರೂಪಾಯಿ ಬೆಲೆ ಕುಸಿಯುವುದರಿಂದ ರಫ್ತಿಗೆ ಅನುಕೂಲವಾಗುತ್ತದೆ. ಹೇಗೆಂದರೆ, ಭಾರತದಲ್ಲಿ 1,200 ರೂಪಾಯಿ ಬೆಲೆಯ ಒಂದು ಶರ್ಟ್ ಇದೆ ಅಂದುಕೊಳ್ಳಿ. ಇಂದಿನ ವಿನಿಮಯ ದರದ ಲೆಕ್ಕದಲ್ಲಿ ಇದನ್ನು ಅಮೆರಿಕದ ಮಾರುಕಟ್ಟೆಯಲ್ಲಿ ಕೇವಲ 12.5 ಡಾಲರ್‌ಗೆ ಮಾರಬಹುದು. ಅದೇ ಒಂದು ಡಾಲರ್ ಬೆಲೆ 80 ರೂಪಾಯಿ ಇದ್ದಿದ್ದರೆ, ಆ ಶರ್ಟ್ ಬೆಲೆ 15 ಡಾಲರ್ ಆಗುತ್ತಿತ್ತು. ವಿದೇಶದವರಿಗೆ ನಮ್ಮ ವಸ್ತುಗಳು ಅಗ್ಗವಾಗಿ ಸಿಗುವುದರಿಂದ ರಫ್ತು ಹೆಚ್ಚಾಗಬಹುದು. ಆದರೆ ಕೇವಲ ರೂಪಾಯಿ ಮೌಲ್ಯ ಕಮ್ಮಿಯಾಗಿದ್ದರಿಂದಲೇ ರಫ್ತು ಹೆಚ್ಚಾಗಿಬಿಡುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ನಮ್ಮ ದೇಶದ ಉತ್ಪಾದನಾ ಕ್ಷೇತ್ರದಲ್ಲಿ ಪೂರೈಕೆ ಮತ್ತು ಬೇಡಿಕೆಗೆ ಸಂಬಂಧಿಸಿದಂತೆ ಬೇರೆ ಹಲವು ಅಡ್ಡಿಗಳೂ ಇವೆ.

## ಇದರಲ್ಲಿ ರಿಸರ್ವ್ ಬ್ಯಾಂಕ್ ಪಾತ್ರವೇನು?

ರೂಪಾಯಿ ಮೌಲ್ಯ ತೀರಾ ಕೆಳಮಟ್ಟಕ್ಕೆ ಕುಸಿಯದಂತೆ ತಡೆಯಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮಾರುಕಟ್ಟೆಯಲ್ಲಿ ಮಧ್ಯೆ ಪ್ರವೇಶಿಸುತ್ತದೆ. ವಿದೇಶಿ ಹೂಡಿಕೆದಾರರು ಆತಂಕದಿಂದ ತಮ್ಮ ಶೇರುಗಳನ್ನು ಮಾರಿ, ರೂಪಾಯಿಯನ್ನು ಡಾಲರಿಗೆ ಪರಿವರ್ತಿಸಿಕೊಳ್ಳಲು ಪ್ರಾರಂಭಿಸಿದಾಗ ಆರ್‌ಬಿಐ ರಕ್ಷಣೆಗೆ ನಿಲ್ಲುತ್ತದೆ. ಅದು ತನ್ನ ಮೀಸಲಿನಲ್ಲಿರುವ ಡಾಲರ್ ನಿಧಿಯನ್ನು (ಅಥವಾ ಟ್ರೆಜರಿ ಬಾಂಡ್‌ಗಳನ್ನು) ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತದೆ. ಇದರಿಂದ ಡಾಲರಿಗೆ ಬೇಡಿಕೆ ತಗ್ಗಿ ರೂಪಾಯಿ ಕುಸಿಯುವ ವೇಗ ಕಮ್ಮಿಯಾಗುತ್ತದೆ.(ಹೋದ ವರ್ಷ ಅಂದರೆ 2024ರ ಅಕ್ಟೋಬರ್‌ನಿಂದ 2025ರ ಜನವರಿ ಹಾಗೂ ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ಆರ್‌ಬಿಐ ಹೀಗೆ ಮಾಡಿತ್ತು) ನಕ್ಷೆ–2.


ಸದ್ಯಕ್ಕೆ ಭಾರತದ ಬಳಿ ವಿದೇಶಿ ಮೀಸಲು ನಿಧಿ ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿದೆ. 2026ರ ಮಾರ್ಚ್ ಕೊನೆಯಲ್ಲಿ ಭಾರತದ ಬಳಿ ಸುಮಾರು 691.11 ಬಿಲಿಯನ್ ಡಾಲರ್ ಹಣವಿತ್ತು. ಇದು ನಮ್ಮ ದೇಶದ ಮುಂದಿನ 10.8 ತಿಂಗಳ ಆಮದು (ಡಿಸೆಂಬರ್ 2025ರ ಕೊನೆಯ ಲೆಕ್ಕದ ಪ್ರಕಾರ) ಖರ್ಚುಗಳಿಗೆ ಸಾಕಾಗುವಷ್ಟಿದೆ. ಮಾರುಕಟ್ಟೆಯಲ್ಲಿ ಲಾಭ ಮಾಡಿಕೊಳ್ಳಲು ಹೊಂಚುಹಾಕುವವರ ವಿರುದ್ಧ ರೂಪಾಯಿಯನ್ನು ರಕ್ಷಿಸಲು ಆರ್‌ಬಿಐ ಬಳಿ ಇರುವ ದೊಡ್ಡ ಬ್ರಹ್ಮಾಸ್ತ್ರವಿದು.

ಜಗತ್ತಿನಲ್ಲಿ ಸದ್ಯಕ್ಕೆ ನಡೆಯುತ್ತಿರುವ ಯುದ್ಧದ ಆತಂಕಗಳು ಹೋಗಿಲ್ಲ. ಜೊತೆಗೆ ತೈಲದ ಬೆಲೆ ಇನ್ನು ಹೆಚ್ಚಾಗಬಹುದು. ಇವು ಈಗ ನಮ್ಮ ಮುಂದಿರುವ ಅತಿ ದೊಡ್ಡ ಸವಾಲುಗಳು. ತೈಲ ಬೆಲೆ ಹೆಚ್ಚಾದರೆ ನಾವು ಒಂದು ಬ್ಯಾರೆಲ್ ತೈಲಕ್ಕೆ ಇನ್ನು ಜಾಸ್ತಿ ಡಾಲರ್ ಕೊಡಬೇಕಾಗುತ್ತದೆ; ಜೊತೆಗೆ ಡಾಲರ್ ಬೆಲೆ ಏರಿದಂತೆ ಪ್ರತಿ ಡಾಲರ್‌ಗೆ ಇನ್ನು ಹೆಚ್ಚಿನ ರೂಪಾಯಿಯನ್ನೂ ತೆರಬೇಕಾಗುತ್ತದೆ. ಇದಕ್ಕೆ ತುರ್ತು ಪರಿಹಾರ ಎಂದರೆ ಸಟ್ಟಾ ಬಂಡವಾಳದ ಹೊರಹರಿವನ್ನು [speculative capital outflows] ನಿಯಂತ್ರಿಸಲು ದೇಶವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮತ್ತು ತೈಲದ ಆಮದಿನ ಮೇಲಿನ ನಮ್ಮ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬೇಕು.

**(ಜಯನ್ ಜೋಸ್ ಥಾಮಸ್: ಇವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ದೆಹಲಿಯಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರು. ಜೊತೆಗೆ ಹೈಡೆಲ್‌ಬರ್ಗ್ ವಿಶ್ವವಿದ್ಯಾಲಯದ ಸೌತ್ ಏಷ್ಯಾ ಇನ್‌ಸ್ಟಿಟ್ಯೂಟ್‌ನಲ್ಲಿ ಸಂದರ್ಶಕ ಸಂಶೋಧಕರಾಗಿಯೂ ಕೆಲಸ ಮಾಡುತ್ತಿದ್ದಾರೆ.)**

English version first appeared in The Hindu

# ರೂಪಾಯಿ ಮೌಲ್ಯದ ರಕ್ಷಣೆ: 2013ರ ಬಿಕ್ಕಟ್ಟಿನಿಂದ ಪಾಠಗಳು



## ದುವ್ವೂರಿ ಸುಬ್ಬರಾವ್

ರೂಪಾಯಿ ಮತ್ತೆ ಸಂಕಷ್ಟದಲ್ಲಿದೆ. ಈ ಬಾರಿಯ ಕುಸಿತಕ್ಕೆ ಇರಾನ್ ಸಂಘರ್ಷವೇ ತಕ್ಷಣದ ಕಾರಣ. ಇದರಿಂದ ಜಾಗತಿಕವಾಗಿ ಕಚ್ಚಾ ತೈಲದ ಬೆಲೆಗಳು ವಿಪರೀತ ಹೆಚ್ಚಾಗಿದೆ. ದಾಳಿ ಶುರುವಾದಾಗ ಬ್ರೆಂಟ್ ಕಚ್ಚಾ ತೈಲದ ಬೆಲೆ ಒಂದು ಬ್ಯಾರೆಲ್‌ಗೆ 72 ಡಾಲರ್ ಇತ್ತು. ಈ ವಾರ ಅದು ಸುಮಾರು 110 ಡಾಲರ್‌ಗೆ ಏರಿದೆ. ಇದರಿಂದ ಭಾರತದ ಆಮದು ವೆಚ್ಚ ವಿಪರೀತ ಹೆಚ್ಚಿದೆ. ಇದರಿಂದ ನಮ್ಮ ವಿದೇಶಿ ಖಾತೆಯ ಮೇಲೂ ಒತ್ತಡ ತೀವ್ರವಾಗಿದೆ. ಈ ನಡುವೆ ಒಂದು ಡಾಲರ್‌ಗೆ 91 ಇದ್ದ ರೂಪಾಯಿ ಮೌಲ್ಯ 96ಕ್ಕೆ ಇಳಿದಿದೆ. ಕೇವಲ ಎಂಟು ವಾರಗಳಲ್ಲಿ ರೂಪಾಯಿ ಮೌಲ್ಯ ಶೇ. 5ಕ್ಕಿಂತ ಹೆಚ್ಚು ಕುಸಿದಿದೆ.

ಆದರೆ, ಕೇವಲ ತೈಲದ ಕಾರಣದಿಂದಾಗಿಯೇ ಈ ಬಿಕ್ಕಟ್ಟು ಆಗಿಬಿಟ್ಟಿದೆ ಎಂದು ಭಾವಿಸಬಾರದು. ಹಾಗೆ ಅಂದುಕೊಂಡರೆ ಆಳದಲ್ಲಿ ಇರುವ  ಗಂಭೀರ ಕಾರಣಗಳನ್ನು ಗಮನಿಸದೇ ಹೋಗಿಬಿಡುತ್ತೇವೆ. ರೂಪಾಯಿ ಕಳೆದ ಹಲವು ವರ್ಷಗಳಿಂದಲೇ ಒತ್ತಡದಲ್ಲಿದೆ. ಒತ್ತಡಕ್ಕೆ ನಮ್ಮ ದೇಶದಿಂದ ಬಂಡವಾಳವು ನಿರಂತರವಾಗಿ ಹೊರಕ್ಕೆ ಹರಿದು ಹೋಗುತ್ತಿರುವುದು ಮುಖ್ಯವಾದ ಕಾರಣ. ಬಂಡವಾಳ ನಮ್ಮ ದೇಶದಿಂದ ಆಚೆಗೆ ಹೋಗುವಂತೆ ಮಾಡುತ್ತಿರುವ ಹಲವು ಅಂಶಗಳಿವೆ. ಹಾಗೆಯೇ ಬೇರೆ ದೇಶಗಳತ್ತ ಬಂಡವಾಳವನ್ನು ಆಕರ್ಷಿಸುತ್ತಿರುವ ಅಂಶಗಳೂ ಇವೆ.

ಬಂಡವಾಳವನ್ನು ಹೊರತಳ್ಳುವುದಕ್ಕೆ ಇರುವ ಕಾರಣಗಳು ಆಂತರಿಕವಾದವು. ಷೇರುಪೇಟೆ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಭಾರತೀಯ ಸಣ್ಣ ಹೂಡಿಕೆದಾರರು ಹೆಚ್ಚಚ್ಚು ಹಣ ಹೂಡುತ್ತಿದ್ದಾರೆ. ಇದರಿಂದ ಇಲ್ಲಿನ ಷೇರುಗಳು ತುಂಬಾ ದುಬಾರಿಯಾಗಿವೆ. ವಿದೇಶಿ ಹೂಡಿಕೆದಾರರು ತಮ್ಮ ಹೂಡಿಕೆಗೆ ಇರುವ ಲಾಭದ ಅವಕಾಶಗಳನ್ನು ಜಾಗತಿಕ ಮಟ್ಟದಲ್ಲಿ ಹೋಲಿಸಿ ನೋಡುತ್ತಾರೆ. ದುಬಾರಿಯಾದ ಮಾರುಕಟ್ಟೆಯಿಂದ ತಮ್ಮ ಹಣವನ್ನು ಹಿಂತೆಗೆದುಕೊಳ್ಳುತ್ತಿದ್ದಾರೆ. ಹೆಚ್ಚು ಲಾಭ ಸಿಗುವ ದೇಶದ ಮಾರುಕಟ್ಟೆಗಳಲ್ಲಿ ಹೂಡುತ್ತಿದ್ದಾರೆ. ಬಂಡವಾಳದ ಆಕರ್ಷಣೆಗೆ ಜಾಗತಿಕವಾದ ಅಂಶಗಳು ಕಾರಣ.

ತಂತ್ರಜ್ಞಾನದಲ್ಲಿ ಮುನ್ನಡೆ ಸಾಧಿಸಿರುವ ದೇಶಗಳಿಗೆ ಬಂಡವಾಳ ಹೆಚ್ಚೆಚ್ಚು ಹರಿದುಹೋಗುತ್ತಿದೆ. ವಿಶೇಷವಾಗಿ ಅಮೆರಿಕದ ನೇತೃತ್ವದಲ್ಲಿ ನಡೆಯುತ್ತಿರುವ ಕೃತಕ ಬುದ್ಧಿಮತ್ತೆಯ ಕ್ರಾಂತಿ, ಸೆಮಿಕಂಡಕ್ಟರ್, ಬಯೋಟೆಕ್ ಮತ್ತು ಸುಧಾರಿತ ಉತ್ಪಾದನಾ ವಲಯಗಳು ಹೂಡಿಕೆಯನ್ನು ಹೆಚ್ಚು ಸೆಳೆಯುತ್ತಿವೆ. ಭಾರತ ಈಗಲೂ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯೇ ಆಗಿರಬಹುದು. ಆದರೆ, ಹೊಸ ತಲೆಮಾರಿನ ಅತ್ಯಾಧುನಿಕ ತಂತ್ರಜ್ಞಾನಗಳಲ್ಲಿ ಭಾರತದ ಪಾತ್ರ ತೀರಾ ಸೀಮಿತವಾಗಿದೆ ಎಂಬುದು ಜಗತ್ತಿನ ಗ್ರಹಿಕೆ. ಹೀಗಾಗಿ, ಬಂಡವಾಳವು ಇಂತಹ ನಾವೀನ್ಯತೆಯ ಆರ್ಥಿಕತೆಗಳ ಕಡೆಗೆ ಹರಿಯುತ್ತಿರುವುದರಿಂದ, ರೂಪಾಯಿಯ ಮೇಲೆ ಅನಿವಾರ್ಯವಾಗಿ ಒತ್ತಡ ಹೆಚ್ಚುತ್ತಿದೆ.

ರೂಪಾಯಿಯ ಮೌಲ್ಯವು ಎರ್ರಾಬಿರ್ರಿ ಕುಸಿಯುವುದನ್ನು ತಡೆಯಲು ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಈಗ ದೃಢವಾಗಿ ಪ್ರಯತ್ನಿಸುತ್ತಿದೆ. ಮೊದಲ ರಕ್ಷಣಾ ಕ್ರಮವಾಗಿ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡುತ್ತಿದೆ. ಮಾರುಕಟ್ಟೆಯ ಏರಿಳಿತಗಳನ್ನು ಹತೋಟಿಗೆ ತರುವುದಕ್ಕಾಗಿ ಮತ್ತು ಮಾರುಕಟ್ಟೆಯಲ್ಲಿ ಆತಂಕವನ್ನು ತಪ್ಪಿಸುವ ಉದ್ದೇಶದಿಂದ ಆರ್‌ಬಿಐ ಮಾರುಕಟ್ಟೆಯಲ್ಲಿ ಡಾಲರ್‌ಗಳನ್ನು ಮಾರಾಟ ಮಾಡಿ ರೂಪಾಯಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದೆ. (ಅನುವಾದಕರ ಟಿಪ್ಪಣಿ: ಇದರಿಂದ ಮಾರುಕಟ್ಟೆಯಲ್ಲಿ ಡಾಲರ್ ಪ್ರಮಾಣ ಹೆಚ್ಚಿ, ಬೇಡಿಕೆ ಕಡಿಮೆಯಾಗುತ್ತದೆ. ಡಾಲರ್ ಬೆಲೆ ತಗ್ಗುತ್ತದೆ.). ಮಾರುಕಟ್ಟೆಯ ಮಾಹಿತಿಯ ಪ್ರಕಾರ ಆರ್‌ಬಿಐ ಕಳೆದ ಕೆಲವು ವಾರಗಳಿಂದ ಮಾರುಕಟ್ಟೆಯಲ್ಲಿ ತೀರಾ ತೀವ್ರವಾಗಿ ಈ ಚಟುವಟಿಕೆಯಲ್ಲಿ ತೊಡಗಿದೆ.

ಭಾರತದ ವಿದೇಶಿ ವಿನಿಮಯ ಮೀಸಲು ನಿಧಿ ಈಗಲೂ 700 ಬಿಲಿಯನ್ ಡಾಲರ್ ಆಸುಪಾಸಿನಲ್ಲಿರುವುದು ಖಂಡಿತಾ ನೆಮ್ಮದಿಯ ಸಂಗತಿ. ಆದರೆ, ಈ ನೆಮ್ಮದಿಯನ್ನು ತುಂಬಾ ನೆಚ್ಚಿಕೊಳ್ಳಬಾರದು. ಮಾಮೂಲಿ ಸಂದರ್ಭದಲ್ಲಿ ಇರುವ ಹಣವೇ ಬೇಕಾದಷ್ಟಾಯಿತು ಅನಿಸುತ್ತದೆ. ಆದರೆ ಬಿಕ್ಕಟ್ಟಿನ ಸಮಯದಲ್ಲಿ ಎಷ್ಟಿದ್ದರೂ ಸಾಲುವುದಿಲ್ಲ.

ಮೀಸಲು ನಿಧಿ ಕರಗುತ್ತಿದೆ. ಅಪಾಯ ಅದಷ್ಟೇ ಅಲ್ಲ. ಆರ್‌ಬಿಐನ ವಿಶ್ವಾಸಾರ್ಹತೆಯೂ ಅದರೊಂದಿಗೆ ತೆಕ್ಕೆಹಾಕಿಕೊಂಡಿದೆ. ಮಾರುಕಟ್ಟೆಯಲ್ಲಿ ದೊಡ್ಡ ಮಟ್ಟದಲ್ಲಿ ಮಧ್ಯಪ್ರವೇಶಿಸುತ್ತಿದ್ದರೂ ರೂಪಾಯಿಯ ಕುಸಿತವನ್ನು ತಡೆಯುವುದಕ್ಕೆ ಆರ್‌ಬಿಐಗೆ ಸಾಧ್ಯವಾಗದೇ ಹೋದರೆ ಈ ಹೋರಾಟದಲ್ಲಿ ಕೇಂದ್ರ ಬ್ಯಾಂಕ್ ವಿಫಲವಾಗುತ್ತಿದೆ ಎಂದು ಮಾರುಕಟ್ಟೆ ನಿರ್ಧರಿಸಿಬಿಡಬಹುದು. ಹಾಗೇನಾದರೂ ಆಗಿಬಿಟ್ಟರೆ ಆರ್‌ಬಿಐ ವಿಶ್ವಾಸಾರ್ಹತೆ ದಿಢೀರನೆ ಕುಸಿಯಬಹುದು. ವಿನಿಮಯ ದರವೂ ಪಾತಾಳಕ್ಕೆ ಕುಸಿಯಲು ಪ್ರಾರಂಭವಾಗಬಹುದು. ವಿನಿಮಯ ದರದ ಬಿಕ್ಕಟ್ಟನ್ನು ಎದುರಿಸುವ ವಿಷಯದಲ್ಲಿ, ರಕ್ಷಣೆ ಮಾಡಲು ಹೋಗಿ ವಿಫಲವಾಗುವುದು, ರಕ್ಷಣೆಗೆ ಪ್ರಯತ್ನಿಸದೇ ಇರುವುದಕ್ಕಿಂತಲೂ ಹೆಚ್ಚು ಅಪಾಯಕಾರಿ. ಕೇಂದ್ರ ಬ್ಯಾಂಕ್‌ನ ದೃಢಸಂಕಲ್ಪ ಅಥವಾ ಆರ್ಥಿಕ ಸಾಮರ್ಥ್ಯ ಕಡಿಮೆಯಾಗುತ್ತಿದೆ ಎಂದು ಒಮ್ಮೆ ಮಾರುಕಟ್ಟೆಗೆ ಅನಿಸಿದರೆ ಸಾಕು, ಊಹಾಪೋಹಗಳ ಒತ್ತಡವು ವಿಪರೀತವಾಗಿ ಇಡೀ ಹಣಕಾಸು ಮಾರುಕಟ್ಟೆಯೇ ಅಸ್ಥಿರಗೊಳ್ಳುವ ಅಪಾಯವಿರುತ್ತದೆ.

ವಿನಿಮಯ ಮೀಸಲನ್ನು ರಕ್ಷಿಸುವುದಕ್ಕೆ ಅನುಸರಿಸಬಹುದಾದ ಇನ್ನೊಂದು ನೀತಿಯೆಂದರೆ ಆಮದಿನಲ್ಲಿ ಕಡಿತ ಮಾಡುವುದು. ಈ ನಿಟ್ಟಿನಲ್ಲಿ, ಸರ್ಕಾರವು ಚಿನ್ನ ಮತ್ತು ಬೆಳ್ಳಿಯ ಮೇಲಿನ ಆಮದು ಸುಂಕವನ್ನು ಹೆಚ್ಚಿಸಿದೆ. ಆದರೆ ಈ ಬಗ್ಗೆ ತೀರಾ ಎಚ್ಚರಿಕೆಯಿಂದ ಸಮತೋಲನವನ್ನು

ಕಾಪಾಡಿಕೊಳ್ಳಬೇಕಾಗುತ್ತದೆ. ಸುಂಕವನ್ನು ಅತಿಯಾಗಿ ಹೆಚ್ಚಿಸಿದರೆ, ಅದು ಮತ್ತೆ ಕಳ್ಳಸಾಗಣೆಗೆ ದಾರಿ ಮಾಡಿಕೊಡುತ್ತದೆ. ಹಾಗೆಂದು ಸುಂಕವನ್ನು ತೀರಾ ಇಳಿಸಿಬಿಟ್ಟರೆ, ಬೆಲೆಯೇರಿಕೆ ಹಾಗೂ ಹಣಕಾಸಿನ ಅಸ್ಥಿರತೆಯಿಂದ ಆತಂಕಗೊಂಡಿರುವ ಜನ, ತಮ್ಮ ಹಣವನ್ನು ಜೋಪಾನ ಮಾಡಿಕೊಳ್ಳುವುದಕ್ಕಾಗಿ ಹೆಚ್ಚು ಚಿನ್ನ ಖರೀದಿಸತೊಡಗುತ್ತಾರೆ. ಚಿನ್ನದ ಮೇಲೆ ಭಾರತೀಯರಿಗೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ವ್ಯಾಮೋಹ ಇದೆ. ಹಾಗಾಗಿ ಅನಿಶ್ಚಿತತೆಯ ಸಮಯದಲ್ಲಿ ಪರಿಸ್ಥಿತಿಯನ್ನು ನಿಭಾಯಿಸುವುದು ಹೆಚ್ಚು ಕಷ್ಟವಾಗುತ್ತದೆ.

ಇದಲ್ಲದೆ, ದೇಶದೊಳಗೆ ವಿದೇಶಿ ಹಣದ ಒಳಹರಿವನ್ನು ಉತ್ತೇಜಿಸಲು ಮತ್ತು ದೇಶದೊಳಗಿನಿಂದ ಹೊರಗೆ ಹರಿದುಹೋಗುವುದನ್ನು ನಿಯಂತ್ರಿಸಲು ಹಲವು ಬಂಡವಾಳದ ಹರಿವಿನ ನಿರ್ವಹಣಾ ಕ್ರಮಗಳೂ ಇವೆ. ವರದಿಗಳ ಪ್ರಕಾರ, ಅನಿವಾಸಿ ಭಾರತೀಯರನ್ನು ಗಮದಲ್ಲಿಟ್ಟುಕೊಂಡು ವಿಶೇಷ ಬಾಂಡ್‌ಗಳನ್ನು ಬಿಡುಗಡೆ ಮಾಡುವ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದೆ. ಭಾರತವು ಈ ಹಿಂದೆಯೂ ಇಂತಹ ಕ್ರಮವನ್ನು ಯಶಸ್ವಿಯಾಗಿ ಬಳಸಿದೆ. ವಿಶೇಷವಾಗಿ 2013ರ 'ಟೇಪರ್ ಟ್ಯಾಂಟ್ರಮ್' ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ವಿಶೇಷ ಬಾಂಡುಗಳನ್ನು ಬಿಡುಗಡೆ ಮಾಡಿದ್ದರಿಂದ ತುಂಬಾ ಅನುಕೂಲವಾಗಿತ್ತು.

ಆದರೆ ಅದೇ ಯಶಸ್ಸು ಈಗಲೂ ಸಾಧ್ಯವಾಗುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ. ಜಾಗತಿಕ ಪರಿಸ್ಥಿತಿ ಈಗ ಸಂಪೂರ್ಣ ಬದಲಾಗಿದೆ. 2013 ರಲ್ಲಿ, ಪ್ರಪಂಚದಲ್ಲಿ ದ್ರವ್ಯತೆಯು (ಹಣದ ಹರಿವು) ಹೇರಳವಾಗಿತ್ತು ಮತ್ತು ಮುಂದುವರಿದ ಆರ್ಥಿಕತೆಗಳಲ್ಲಿ ಬಡ್ಡಿ ದರಗಳು ಹೆಚ್ಚು ಕಡಿಮೆ ಸೊನ್ನೆಯಿತ್ತು. ಇಂದು, ದ್ರವ್ಯತೆಯ ಪರಿಸ್ಥಿತಿ ಬಿಗಿಯಾಗಿದೆ ಮತ್ತು ಜಾಗತಿಕ ಬಡ್ಡಿ ದರದಲ್ಲಿ ಏರಿಕೆಯಾಗಿವೆ. ಈಗ ಎನ್‌ಆರ್‌ಐ ಬಾಂಡ್ ಬಿಡುಗಡೆ ಮಾಡುವುದು ಹೆಚ್ಚು ದುಬಾರಿಯಾಗಿದೆ. ಇದರ ಜೊತೆಗೆ, ಬ್ಯಾಂಕುಗಳು ಕರೆನ್ಸಿ ಅಪಾಯವನ್ನು ಸರಿದೂಗಿಸಲು (ಹೆಡ್ಜ್ ಮಾಡಲು) ಕ್ರಮ ಕೈಗೊಳ್ಳಬೇಕಾಗುತ್ತವೆ. ಮತ್ತು ಆ ವೆಚ್ಚವನ್ನು ಅಂತಿಮವಾಗಿ ಸರ್ಕಾರ ಹಾಗೂ ಆರ್‌ಬಿಐನ ಸಂಯೋಜಿತ ಬ್ಯಾಲೆನ್ಸ್ ಶೀಟ್‌ನಲ್ಲಿ ಭರಿಸಬೇಕಾಗುತ್ತದೆ.

ಇದಕ್ಕಿಂತಲೂ ಮುಖ್ಯವಾಗಿ, ಎನ್‌ಆರ್‌ಐ ಬಾಂಡ್‌ಗಳಂತಹ ಒಂದು ಸಲದ ಒಳಹರಿವುಗಳಿಂದ ಮಾರುಕಟ್ಟೆಗೆ ಭರವಸೆ ಬರುವುದಿಲ್ಲ. ಭಾರತಕ್ಕೆ ಆಗೀಗ  ಮಾಡುವ ಆ ಕ್ಷಣದ ಹಣಕಾಸಿನ ನೆರವು ಬೇಕಿಲ್ಲ. ಬದಲಾಗಿ, ನಿರಂತರವಾದ ವಿದೇಶಿ ನೇರ ಹೂಡಿಕೆ ಮತ್ತು ಪೋರ್ಟ್‌ಫೋಲಿಯೊ ಒಳಹರಿವು ಬೇಕು. ಭಾರತದ ಆರ್ಥಿಕ ಭವಿಷ್ಯದ ಮೇಲೆ ವಿಶ್ವಾಸ ಮೂಡಿ ಜನ ಇಂತಹ ಹೂಡಿಕೆಗಳನ್ನು ಮಾಡುವಂತಾಗಬೇಕು.

ವಿನಿಮಯ ದರದ ಬಿಕ್ಕಟ್ಟಿನಲ್ಲಿ ಮಾರುಕಟ್ಟೆಯ ಮನಸ್ಥಿತಿ ತೀರಾ ಮುಖ್ಯವಾದ ಅಂಶ. ಒತ್ತಡದಲ್ಲಿರುವಾಗ ಮಾರುಕಟ್ಟೆಗಳು ವಿಚಿತ್ರವಾಗಿ ವರ್ತಿಸುತ್ತವೆ. ಇದನ್ನು ನೀತಿಗಳನ್ನು ರೂಪಿಸುವವರು ನೆನಪಿಟ್ಟುಕೊಳ್ಳಬೇಕು. 2013ರ 'ಟೇಪರ್ ಟ್ಯಾಂಟ್ರಮ್' ಬಿಕ್ಕಟ್ಟು ನಮಗೆ ಕಲಿಸಿದ ಪಾಠವು ಈ ನಿಟ್ಟಿನಲ್ಲಿ ಮಾರ್ಗದರ್ಶಿಯಾಗಿದೆ.

ಬಂಡವಾಳ ಹೊರಹರಿವನ್ನು ನಿಯಂತ್ರಿಸುವ ಪ್ರಯತ್ನದಲ್ಲಿ, ಆರ್‌ಬಿಐ ಗವರ್ನರ್ ಆಗಿ ನಾನು, ಭಾರತೀಯರು 'ಉದಾರೀಕೃತ ಹಣ ರವಾನೆ ಯೋಜನೆಯ' [LRS] ಅಡಿಯಲ್ಲಿ ವಿದೇಶಕ್ಕೆ ಕಳುಹಿಸಬಹುದಾದ ವಾರ್ಷಿಕ ಹಣದ ಮಿತಿಯನ್ನು 250,000 ಡಾಲರ್‌ಗಳಿಂದ 200,000 ಡಾಲರ್‌ಗಳಿಗೆ ಕಡಿತಗೊಳಿಸಿದೆ. ಇದಕ್ಕೆ ಮಾರುಕಟ್ಟೆಯ ಪ್ರತಿಕ್ರಿಯೆ ತಕ್ಷಣ ಕಾಣಿಸಿಕೊಂಡಿತು. ಮತ್ತು ಅಷ್ಟೇ ತೀವ್ರವಾಗಿತ್ತು: ಕೇವಲ ಎರಡು ವಾರಗಳಿಗೂ ಕಡಿಮೆ ಅವಧಿಯಲ್ಲಿ ರೂಪಾಯಿ ಮೌಲ್ಯವು 10% ರಷ್ಟು ಕುಸಿಯಿತು.

ಮಾರುಕಟ್ಟೆಯ ಈ ತೀವ್ರ ಪ್ರತಿಕ್ರಿಯೆಯನ್ನು ಕಂಡು ನನಗೆ ಗೊಂದಲವಾಯಿತು. ಕಂಗಾಲಾಗಿಬಿಟ್ಟೆ. ಅಷ್ಟಕ್ಕೂ, ಬಾಹ್ಯ ಆರ್ಥಿಕ ಒತ್ತಡಗಳನ್ನು ನಿಭಾಯಿಸಲು ಆರ್‌ಬಿಐ ಹಿಂದೆಯೂ ಹಲವು ಬಾರಿ ಬಂಡವಾಳ ನಿಯಂತ್ರಣಗಳಲ್ಲಿ ಸಣ್ಣಮಟ್ಟ ಬದಲಾವಣೆಗಳನ್ನು ಮಾಡಿತ್ತು. ಹಾಗಿದ್ದರೂ, ಮಾರುಕಟ್ಟೆ ಏಕೆ ಇಷ್ಟೊಂದು ತೀವ್ರವಾಗಿ ಪ್ರತಿಕ್ರಿಯಿಸಿತು? ಮಾರುಕಟ್ಟೆಯ ನಿರೀಕ್ಷೆಗಳು ಇದಕ್ಕೆ ಬಹುಮಟ್ಟಿಗೆ ಕಾರಣ. ಹೂಡಿಕೆದಾರರು ನನ್ನ ಈ ನಿರ್ಧಾರವನ್ನು ಕೇವಲ ಒಂದು ತಾತ್ಕಾಲಿಕ ತುರ್ತು ಕ್ರಮವೆಂದು ಭಾವಿಸಲಿಲ್ಲ; ಬದಲಾಗಿ, ಇದೊಂದು ದೊಡ್ಡ ನೀತಿ ಬದಲಾವಣೆಯ ಸಂಕೇತವೆಂದು, ಅಂದರೆ, ಭಾರತವು ತನ್ನ 'ಬಂಡವಾಳ ಖಾತೆಯ ಉದಾರೀಕರಣ ನೀತಿಯನ್ನೇ ಹಿಂದಕ್ಕೆ ಪಡೆಯುತ್ತಿದೆ ಎಂದು ಅರ್ಥೈಸಿಕೊಂಡರು. ಅವರ ಈ ಗ್ರಹಿಕೆಯಿಂದಾಗಿ ಮಾರುಕಟ್ಟೆಯ ಆತಂಕ ಇನ್ನಷ್ಟು ತೀವ್ರವಾಯಿತು. ಮತ್ತು ರೂಪಾಯಿಯ ಮೇಲಿದ್ದ  ನಕಾರಾತ್ಮಕ ಭಾವನೆ ಇನ್ನಷ್ಟು ಗಟ್ಟಿಯಾಯಿತು.

ವಿನಿಮಯ ದರದ ಬಿಕ್ಕಟ್ಟುಗಳನ್ನು ಎದುರಿಸುವುದು ಸುಲಭವಲ್ಲ. ಮೂಲತಃ, ಇವು ವಿಶ್ವಾಸದ ಬಿಕ್ಕಟ್ಟು. ಭೀತಿಯ ಪರಿಸ್ಥಿತಿಯಲ್ಲಿ, ಮಾರುಕಟ್ಟೆಯ ನಕಾರಾತ್ಮಕ ಊಹೆಗಳೇ ಪರಸ್ಪರ ಪ್ರಚೋದಿಸುತ್ತಾ, ನಿರಂತರ ಕುಸಿತಕ್ಕೆ ತಳ್ಳುವ ಸುಳಿಯನ್ನು ನಿರ್ಮಿಸುತ್ತವೆ. ಮಾರುಕಟ್ಟೆಯಲ್ಲಿ ತೊಡಗಿಕೊಂಡವರಿಗೆ ರೂಪಾಯಿ ಮೌಲ್ಯ ಇನ್ನೂ ಕುಸಿಯುತ್ತದೆ ಅನಿಸಿದರೆ, ಅವರ ವರ್ತನೆಯೇ ಬದಲಾಗಿಬಿಡುತ್ತದೆ. ಅವರ ಬದಲಾದ ವರ್ತನೆಯಿಂದಲೇ  ರೂಪಾಯಿ ಮತ್ತಷ್ಟು ಕುಸಿಯುತ್ತದೆ. ಉದಾಹರಣೆಗೆ ರಫ್ತುದಾರರು ತಮಗೆ ಬರಬೇಕಾದ ವಿದೇಶಿ ಹಣವನ್ನು ದೇಶಕ್ಕೆ ತರುವುದನ್ನು ವಿಳಂಬ ಮಾಡುತ್ತಾರೆ. ಆಮದುದಾರರು ತಾವು ಆಮದು ಮಾಡಿಕೊಳ್ಳುವ ಸರಕುಗಳಿಗೆ ಮುಂಚಿತವಾಗಿಯೇ ಹಣ ಪಾವತಿಸಲು ಆತುರಪಡುತ್ತಾರೆ. ಸಾಮಾನ್ಯ ಜನರು ಹಣದ ಮೌಲ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ಚಿನ್ನ ಮತ್ತು ಡಾಲರ್‌ಗಳನ್ನು ಖರೀದಿಸಲು ಮುಂದಾಗುತ್ತಾರೆ. ಬಂಡವಾಳ ಸುರಕ್ಷತೆಯನ್ನು ಹುಡುಕಿಕೊಂಡು ಬೇರೆ ದೇಶಗಳಿಗೆ ಹರಿಯಲು ಪ್ರಾರಂಭಿಸುತ್ತದೆ. ಸುಮ್ಮನೆ ಹೀಗಾಗಬಹುದು ಎಂದು ಜನರು ಅನುಮಾನಿಸಿದ್ದೇ ಕೊನೆಗೆ ಸತ್ಯವಾಗಿಬಿಡುತ್ತದೆ. ಇದನ್ನೇ 'ಅಂದುಕೊಂಡ್ಹಂಗೇ ಆಯ್ತು' ಅನ್ನೋದು.

ಹಾಗಾಗಿ, ಸರ್ಕಾರ ಮತ್ತು ಆರ್‌ಬಿಐ ಮುಂದಿರುವ ಸವಾಲೆಂದರೆ ಕೇವಲ ಮೀಸಲು ನಿಧಿ, ಬಡ್ಡಿದರ ಅಥವಾ ಆಮದು ಸುಂಕಗಳನ್ನು ತಾಂತ್ರಿಕವಾಗಿ ನಿರ್ವಹಿಸುವುದಷ್ಟೇ ಅಲ್ಲ. ಮಾರುಕಟ್ಟೆಯ 'ನಿರೀಕ್ಷೆಗಳ ಸೂಕ್ತ ನಿರ್ವಹಣೆ' ನಿಜವಾಗಿ ನಮ್ಮ ಮುಂದಿರುವ ಅತಿ ದೊಡ್ಡ ಸವಾಲು. ನೀತಿಗಳನ್ನು ರೂಪಿಸುವವರು ಹತಾಶೆಯನ್ನು ತೋರದೆ ದಿಟ್ಟ ಹೆಜ್ಜೆಗಳನ್ನು ಇಡಬೇಕು. ತಾವು ರಕ್ಷಣಾತ್ಮಕವಾಗಿ ನಡೆದುಕೊಳ್ಳುತ್ತಿದ್ದೇವೆ ಎನ್ನುವ ಅಭಿಪ್ರಾಯ ಬಾರದಂತೆ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸಬೇಕು, ಮತ್ತು ಯಾವುದೇ ಆತಂಕವನ್ನು ಸೃಷ್ಟಿಸದೆ ತಮ್ಮ ನಿಲುವನ್ನು ದೃಢವಾಗಿ ತಿಳಿಸಬೇಕು.

ಕೇನ್ಸ್ ಹೇಳಿದ ಹಾಗೆ, 'ಪೂರ್ತಿ' ತಪ್ಪಾಗಿರೋದಕ್ಕಿಂತ, ಸ್ವಲ್ಪ ಸರಿಯಾಗಿರೋದೇ ವಾಸಿ.

**ದುವ್ವೂರಿ ಸುಬ್ಬರಾವ್ ಅವರು ಭಾರತೀಯ ರಿಸರ್ವ್ ಬ್ಯಾಂಕ್‌ನ  ಮಾಜಿ ಗವರ್ನರ್.**

English version fir**st appeared in** Hindustan times

# ರೂಪಾಯಿ ಮೌಲ್ಯ ಕಾಪಾಡಿಕೊಳ್ಳುವ ವೆಚ್ಚ

## ಸಿ. ಪಿ. ಚಂದ್ರಶೇಖರ್ ಮತ್ತು ಜಯತಿ ಘೋಷ್

ಕಳೆದ ಕೆಲವು ತಿಂಗಳುಗಳಿಂದ, ರೂಪಾಯಿ ಮೌಲ್ಯದ ಕುಸಿತ ಮತ್ತು ಅದನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ ಮಾಡುತ್ತಿರುವ ಪ್ರಯತ್ನಗಳು, ಇವೆರಡೂ ಭಾರತದ ಆರ್ಥಿಕತೆಗೆ ಸಂಬಂಧಿಸಿದಂತೆ ಅತಿ ಹೆಚ್ಚು ಚರ್ಚೆಯಾಗುತ್ತಿರುವ ವಿಷಯಗಳು. ಅಮೆರಿಕದ ಡಾಲರ್ ಎದುರು ರೂಪಾಯಿಯ ಮೌಲ್ಯವು ತೀವ್ರವಾಗಿ ಕುಸಿದಿದೆ ಎಂಬುದರಲ್ಲಿ ಸಂದೇಹವಿಲ್ಲ (ಸ್ವತಃ ಇತರ ಪ್ರಮುಖ ಕರೆನ್ಸಿಗಳ ಎದುರು ಕುಸಿಯುತ್ತಿರುವ ಡಾಲರ್ ಎದುರು ಭಾರತದ ರೂಪಾಯಿ ಇನ್ನೂ ತೀವ್ರವಾಗಿ ಕುಸಿಯುತ್ತಿದೆ).

ಚಿತ್ರ 1 ಒಂದನ್ನು ನೋಡಿದರೆ ಇದೇನು ಹೊಸ ಬೆಳವಣಿಗೆಯಲ್ಲ ಎಂಬುದು ತಿಳಿಯುತ್ತದೆ. 2018 ರಿಂದಲೂ ರೂಪಾಯಿ ಮೌಲ್ಯವು ಸತತವಾಗಿ ಕುಸಿಯುತ್ತಲೇ ಬರುತ್ತಿದೆ. ಒಟ್ಟಾರೆಯಾಗಿ, ಇದುವರೆಗೆ ಬರೋಬ್ಬರಿ ಶೇಕಡಾ 50% ರಷ್ಟು ಕುಸಿದಿದೆ. ಈ ವರ್ಷದ ಆರಂಭದಿಂದ ಈ ಕುಸಿತ ತೀರಾ ತೀವ್ರವಾಗಿದೆ.

ನಿಜ ಹೇಳಬೇಕೆಂದರೆ, ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಯುದ್ಧ ಪ್ರಾರಂಭವಾದ ದಿವಸದಿಂದ ಭಾರತದ ರೂಪಾಯಿಗೆ ನಿಜವಾಗಿ ತೀರಾ ಕೆಟ್ಟಕಾಲ ಪ್ರಾರಂಭವಾಗಿದೆ. ಬ್ರಿಕ್ಸ್ [BRICS] ರಾಷ್ಟ್ರಗಳ ಕರೆನ್ಸಿಗಳಿಗಿಂತ ಮಾತ್ರವಲ್ಲ, ದಕ್ಷಿಣ ಏಷ್ಯಾದ ಇತರ ದೇಶಗಳ ಕರೆನ್ಸಿಗಳಿಗೆ ಹೋಲಿಸಿದರೂ ಸಹ ನಮ್ಮ ರೂಪಾಯಿಯ ಸಾಧನೆ ಕಳಪೆಯಾಗಿದೆ.

ಯುದ್ಧ ಶುರುವಾಗುವ ಮುನ್ನ, ಅಂದರೆ 2024ರ 4ನೇ ತ್ರೈಮಾಸಿಕ (ಅಕ್ಟೋಬರ್–ಡಿಸೆಂಬರ್) ಮತ್ತು 2025ರ ಒಂದನೇ ತ್ರೈಮಾಸಿಕದ (ಜನವರಿ–ಮಾರ್ಚ್) ನಡುವಿನ ಸರಾಸರಿ ಮೌಲ್ಯವನ್ನು ತೆಗೆದುಕೊಂಡರೆ, ದಕ್ಷಿಣ ಏಷ್ಯಾದ ಇತರ ಎಲ್ಲಾ ಕರೆನ್ಸಿಗಳಿಗಿಂತ ಭಾರತದ ರೂಪಾಯಿ ಅತಿ ಹೆಚ್ಚು ಮೌಲ್ಯ ಕಳೆದುಕೊಂಡಿದೆ. ಚಿತ್ರ –2 ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.


ದಕ್ಷಿಣ ಏಷ್ಯಾದ ನಮ್ಮ ಎಲ್ಲಾ ನೆರೆಹೊರೆಯ ದೇಶಗಳು ವಿವಿಧ ಹಂತದ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟು ಅಥವಾ ಅಸ್ಥಿರತೆಯನ್ನು ಎದುರಿಸುತ್ತಿವೆ. ಅಂತದ್ದರಲ್ಲೂ ನಮ್ಮ ಭಾರತದ ರೂಪಾಯಿ ಅವುಗಳ ಕರೆನ್ಸಿಗಿಂತ ಕಳಪೆ ಸ್ಥಿತಿಯಲ್ಲಿರುವುದು ಕುಸಿತದ ಗಾಂಭೀರ್ಯವನ್ನು ತೋರಿಸುತ್ತದೆ.


ಸಾಮಾನ್ಯವಾಗಿ, ದೇಶದ 'ಪಾವತಿ ಶಿಲ್ಕಿನ' [Balance of Payments] ಒಟ್ಟಾರೆ ಲೆಕ್ಕಾಚಾರದಲ್ಲಿ ಆಗುವ ಬದಲಾವಣೆಗಳನ್ನು ಗಮನಿಸಿದರೆ ರೂಪಾಯಿ ಮೌಲ್ಯವೇಕೆ ಹೀಗೆ ದಿಢೀರನೆ, ತೀವ್ರವಾಗಿ ಕುಸಿಯುತ್ತಿದೆ ಎಂಬುದಕ್ಕೆ ಸ್ಪಷ್ಟ ಉತ್ತರ ಸಿಗುತ್ತದೆ. ಒಂದೋ, ಚಾಲ್ತಿ ಖಾತೆಯಲ್ಲಿ ಕೊರತೆ ಹೆಚ್ಚಾದಾಗ, ಅದಕ್ಕೆ ಪೂರಕವಾಗಿ ವಿದೇಶಿ ಬಂಡವಾಳವೂ ದೇಶದೊಳಗೆ ಹರಿದು ಬರದೇ ಹೋದಾಗ ಹೀಗೆ ಆಗುತ್ತದೆ. ಅಥವಾ ದೇಶದಿಂದ ಬಂಡವಾಳ ಪಲಾಯನ ಮಾಡತೊಡಗಿದಾಗಲೂ ರೂಪಾಯಿ ಮೌಲ್ಯ ಹೀಗೆ ಕುಸಿಯಬಹುದು. ಇವೆರಡೂ ಘಟನೆಗಳು ಒಟ್ಟಿಗೆ ಸಂಭವಿಸಿದಾಗಲಂತೂ ರೂಪಾಯಿ ಮೌಲ್ಯ ಹೆಚ್ಚು ತೀವ್ರವಾಗಿ ಕುಸಿಯುವುದು ಸಹಜ.


## ಸಂಕೀರ್ಣವಾದ ಸಮಸ್ಯೆ

ಆದರೆ, ಇಲ್ಲಿ ಸಮಸ್ಯೆ ಹೆಚ್ಚು ಸಂಕೀರ್ಣವಾಗಿದೆ. ಕಳೆದ ಒಂದು ವರ್ಷದ ಒಟ್ಟಾರೆ 'ಪಾವತಿ ಶಿಲ್ಕಿನ' ಅಂಕಿ ಅಂಶವನ್ನು ಪರಿಶೀಲಿಸಿದರೆ, ಕರೆನ್ಸಿ ಮೌಲ್ಯದಲ್ಲಿ ಇಷ್ಟೊಂದು ತೀವ್ರ ಕುಸಿತವನ್ನು ಉಂಟುಮಾಡುವಂತಹ ಯಾವ ತೀವ್ರ ಅಸಮತೋಲನವೂ ಕಾಣುವುದಿಲ್ಲ. ವಾಸ್ತವವಾಗಿ, 2025ರಲ್ಲಿ ಒಟ್ಟಾರೆ ಪಾವತಿ ಶಿಲ್ಕು ಬಹುತೇಕ ಸ್ಥಿರವಾಗಿಯೇ ಇತ್ತು.

ಚಿತ್ರ 3ರಲ್ಲಿರುವಂತೆ, 2025ರ ಜನವರಿಯಿಂದ ಮಾರ್ಚ್‌ವರೆಗಿನ ಕೆಲಕಾಲ ನಮ್ಮ ಚಾಲ್ತಿ ಖಾತೆಯಲ್ಲಿ [current account] ಹೆಚ್ಚುವರಿ ಹಣ ಉಳಿದುಕೊಂಡಿತ್ತು. (ವಿದೇಶದಲ್ಲಿ ದುಡಿಯುವವರು ಕಳುಹಿಸುವ










ಹಣ ಹೆಚ್ಚಗಿದ್ದು ಹಾಗೂ ತೈಲ ಮತ್ತು ಚಿನ್ನದಂತಹ ವಸ್ತುಗಳ ಆಮದು ಕಡಿಮೆಯಾಗಿದ್ದೇ ಇದಕ್ಕೆ ಮುಖ್ಯ ಕಾರಣ). ಆದರೆ, ಅದೇ ಸಮಯದಲ್ಲಿ ನಮ್ಮ ದೇಶದಿಂದ ಸಾಕಷ್ಟು ಬಂಡವಾಳ ಹೊರಹೋಗಿದ್ದರಿಂದ ಅಲ್ಲಿಗೆ ಅದು ಸಮವಾಯಿತು. 2024ರ ಕೊನೆಯ ತಿಂಗಳುಗಳನ್ನು ಬಿಟ್ಟರೆ, ಉಳಿದೆಲ್ಲಾ ಸಮಯದಲ್ಲೂ ನಮ್ಮ ಚಾಲ್ತಿ ಖಾತೆಯಲ್ಲಿ ಕೊರತೆ ಇತ್ತು. ಆದರೆ ನಮ್ಮಿಂದ ಹೊರಗೆ ಹೋಗುವ ಹಣಕ್ಕಿಂತ ಹೊರಗಿನಿಂದ ದೇಶದೊಳಗೆ ಬರುವ ಹಣ ಹೆಚ್ಚಿತ್ತು.

ಇದು ನಮ್ಮ ಸಾಮಾನ್ಯ ತರ್ಕಕ್ಕೆ ಹೊಂದಿಕೊಳ್ಳುತ್ತಿಲ್ಲ. ಖಾಸಗಿ ಹಣ ಎಷ್ಟು ವೇಗವಾಗಿ ಮತ್ತು ದೊಡ್ಡ ಮಟ್ಟದಲ್ಲಿ ದೇಶದಿಂದ ಹೊರಹೋಗುತ್ತಾ ಇದೆ. ಈ ಬಗ್ಗೆ ವ್ಯಾಪಕ ಚರ್ಚೆಯೂ ನಡೆಯುತ್ತಿದೆ. ಮತ್ತು ಇದಕ್ಕೆ ಪುರಾವೆಯೂ ಇದೆ. ಆರ್‌ಬಿಐ ಕೂಡ ಹಣ ಹೀಗೆ ಹೊರಹೋಗುವುದನ್ನು ತಡೆಯುವುದಕ್ಕೆ ಪ್ರಯತ್ನಿಸುತ್ತಿದೆ. ಹಾಗಾಗಿ, ಈ ಅಂಕಿಅಂಶಗಳು ಕಣ್ಣೆದುರು ನೋಡುತ್ತಿರುವ ವಾಸ್ತವಕ್ಕೆ ಪೂರ್ತಿ ವಿರುದ್ಧವಾಗಿ ಕಾಣಿಸುತ್ತಿದೆ. ಒಂದು ವೇಳೆ ನಿಜವಾಗಲೂ ಹೊರಗಿನಿಂದ ಬರುವ ಹಣ ಹೆಚ್ಚಿದ್ದು, ಅದು ನಮ್ಮ ಖಾತೆಯ ಕೊರತೆಯನ್ನು ಸರಿತೂಗಿಸುತ್ತಿದ್ದರೆ, ರೂಪಾಯಿ ಬೆಲೆ ದಿನೇ ದಿನೇ ಏಕೆ ಕುಸಿಯುತ್ತಿದೆ?

ಈ ಪ್ರಶ್ನೆಗೆ ಉತ್ತರಕ್ಕೆ ಕಂಡುಕೊಳ್ಳಬೇಕಾದರೆ ಇದನ್ನು ಇನ್ನಷ್ಟು ಆಳವಾಗಿ ಪರಿಶೀಲಿಸಬೇಕು. ಆದರೆ ಇಲ್ಲಿ ಒಂದು ಸಾಧ್ಯತೆಯನ್ನು ನಾವು ಗಂಭೀರವಾಗಿ ಪರಿಗಣಿಸಲೇಬೇಕು. ಅದೇನೆಂದರೆ ಬ್ಯಾಂಕುಗಳು, ವಿದೇಶಿ ವಿನಿಮಯ ದಲ್ಲಾಳಿಗಳು ಮತ್ತು ಇತರ ಸಂಸ್ಥೆಗಳ ಮೂಲಕ ನಡೆಯುತ್ತಿರುವ ರೂಪಾಯಿಯ ಆಂತರಿಕ ವ್ಯಾಪಾರ ಹೆಚ್ಚಾಗುತ್ತಿರುವುದು ಇದಕ್ಕೆ ಕಾರಣವಿರಬಹುದು. ಇವರೆಲ್ಲಾ ಮುಂದೆ ರೂಪಾಯಿಯ ಬೆಲೆ ಇನ್ನಷ್ಟು ಕುಸಿಯಬಹುದು ಎಂದು ಊಹೆ [speculate] ಮಾಡಿ ವ್ಯವಹಾರ ಮಾಡುತ್ತಿದ್ದಾರೆ. ಇವರ ನಿರೀಕ್ಷೆಯಂತೆಯೇ ಅಂದರೆ ಇವರು ಅಂದುಕೊಂಡ ಹಾಗೆಯೇ ವಾಸ್ತವದಲ್ಲೂ ರೂಪಾಯಿ ಬೆಲೆ ಇಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ವ್ಯಾಪಾರಗಳಿಗೆ ಆರ್‌ಬಿಐನ ಮಧ್ಯಸ್ಥಿಕೆಯ ಅವಶ್ಯಕತೆಯಿಲ್ಲ. ಹಾಗಾಗಿ, ಇವು ದೇಶದ ಅಧಿಕೃತ ಪಾವತಿ ಶಿಲ್ಕಿನ [balance of payments] ಲೆಕ್ಕದ ಪುಸ್ತಕದಲ್ಲಿ





ಎಲ್ಲೂ ಕಾಣಿಸಿಕೊಳ್ಳುವುದಿಲ್ಲ. ಜೊತೆಗೆ, ದೇಶದೊಳಗೆ ಹಿಂದಿನಿಂದಲೂ ಕೂಡಿಟ್ಟುಕೊಂಡಿರುವ ದೊಡ್ಡ ಮೊತ್ತದ ಡಾಲರ್‌ಗಳು ಅಥವಾ ಇತರ 'ಪ್ರಬಲ ಕರೆನ್ಸಿಗಳು' [hard currencies] ಕೂಡ ಈ ವ್ಯಾಪಾರದಲ್ಲಿ ಬಳಕೆಯಾಗುತ್ತಿರಬಹುದು.

## ಆರ್‌ಬಿಐ ಕ್ರಮಗಳು:

ಆರ್‌ಬಿಐ (ಭಾರತೀಯ ರಿಸರ್ವ್ ಬ್ಯಾಂಕ್) ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಹಸ್ತಕ್ಷೇಪ ಮಾಡಿದಾಗಲೆಲ್ಲಾ, ಅದರ ಕ್ರಮಗಳು ದೇಶದ ಪಾವತಿ ಶಿಲ್ಕಿನಲ್ಲಿನ ಹಣಕಾಸಿನ ಹರಿವಿನ ಮೇಲೆಯೂ ಪರಿಣಾಮ ಬೀರುತ್ತವೆ. ಕಳೆದ ವರ್ಷ ಇಂತಹ ಹಸ್ತಕ್ಷೇಪ ಎದ್ದು ಕಾಣುತ್ತಿತ್ತು. ಆರ್‌ಬಿಐ ಬಳಿ ಇರುವ ವಿದೇಶಿ ವಿನಿಮಯ ಮೀಸಲು ನಿಧಿಯ ಮೌಲ್ಯದಲ್ಲಿ ಭಾರಿ ಬದಲಾವಣೆಗಳಾಗಿರುವುದನ್ನು ಚಿತ್ರ 4 ತೋರಿಸುತ್ತದೆ. ವಿಶೇಷವಾಗಿ 2024ರ ಕೊನೆಯ ತ್ರೈಮಾಸಿಕದಲ್ಲಿ ವಿದೇಶಿ ವಿನಿಮಯ ಮೀಸಲು ನಿಧಿಯಲ್ಲಿ ಸುಮಾರು 38 ಬಿಲಿಯನ್ ಡಾಲರ್‌ನಷ್ಟು ಕಮ್ಮಿಯಾಗಿರುವುದು ಕಾಣುತ್ತದೆ.

ಆನಂತರದ ಎರಡು ತ್ರೈಮಾಸಿಕಗಳಲ್ಲಿ ವಿದೇಶಿ ವಿನಿಮಯ ಮೀಸಲು ನಿಧಿಯನ್ನು ಮತ್ತೊಮ್ಮೆ ಹೆಚ್ಚಿಸಲಾಯಿತು. ಆದರೆ ಜುಲೈ 2025ರಿಂದ ಆರ್‌ಬಿಐ ಮುಕ್ತ ಮಾರುಕಟ್ಟೆ ಪ್ರಕ್ರಿಯೆಗಳನ್ನು ಸ್ಪಷ್ಟವಾಗಿ ಪುನರಾರಂಭಿಸಿದೆ. ರೂಪಾಯಿ ಮೌಲ್ಯವನ್ನು ಸ್ಥಿರಗೊಳಿಸುವುದಕ್ಕಾಗಿ ಮಾರುಕಟ್ಟೆಯಲ್ಲಿ ರೂಪಾಯಿಯನ್ನು ಆರ್‌ಬಿಐ ಖರೀದಿಸಿದೆ. ಇವುಗಳು ಒಟ್ಟು ಹಣಕಾಸಿನ ಒಳಹರಿವಿನ ಭಾಗವಾಗಿರುತ್ತವೆ.

ಇದು ಎಷ್ಟು ದೊಡ್ಡ ಮಟ್ಟದಲ್ಲಿತ್ತೆಂದರೆ, 2025–26ರ ಆರ್ಥಿಕ ವರ್ಷದಲ್ಲಿ ಆರ್‌ಬಿಐ ಬರೋಬ್ಬರಿ 53.1 ಬಿಲಿಯನ್ ಡಾಲರ್ ಮೌಲ್ಯದ ಮೀಸಲು ನಿಧಿಯನ್ನು ಮಾರಾಟ ಮಾಡಿದೆ. ಇದು ಹಿಂದಿನ ಆರ್ಥಿಕ ವರ್ಷದ ನಿವ್ವಳ ಮಾರಾಟಕ್ಕಿಂತ ಸುಮಾರು 12 ಬಿಲಿಯನ್ ಡಾಲರ್‌ನಷ್ಟು ಹೆಚ್ಚಾಗಿದೆ. ಇತ್ತೀಚಿನ ದಿನಗಳಲ್ಲೂ ಇದು ಕಡಿಮೆಯಾಗುವ ಯಾವುದೇ ಲಕ್ಷಣಗಳು ಕಾಣಿಸುತ್ತಿಲ್ಲ. ಉದಾಹರಣೆಗೆ, ಮೇ 21ರ ಗುರುವಾರ ಒಂದೇ ದಿನದಲ್ಲಿ ಆರ್‌ಬಿಐ ಮುಕ್ತ ಮಾರುಕಟ್ಟೆಯಲ್ಲಿ ಕನಿಷ್ಠ 2 ಬಿಲಿಯನ್ ಡಾಲರ್ ಮಾರಾಟ ಮಾಡಿದೆ ಎಂದು ತಿಳಿದುಬಂದಿದೆ.

ಆದ್ದರಿಂದ, "ಮಾರುಕಟ್ಟೆಯ ಸಹಜ ವಿದ್ಯಮಾನಗಳು"ಎಂದು ಮೇಲ್ನೋಟಕ್ಕೆ ಕಾಣುವ ಕೆಲವು ಬೆಳವಣಿಗೆಗಳು, ವಾಸ್ತವದಲ್ಲಿ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿನ ಸಟ್ಟಾ [speculative] ಚಟುವಟಿಕೆಗಳನ್ನು ತಡೆಯಲು ಆರ್‌ಬಿಐ ತೆಗೆದುಕೊಳ್ಳುತ್ತಿರುವ ಕ್ರಮಗಳಿರಬಹುದು. ದೇಶೀಯ ಹಣಕಾಸು ಏಜೆಂಟರು ಮತ್ತು ವ್ಯಾಪಾರಿಗಳು ತಮಗೆ ನೀಡಲಾಗಿರುವ ವಿನಾಯಿತಿಗಳನ್ನು [deregulated powers] ಬಳಸಿಕೊಂಡು ರೂಪಾಯಿ ಮೌಲ್ಯ ಕುಸಿಯುತ್ತದೆ ಎಂದು  ಬಾಜಿ ಕಟ್ಟುತ್ತಿರುವ ಹಿನ್ನೆಲೆಯಲ್ಲಿ ಆರ್‌ಬಿಐ ಈ ಕ್ರಮ ಕೈಗೊಳ್ಳುತ್ತಿದೆ. ಆರ್‌ಬಿಐ ತೆಗೆದುಕೊಂಡಿರುವ ಇತರ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಈ ಹಿನ್ನಲೆಯಲ್ಲಿ ಅರ್ಥಮಾಡಿಕೊಳ್ಳಬಹುದು. ಮಾರ್ಚ್ ತಿಂಗಳಲ್ಲಿ, ಆರ್‌ಬಿಐ ಬ್ಯಾಂಕ್‌ಗಳ 'ನೆಟ್ ಓಪನ್ ರುಪೀ ಪೊಸಿಷನ್' ಮೇಲೆ 100 ಮಿಲಿಯನ್ ಡಾಲರ್‌ಗಳ ಲಿಮಿಟ್ ಹಾಕಿತ್ತು. **(ಅನುವಾದಕರ ಟಿಪ್ಪಣಿ:** ಬ್ಯಾಂಕ್‌ಗಳು 'ರೂಪಾಯಿ ಬೆಲೆ ಕುಸಿಯುತ್ತೆ' ಅಂತ ಅಂದಾಜು ಮಾಡಿ, ಡಾಲರ್‌ಗಳನ್ನ ಮಾರ್ಕೆಟ್‌ಗೆ ಬಿಡದೆ ತಮ್ಮಲ್ಲೇ ಉಳಿಸಿಕೊಳ್ಳುವುದಕ್ಕೆ ಓಪನ್ ಪೊಸಿಷನ್ ಅನ್ನುತ್ತಾರೆ. ಆರ್‌ಬಿಐ ಈ ಮಿತಿಯನ್ನು ಹಾಕುವ ಸಮಯಕ್ಕೆ  ಬ್ಯಾಂಕ್‌ಗಳ ಬಳಿ ಈ ತರಹ ಬರೋಬ್ಬರಿ 25 ಬಿಲಿಯನ್ ಡಾಲರ್‌ಗಳಷ್ಟು ಹಣ ಜಮೆಯಾಗಿತ್ತು ಅನ್ನುವ ಅಂದಾಜಿದೆ!)

ಆದ್ರೆ ಆರ್‌ಬಿಐ ಮಾಡಿದ ಈ ಪ್ಲಾನ್‌ನಿಂದ ಅಂತಹ ಪ್ರಯೋಜನವೇನೂ ಆಗಲಿಲ್ಲ. ಯಾಕೆಂದರೆ, ಬ್ಯಾಂಕ್‌ಗಳು ಆ ಡಾಲರುಗಳನ್ನು ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪೆನಿಗಳಿಗೆ ರವಾನಿಸಿ ಈ ನಿಯಮದಿಂದ ಸಲೀಸಾಗಿ ತಪ್ಪಿಸಿಕೊಂಡುಬಿಟ್ಟವು. ಇದನ್ನು ಗಮನಿಸಿದ ಆರ್‌ಬಿಐ ಏಪ್ರಿಲ್ ತಿಂಗಳ ಪ್ರಾರಂಭದಲ್ಲಿ ಇನ್ನೊಂದು ಕಠಿಣ ನಿಯಮವನ್ನು ಜಾರಿಗೆ ತಂದಿತು. ಬ್ಯಾಂಕ್‌ಗಳು ತಮ್ಮ ಕಸ್ಟಮರ್‌ಗಳಿಗೆ (ಅವರು ಇಂಡಿಯಾದವರೇ ಆಗಿರಲಿ ಅಥವಾ ವಿದೇಶಿಯವರೇ ಆಗಿರಲಿ) 'ರುಪೀ ನಾನ್–ಡೆಲಿವರೇಬಲ್ ಫಾರ್ವರ್ಡ್ಸ್'ಅನ್ನು ನೀಡುವುದನ್ನು ನಿಷೇಧಿಸಿತು. **(ಅನುವಾದಕರ ಟಿಪ್ಪಣಿ:** ಅಂದರೆ ಮುಂದೆ ಯಾವಾಗಲೋ ರೂಪಾಯಿ ಬೆಲೆ ಕುಸಿಯುತ್ತೆ ಅನ್ನೋದರ ಮೇಲೆ ಈಗಲೇ ಕಟ್ಟೋ ಒಂಥರಾ ಫಾರ್ವರ್ಡ್ ಬೆಟ್ಟಿಂಗ್ ಒಪ್ಪಂದ ಇದು). ಅಷ್ಟೇ ಅಲ್ಲದೆ, ಒಮ್ಮೆ ರದ್ದಾದ ಈ ತರಹದ ಕಾಂಟ್ರಾಕ್ಟ್‌ಗಳನ್ನ ಕಂಪನಿಗಳು ಮತ್ತೆ ರಿ–ಬುಕ್ ಮಾಡುವುದನ್ನೂ ನಿಷೇಧಿಸಿತು.

ಹಾಗಾಗಿ, ಆರ್‌ಬಿಐ ಈಗ ಮುಖ್ಯವಾಗಿ 'ಸಟ್ಟಾ ವಹಿವಾಟುಗಳ'  ವಿರುದ್ಧ ಹೋರಾಡುತ್ತಿದೆ. ದೇಶದ ಒಳಗೇ ಹಲವಾರು ನಿಯಮಗಳನ್ನು ಸಡಿಲಿಸಿ ರೂಪಾಯಿ ಮೌಲ್ಯದ ಮುಕ್ತ ವ್ಯಾಪಾರಕ್ಕೆ [onshore trading] ಅವಕಾಶ ಕೊಟ್ಟ ಮೇಲೆ ಈಗ ಇಂತಹ  ಇಂತಹ ವಹಿವಾಟುಗಳನ್ನು ನಿಯಂತ್ರಿಸುವುದು ನಿಜವಾಗಿಯೂ ಕಷ್ಟ. ಜಾಗತಿಕ ಆರ್ಥಿಕ ಅನಿಶ್ಚಿತತೆ ಮುಂದುವರಿದಂತೆ, ಇಂತಹ ಊಹಾತ್ಮಕ ವಹಿವಾಟುಗಳು ಈಗಿರುವ ಆರ್ಥಿಕ ಒತ್ತಡಗಳನ್ನು ಮತ್ತಷ್ಟು ಹೆಚ್ಚಿಸುತ್ತವೆ ಮತ್ತು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತವೆ ಎಂದು ಮೊದಲೇ ನಿರೀಕ್ಷಿಸಲಾಗಿತ್ತು. ಹೀಗಾಗಿ, ಹಣಕಾಸು ವಲಯದಲ್ಲಿ ಕಟ್ಟುನಿಟ್ಟಾದ ನಿಯಂತ್ರಣ ಕ್ರಮಗಳ ಅಗತ್ಯತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿ ಎದ್ದು ಕಾಣುತ್ತಿದೆ.

ಲೇಖಕರು

**C.P. Chandrasekhar** is a former Professor of Economics at Jawaharlal Nehru University. His areas of interest include the macroeconomics of development and the role of finance and industry in developing countries.

Jayati Ghosh: Indian development economist; served 35 years at JNU; currently Professor of Economics at UMass Amherst; wrote 20+ books and 200+ scholarly articles; founderSecretary of IDEAs; served on U.N. advisory boards

**English version first appeared in Business Line.**

# ರೂಪಾಯಿ ತನ್ನ ಕೆಲಸ ಮಾಡಲಿ

ಗೀತಾ ಗೋಪಿನಾಥ್ ರೂಪಾಯಿ ಮೌಲ್ಯದ ಕುಸಿತದ ಬಗ್ಗೆ ಸ್ವಲ್ಪ ಭಿನ್ನವಾದ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಸ್ಥೂಲವಾಗಿ ಅವರ ಅಭಿಪ್ರಾಯ ಹೀಗಿದೆ.

ನಾವು ಹೊರದೇಶದಿಂದ ತರಿಸಿಕೊಳ್ಳುವ ಸಾಮಗ್ರಿಗಳ ಬಿಲ್ ಕಡಿಮೆ ಮಾಡಲು ಮತ್ತು ವಿದೇಶಿ ವಿನಿಮಯವನ್ನು ಉಳಿಸಲು ಪ್ರಧಾನಿ ಮೋದಿ ಅವರು ಜನರಿಗೆ ಒಂದು ಕರೆ ಕೊಟ್ಟಿದ್ದಾರೆ. ಜನರು ತಾವಾಗಿಯೇ ಕೆಲವು ವಿಷಯಗಳಲ್ಲಿ ನಿಯಂತ್ರಣ ಹಾಕಿಕೊಳ್ಳಬೇಕು ಎಂದು ಹೇಳಿದ್ದಾರೆ:

ನಿಜವಾದ ಪ್ರಶ್ನೆ: ಡಾಲರ್ ಕರಗುತ್ತಾ? ರೂಪಾಯಿ ಕುಸಿಯುತ್ತಾ?

ಇಲ್ಲಿ ನಾವು ಒಂದು ವಿಷಯವನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು. ಭಾರತದ ಹತ್ತಿರ ಸದ್ಯಕ್ಕೆ ಸುಮಾರು 700 ಬಿಲಿಯನ್ ಡಾಲರ್‌ನಷ್ಟು ಭಾರಿ ಪ್ರಮಾಣದ ವಿದೇಶಿ ಹಣದ ಸಂಗ್ರಹ ಇದೆ. ನಾವು ಹೆಚ್ಚು ಇಂಪೋರ್ಟ್ ಮಾಡಿಕೊಂಡ ತಕ್ಷಣ ಈ ದುಡ್ಡು ಖಾಲಿಯಾಗಿಬಿಡುವುದಿಲ್ಲ. ಇದು ಖಾಲಿಯಾಗುವುದು ಯಾವಾಗ ಅಂದರೆ, ರಿಸರ್ವ್ ಬ್ಯಾಂಕ್ ರೂಪಾಯಿ ಮೌಲ್ಯ ಕುಸಿಯದಂತೆ ತಡೆಯಲು ತನ್ನ ಬಳಿ ಇರುವ ಡಾಲರ್‌ಗಳನ್ನು ಮಾರುಕಟ್ಟೆಯಲ್ಲಿ ಮಾರಲು ಶುರು ಮಾಡಿದಾಗ ಮಾತ್ರ. ಹಾಗಾಗಿ, ಈಗಿರುವ ನಿಜವಾದ ಪ್ರಶ್ನೆ "ನಮ್ಮ ಹತ್ತಿರ ಇರೋ ದುಡ್ಡು ಖಾಲಿಯಾಗುತ್ತಾ?" ಅನ್ನೋದಲ್ಲ, ಬದಲಾಗಿ "ಆರ್‌ಬಿಐ ರೂಪಾಯಿ ಮೌಲ್ಯವನ್ನು ಬಲವಂತವಾಗಿ ಕಾಪಾಡಲು ಹೋಗಬೇಕಾ ಬೇಡವಾ?" ಎನ್ನುವುದು.

**ರೂಪಾಯಿ ತಾನಾಗಿಯೇ ಇಳಿದರೆ ಏನಾಗುತ್ತೆ?**

ರೂಪಾಯಿ ಮೌಲ್ಯ ಕಮ್ಮಿಯಾಗಲು ಬಿಡುವುದರಲ್ಲಿ ಒಂದು ದೊಡ್ಡ ಲಾಭವಿದೆ: ರೂಪಾಯಿ ದುರ್ಬಲಗೊಂಡಾಗ, ವಿದೇಶದಿಂದ ಬರುವ ಸಾಮಗ್ರಿಗಳ ಬೆಲೆ ಮತ್ತು ವಿದೇಶಿ ಪ್ರವಾಸಗಳ ಖರ್ಚು ಭಾರತದ ರೂಪಾಯಿ ಲೆಕ್ಕದಲ್ಲಿ ದುಬಾರಿಯಾಗುತ್ತದೆ. ಆಗ ಜನರು ಮತ್ತು ಕಂಪನಿಗಳು ತಾವಾಗಿಯೇ ಯೋಚನೆ ಮಾಡಿ, ದೇಶದ ಆರ್ಥಿಕತೆಗೆ ಹೊರೆಯಾಗುವಂತಹ ವಸ್ತುಗಳ ಬಳಕೆಯನ್ನು ಕಡಿಮೆ ಮಾಡುತ್ತಾರೆ. ಪ್ರಧಾನಿ ಮೋದಿ ಅವರು ಜನರಲ್ಲಿ ಕೇಳಿಕೊಂಡ "ಸ್ವಯಂ ನಿಯಂತ್ರಣ"ವನ್ನು, ಈ ಬೆಲೆ ಏರಿಕೆಯು ಇನ್ನು ಸುಲಭವಾಗಿ ಮತ್ತು ದೀರ್ಘಕಾಲದವರೆಗೆ ಜನರಲ್ಲಿ ತರಬಲ್ಲದು.

**ರೂಪಾಯಿಯನ್ನು ಯಾವಾಗ ಕಾಪಾಡಬೇಕು?**

ಖಂಡಿತವಾಗಿ, ಕೆಲವು ಸಂದರ್ಭಗಳಲ್ಲಿ ಕರೆನ್ಸಿ ಮೌಲ್ಯವನ್ನು ಬಲವಂತವಾಗಿ ಕಾಪಾಡುವುದು ಸರಿ. ರೂಪಾಯಿ ಕುಸಿತದಿಂದ ದೇಶದ ಹಣಕಾಸು ವ್ಯವಸ್ಥೆಗೆ ತೊಂದರೆಯಾಗುವಂತಿದ್ದರೆ, ಮಾರುಕಟ್ಟೆಯಲ್ಲಿ ಅತಿಯಾದ ಸಟ್ಟಾ ವ್ಯಾಪಾರ ನಡೆಯುತ್ತಿದ್ದರೆ ಅಥವಾ ಹಣದುಬ್ಬರ ಮಿತಿ ಮೀರುತ್ತಿದ್ದರೆ ಆರ್‌ಬಿಐ ಮಧ್ಯಪ್ರವೇಶ ಮಾಡಬೇಕು.

ಆದರೆ, ಇವತ್ತಿನ ಭಾರತದಲ್ಲಿ ಇಂತಹ ಯಾವುದೇ ಭಯ ಕಾಣಿಸುತ್ತಿಲ್ಲ. ನಮ್ಮ ದೇಶದಲ್ಲಿ ಹಣದುಬ್ಬರ ನಿಯಂತ್ರಣದಲ್ಲಿದೆ ಮತ್ತು ನಮ್ಮ ಬ್ಯಾಂಕುಗಳಿಗೆ ವಿದೇಶಿ ಕರೆನ್ಸಿಯಿಂದ ದೊಡ್ಡ ಅಪಾಯವೇನೂ ಇಲ್ಲ. ಹಳೇ ದಿನಗಳಿಗೆ ಹೋಲಿಸಿದರೆ, ಇವತ್ತು ಭಾರತದ ಆರ್ಥಿಕ ಪರಿಸ್ಥಿತಿ ಇಂತಹ ಹೊರಗಿನ ಆಘಾತಗಳನ್ನು ತಡೆದುಕೊಳ್ಳುವಷ್ಟು ಗಟ್ಟಿಯಾಗಿದೆ.

**ರೂಪಾಯಿ ಮೌಲ್ಯ ಒಂದು 'ಶಾಕ್ ಅಬ್ಸಾರ್ಬರ್' ಇದ್ದಂತೆ**

ರೂಪಾಯಿಯ ಮೌಲ್ಯ ಇಷ್ಟೇ ಇರಬೇಕು ಎಂದು ಹಠ ಹಿಡಿಯುವುದರಲ್ಲಿ ಯಾವುದೇ ಅರ್ಥವಿಲ್ಲ. ವಿನಿಮಯ ದರ ಎನ್ನುವುದು ಒಂದು ದೇಶದ ಕರೆನ್ಸಿಗೆ ಹೋಲಿಸಿದರೆ ಮತ್ತೊಂದರ ಬೆಲೆ ಅಷ್ಟೇ. ಅದು ಸರ್ಕಾರದ ಗುರಿಯಾಗಬಾರದು. ಅದರ ಅಸಲಿ ಕೆಲಸವೇ 'ಶಾಕ್ ಅಬ್ಸಾರ್ಬರ್' ತರಹ ಇರುವುದು. ಹೊರಗಿನಿಂದ ಏನಾದರೂ ತೊಂದರೆ ಬಂದು (ಉದಾಹರಣೆಗೆ ಕಚ್ಚಾ ತೈಲದ ಬೆಲೆ ಏರಿಕೆ) ನಮ್ಮ ಬಿಲ್ ಜಾಸ್ತಿಯಾದಾಗ, ಕರೆನ್ಸಿ ಮೌಲ್ಯ ತಾನಾಗಿಯೇ ಬದಲಾಗಲು ಬಿಟ್ಟರೆ ಅದು ಇಡೀ ಆರ್ಥಿಕತೆಯನ್ನು ಕಾಪಾಡುತ್ತದೆ. ಅದನ್ನು ಬಲವಂತವಾಗಿ ತಡೆಯಲು ಹೋದರೆ, ಮುಂದೆ ದೊಡ್ಡ ಗಂಡಾಂತರ ಎದುರಿಸಬೇಕಾಗುತ್ತದೆ.

ವಿಶೇಷವಾಗಿ ಇವತ್ತಿನ ಜಗತ್ತಿನಲ್ಲಿ ವಿದೇಶಿ ಹೂಡಿಕೆದಾರರು ತುಂಬಾ ವೇಗವಾಗಿ ಹಣವನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಬದಲಾಯಿಸುತ್ತಾರೆ. ಹೂಡಿಕೆದಾರರು ಇಂಪೋರ್ಟ್-ಎಕ್ಸ್‌ಪೋರ್ಟ್ ನೋಡುವುದಕ್ಕಿಂತ ಹೆಚ್ಚಾಗಿ ಎಲ್ಲಿ ಲಾಭ ಸಿಗುತ್ತದೆ ಎಂದು ನೋಡುತ್ತಾರೆ. ಸದ್ಯಕ್ಕೆ ಅಮೆರಿಕಾದಲ್ಲಿ ಬಡ್ಡಿ ದರಗಳು ಹೆಚ್ಚಿರುವುದರಿಂದ ಹೂಡಿಕೆದಾರರು ಡಾಲರ್ ಕಡೆಗೆ ಓಡುತ್ತಿದ್ದಾರೆ. ಇಂತಹ ಸಮಯದಲ್ಲಿ ನಾವು ರೂಪಾಯಿ ಮೌಲ್ಯವನ್ನು ಕೃತಕವಾಗಿ ಹಿಡಿದಿಟ್ಟುಕೊಳ್ಳಲು ನೋಡಿದರೆ, ಹೂಡಿಕೆದಾರರಿಗೆ "ಮುಂದೊಂದು ದಿನ ರೂಪಾಯಿ ಬಿದ್ದೇ ಬೀಳುತ್ತೆ" ಅನ್ನೋ ಅನುಮಾನ ಬಂದು ಅವರು ತಮ್ಮ ಹಣವನ್ನು ಭಾರತದಿಂದ ವಾಪಸ್ ತಗೊಂಡು ಹೋಗಿಬಿಡುತ್ತಾರೆ. ಇದು ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತದೆ. ಅದೇ ರೂಪಾಯಿಗೆ ಸ್ವತಂತ್ರ ಕೊಟ್ಟರೆ, ಇಂಪೋರ್ಟ್ ಕಮ್ಮಿಯಾಗಿ, ಎಕ್ಸ್‌ಪೋರ್ಟ್ ಲಾಭ ತಂದುಕೊಟ್ಟು, ವಿದೇಶಿ ಹಣ ತಾನಾಗಿಯೇ ಹರಿದು ಬರುತ್ತದೆ.

**ಪೆಟ್ರೋಲ್-ಡೀಸೆಲ್ ಬೆಲೆಯ ಕಥೆ**

ಮತ್ತೊಂದು ಮುಖ್ಯ ವಿಷಯ ಎಂದರೆ ಇಂಧನದ ಬೆಲೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಮಾರ್ಕೆಟ್ ರೇಟ್‌ಗಿಂತ ಕಡಿಮೆ ಇಟ್ಟು ಜನರನ್ನು ಕಾಪಾಡುವುದು ಸರ್ಕಾರಕ್ಕೆ ಒಳ್ಳೆಯ ಹೆಸರನ್ನೇನೋ ತರಬಹುದು. ಆದರೆ ಇದರಿಂದ ದೇಶದ ಬೊಕ್ಕಸಕ್ಕೆ ಭಾರಿ ನಷ್ಟವಾಗುತ್ತದೆ (ವರ್ಷಕ್ಕೆ ಜಿಡಿಪಿಯ ಶೇಕಡಾ 0.6ರಷ್ಟು ನಷ್ಟ). ಇದು ಆರ್ಥಿಕತೆ ತಾನಾಗಿಯೇ ಚೇತರಿಸಿಕೊಳ್ಳುವ ದಾರಿಯನ್ನು ಮುಚ್ಚಿಹಾಕುತ್ತದೆ. ಬೆಲೆಯನ್ನು ಕೃತಕವಾಗಿ ಕಡಿಮೆ ಇಟ್ಟರೆ ಜನರು ಇಂಧನ ಉಳಿಸುವ ಬಗ್ಗೆ ಯೋಚಿಸುವುದೇ ಇಲ್ಲ. ಅದರಲ್ಲೂ ಹೆಚ್ಚು ಕಾರು, ಬಂಗಲೆ ಹೊಂದಿರುವ ಶ್ರೀಮಂತರೇ ಇದರ ದೊಡ್ಡ ಲಾಭ ಪಡೆತಾರೆ. ಇತ್ತೀಚೆಗೆ ಸರ್ಕಾರ ಮಾಡಿದಂತೆ, ಬೆಲೆಯನ್ನು ಮಾರುಕಟ್ಟೆಗೆ ತಕ್ಕಂತೆ ಬಿಟ್ಟರೆ ಜನರು ತಾವಾಗಿಯೇ ಪೆಟ್ರೋಲ್ ಉಳಿಸಲು ಶುರು ಮಾಡುತ್ತಾರೆ. ಬಡವರಿಗೆ ತೊಂದರೆಯಾಗದಂತೆ ಅವರಿಗೆ ನೇರವಾಗಿ ನಗದು ಸಹಾಯ ಮಾಡಬಹುದು.

**ರೂಪಾಯಿ ತನ್ನ ಕೆಲಸ ಮಾಡಲಿ**

ಪ್ರಧಾನಿ ಮೋದಿ ಅವರು ಹೇಳಿದ ಸ್ವಯಂ ನಿಯಂತ್ರಣದಲ್ಲಿ ಕೆಲವು ಒಳ್ಳೆಯ ವಿಷಯಗಳಿವೆ. ಸಾರ್ವಜನಿಕ ಸಾರಿಗೆ ಬಳಸುವುದು ಅಥವಾ ವರ್ಕ್ ಫ್ರಮ್ ಹೋಮ್ ಮಾಡುವುದರಿಂದ ಟ್ರಾಫಿಕ್ ಮತ್ತು ಮಾಲಿನ್ಯ ಕಮ್ಮಿಯಾಗುತ್ತದೆ. ಇದು ಯಾವಾಗಲೂ ಒಳ್ಳೆಯದೇ. ಆದರೆ, ನಿಜವಾದ ಬದಲಾವಣೆ ಬರಬೇಕು ಎಂದರೆ ರೂಪಾಯಿ ಮೌಲ್ಯ ಇಳಿಯಲು ಬಿಡಬೇಕು ಮತ್ತು ಬೆಲೆಗಳು ಮಾರುಕಟ್ಟೆಗೆ ತಕ್ಕಂತೆ ಇರಬೇಕು. ಇದು ಜನರನ್ನು ತಾವಾಗಿಯೇ ಬದಲಾಗುವಂತೆ ಮಾಡುತ್ತದೆ.

ಆರ್‌ಬಿಐ ಕೂಡ ತಾನು ಯಾವಾಗ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸುತ್ತೇನೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ನಮ್ಮ ಗುರಿ ರೂಪಾಯಿಯನ್ನು ಒಂದು ನಿರ್ದಿಷ್ಟ ನಂಬರ್‌ನಲ್ಲಿ ಇಡುವುದಲ್ಲ, ಬದಲಾಗಿ ದೇಶದ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಎಂಬುದನ್ನು ಮನವರಿಕೆ ಮಾಡಿಕೊಡಬೇಕು. ಮುಂದೆ ಬರಲಿರುವ ಕಷ್ಟದ ದಿನಗಳಿಗಾಗಿ ಆರ್‌ಬಿಐ ತನ್ನ ಬಳಿ ಇರುವ ಡಾಲರ್ ನಿಧಿಯನ್ನು ಜಾಗರೂಕತೆಯಿಂದ ಕಾಯ್ದಿರಿಸಿಕೊಳ್ಳಬೇಕು.

ದೂರದೃಷ್ಟಿಯಿಂದ ನೋಡಿದರೆ ಭಾರತದ ಬೆಳವಣಿಗೆಯ ಹಾದಿ ಚೆನ್ನಾಗಿದೆ. ಹೊಸ ಹೊಸ ಸುಧಾರಣೆಗಳು ಬಂದು, ವಿದೇಶಿ ಹೂಡಿಕೆ ಹೆಚ್ಚಾಗಿ, ಪೆಟ್ರೋಲ್ ಬದಲಿಗೆ ನವೀಕರಿಸಬಹುದಾದ ಇಂಧನ ಬಳಕೆಗೆ ಬಂದರೆ ರೂಪಾಯಿ ಮೌಲ್ಯ ಭವಿಷ್ಯದಲ್ಲಿ ತಾನಾಗಿಯೇ ಹೆಚ್ಚಾಗುತ್ತದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಹೊರಗಿನ ಆಘಾತಗಳನ್ನು ತಡೆಯಬೇಕಾದರೆ ಹಠ ಮಾಡುವುದನ್ನು ಬಿಟ್ಟು ಬದಲಾವಣೆಗೆ ಒಗ್ಗಿಕೊಳ್ಳಬೇಕು. ಸ್ವಯಂ ನಿಯಂತ್ರಣಕ್ಕಿಂತ, ಬೆಲೆ ಏರಿಕೆ ಮತ್ತು ರೂಪಾಯಿ ಕುಸಿತವೇ ದೊಡ್ಡ ಬದಲಾವಣೆ ತರಬಲ್ಲದು. ಆದ್ದರಿಂದ, ರೂಪಾಯಿಗೆ ಬಿಟ್ಟುಬಿಡಿ, ಅದು ತನ್ನ ಕೆಲಸ ತಾನು ಮಾಡಲಿ!

# ಟ್ರಂಪ್ ಅವರ ಸುಂಕದ ಯುದ್ಧದ ಹಿಂದಿರುವ ಗ್ಯಾಂಗ್‌ಸ್ಟರ್ ತರ್ಕ



**ಲೇಖಕರು: ಆನ್ ಓ. ಕ್ರೂಗರ್**

ಡೊನಾಲ್ಡ್ ಟ್ರಂಪ್ ಅವರು ತಮ್ಮ ಎರಡನೇ ಅವಧಿಯಲ್ಲಿ ಬೆದರಿಸುವುದು ಮತ್ತು ಒತ್ತಡ ಹೇರುವುದನ್ನೇ ಅಮೆರಿಕದ ಪ್ರಮುಖ ರಾಜತಾಂತ್ರಿಕ ನೀತಿಯನ್ನಾಗಿ ಮಾಡಿಕೊಂಡಿದ್ದಾರೆ. ಇದಕ್ಕಾಗಿ ಅವರು ಸುಂಕಗಳು ಮತ್ತು ನಿರ್ಬಂಧಗಳನ್ನು [sanctions] ಅಸ್ತ್ರವನ್ನಾಗಿಸಿಕೊಂಡಿದ್ದಾರೆ. ಮಿತ್ರ ರಾಷ್ಟ್ರಗಳು ಹಾಗೂ ಶತ್ರು ರಾಷ್ಟ್ರಗಳೆಂದು ಬೇಧವೆಣಿಸದೆ, ಎಲ್ಲಾ ದೇಶಗಳ ಮೇಲೆ ಆರ್ಥಿಕ ಒತ್ತಡ ಹೇರುತ್ತಿದ್ದಾರೆ. ಈ ಗ್ಯಾಂಗ್‌ಸ್ಟರ್ ತರಹದ ಧೋರಣೆಯಿಂದ ಅಮೆರಿಕ ಮತ್ತು ಜಾಗತಿಕ ಆರ್ಥಿಕತೆಗೆ ದಿನೇ ದಿನೇ ಅಪಾರ ನಷ್ಟವಾಗುತ್ತಿದೆ. ಇದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಶ್ವೇತಭವನಕ್ಕೆ ಮರಳಿದ ತಕ್ಷಣ ಟ್ರಂಪ್ ಒಂದು ವಿಷಯವನ್ನು ಸ್ಪಷ್ಟಪಡಿಸಿದರು. ಅವರು ಸುಂಕಗಳನ್ನು ವ್ಯಾಪಾರ ನೀತಿಯಾಗಿ ನೋಡುತ್ತಿಲ್ಲ. ಬದಲಿಗೆ ಅವುಗಳನ್ನು ಒಂದು ಆಯುಧವಾಗಿ ಬಳಸುತ್ತಿದ್ದಾರೆ. ಏಪ್ರಿಲ್ 2025ರಲ್ಲಿ, ಅವರು ತಮ್ಮ "ಲಿಬರೇಷನ್ ಡೇ" ಸುಂಕಗಳನ್ನು ಪ್ರಕಟಿಸಿದರು. ಆ ಮೂಲಕ ಕೆಲವು ನಿರ್ದಿಷ್ಟ ದೇಶಗಳ ಆಮದು ಸರಕುಗಳ ಮೇಲೆ ಭಾರಿ ತೆರಿಗೆಯನ್ನು ಹೇರಲಾಯಿತು. ಅಮೆರಿಕದ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ಇದನ್ನು ಪ್ರಾರಂಭಿಸಲಾಯಿತು. ಆದರೆ ಈ ಸುಂಕದ ದರಗಳಿಗೂ ಆರ್ಥಿಕ ವಾಸ್ತವಕ್ಕೂ ಯಾವುದೇ ಸಂಬಂಧವಿರಲಿಲ್ಲ. ಬದಲಿಗೆ, ಇತರ ದೇಶಗಳಿಂದ ತಮಗೆ ಬೇಕಾದ ರಿಯಾಯಿತಿಗಳನ್ನು ಪಡೆದುಕೊಳ್ಳುವುದು ಇದರ ಉದ್ದೇಶವಾಗಿತ್ತು. ಯಾವ ದೇಶಗಳು ತಮ್ಮ ದೇಶದ ವ್ಯಾಪಾರ ನಿಯಮಗಳನ್ನು ಸಡಿಲಗೊಳಿಸುತ್ತವೆಯೋ, ಆ ದೇಶಗಳಿಗೆ ಸುಂಕವನ್ನು ಕಡಿಮೆ ಮಾಡುವುದಾಗಿ ಟ್ರಂಪ್ ಸರ್ಕಾರ ಭರವಸೆ ನೀಡಿತು.

ಆದರೆ, ವಾಸ್ತವದಲ್ಲಿ ಈ ಕ್ರಮದಿಂದ ಮಾರುಕಟ್ಟೆಯಲ್ಲಿ ತೀವ್ರವಾದ ಅನಿಶ್ಚಿತತೆ ಸೃಷ್ಟಿಯಾಯಿತು. ಇದರಿಂದ ರಫ್ತು ಮತ್ತು ಆಮದು ಮಾಡುವವರಿಬ್ಬರಿಗೂ ಭಾರಿ ನಷ್ಟವಾಯಿತು. ಇದರ ಜೊತೆಗೆ ಟ್ರಂಪ್ ಅವರ ಎರ್ರಾಬಿರ್ರಿ  ನಡವಳಿಕೆ ಸಮಸ್ಯೆಯನ್ನು ಮತ್ತಷ್ಟು ತೀವ್ರಗೊಳಿಸಿತು. ಯಾವುದೇ ಮುನ್ಸೂಚನೆ ಅಥವಾ ಸ್ಪಷ್ಟ ಕಾರಣವಿಲ್ಲದೆ ಸುಂಕದ ದರಗಳನ್ನು ಪದೇ ಪದೇ ಘೋಷಿಸಲಾಗುತ್ತಿತ್ತು, ರದ್ದುಗೊಳಿಸಲಾಗುತ್ತಿತ್ತು, ಮತ್ತೆ ಜಾರಿಗೆ ತರಲಾಗುತ್ತಿತ್ತು, ಏರಿಸಲಾಗುತ್ತಿತ್ತು.


ನ್ಯಾಯಾಲಯಗಳು ಸರ್ಕಾರದ ನಿರ್ಧಾರಗಳಿಗೆ ತಡೆಹಾಕಲು ಆರಂಭಿಸಿದಾಗ ಗೊಂದಲ ಇನ್ನಷ್ಟು ತೀವ್ರಗೊಂಡಿತು. ಇಂಟರ್ನ್ಯಾಷನಲ್ ಎಮರ್ಜೆನ್ಸಿ ಎಕನಾಮಿಕ್ ಪವರ್ಸ್ ಆಕ್ಟ್ (1977) ಅಡಿಯಲ್ಲಿ ತಮಗೆ ನೀಡಲಾದ ಸುಂಕದ ಅಧಿಕಾರವನ್ನು ಮೀರಿ ಟ್ರಂಪ್ ವರ್ತಿಸಿದ್ದಾರೆ ಎಂದು ಫೆಬ್ರವರಿಯಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತು. ಇದೇ ತಿಂಗಳ ಆರಂಭದಲ್ಲಿ, ಅಂತರರಾಷ್ಟ್ರೀಯ ವ್ಯಾಪಾರ ನ್ಯಾಯಾಲಯವು [Court of International Trade] ಸಹ ಇದೇ ಹಾದಿ ಹಿಡಿದು, 1974ರ ವ್ಯಾಪಾರ ಕಾಯ್ದೆಯ ಸೆಕ್ಷನ್ 122ರ ಅಡಿಯಲ್ಲಿ ಬಹುತೇಕ ಎಲ್ಲಾ ದೇಶಗಳ ಆಮದಿನ ಮೇಲೆ ಶೇಕಡಾ 10ರಷ್ಟು ಸಗಟು ಸುಂಕ ವಿಧಿಸಲು ಟ್ರಂಪ್ ಮಾಡಿದ್ದ ಪ್ರಯತ್ನವನ್ನು ಕಾನೂನುಬಾಹಿರ ಎಂದು ವಜಾಗೊಳಿಸಿತು.

ನಿರೀಕ್ಷೆಯಂತೆ, ಟ್ರಂಪ್ ಆಡಳಿತವು ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದೆ ಮತ್ತು ತನ್ನ ಸುಂಕದ ನೀತಿಯನ್ನು ಮುಂದುವರಿಸುವುದಕ್ಕೆ  ಇತರ ಮಾರ್ಗಗಳನ್ನು ಹುಡುಕುವುದಾಗಿ ಘೋಷಿಸಿದೆ. ಅಕ್ರಮವಾಗಿ ವ್ಯಾಪಾರ ಮಾಡುತ್ತಿವೆ ಎಂಬ ಆರೋಪದ ಮೇಲೆ, ಅದು ಈಗಾಗಲೇ 16 ದೇಶಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಂದಾಗಿದೆ. ಆದರೆ, ಕೇವಲ ಅಧ್ಯಕ್ಷೀಯ ಆದೇಶಗಳ [executive fiat] ಮೂಲಕವೇ ಆಡಳಿತ ನಡೆಸಲು ಟ್ರಂಪ್ ನಡೆಸುತ್ತಿರುವ ಪ್ರಯತ್ನಗಳನ್ನು ಸುಪ್ರೀಂ ಕೋರ್ಟ್ ತೀವ್ರ ಸಂಶಯದಿಂದ ನೋಡುತ್ತಿದೆ. ಹಾಗಾಗಿ ಟ್ರಂಪ್‌ಗೆ ತಾನು ಬಹಳಕಾಲದಿಂದ ಕನಸುಕಂಡಿದ್ದ ವ್ಯಾಪಕವಾದ ಸುಂಕದ ವ್ಯವಸ್ಥೆಯನ್ನು ಜಾರಿಗೆ ತರುವುದು ಕಷ್ಟವಾಗಬಹುದು.

ಹೀಗಿದ್ದರೂ, ಟ್ರಂಪ್ ಅವರು ಸುಂಕಗಳನ್ನು ಒಂದು ರೀತಿಯ "ಪ್ರೊಟೆಕ್ಷನ್ ರಾಕೆಟ್" (ಬೆದರಿಸಿ ಹಣ ವಸೂಲಿ ಮಾಡುವ ತಂತ್ರ) ಆಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜಪಾನ್, ದಕ್ಷಿಣ ಕೊರಿಯಾ, ತೈವಾನ್, ಸೌದಿ ಅರೇಬಿಯಾ ಮತ್ತು ಯುರೋಪಿಯನ್ ಯೂನಿಯನ್ ಸೇರಿದಂತೆ ಪ್ರಮುಖ ವ್ಯಾಪಾರ ಪಾಲುದಾರ ದೇಶಗಳ ಮೇಲೆ ಒತ್ತಡ ಹೇರಲು ಅವರು ವ್ಯಾಪಾರ ಮಾತುಕತೆಗಳನ್ನು ಬಳಸಿಕೊಳ್ಳುತ್ತಿದ್ದಾರೆ; ಆ ಮೂಲಕ ಅಮೆರಿಕದ ಆರ್ಥಿಕತೆಯಲ್ಲಿ ಭಾರಿ ಪ್ರಮಾಣದ ಹಣವನ್ನು ಹೂಡುವಂತೆ ಒತ್ತಾಯಿಸುತ್ತಿದ್ದಾರೆ.

ಜಪಾನ್ ಮತ್ತು ದಕ್ಷಿಣ ಕೊರಿಯಾದೊಂದಿಗೆ ಮಾಡಿಕೊಂಡ ಒಪ್ಪಂದಗಳು ಟ್ರಂಪ್ ಅವರ ಈ ಸುಂಕದ ರಾಜತಾಂತ್ರಿಕತೆಯ ನಿಜವಾದ ಸ್ವರೂಪವನ್ನು ತೋರಿಸುತ್ತದೆ. ಕಾರು ರಫ್ತು ಆ ಎರಡು ದೇಶಗಳ ಆರ್ಥಿಕತೆಯ ಬೆನ್ನೆಲುಬು. ಅದನ್ನು ಗುರಿ ಮಾಡಿಕೊಂಡು ಟ್ರಂಪ್ ಅದರ ಮೇಲೆ ಶೇಕಡಾ 25ರಷ್ಟು ಸುಂಕ ಹೇರಿದರು. ಅಮೇಲೆ ಜಪಾನ್ ಮೇಲಿನ ಸುಂಕವನ್ನು ಶೇಕಡಾ 27.5ಕ್ಕೆ ಏರಿಸಿದರು. ಅಮೆರಿಕದ ಅಕ್ಕಿ ಸೇರಿದಂತೆ ಹೆಚ್ಚಿನ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲು ಜಪಾನ್ ಒಪ್ಪಿದ ಮೇಲೆ ಈ ಸುಂಕವನ್ನು ಶೇಕಡಾ 15ಕ್ಕೆ ಇಳಿಸಿದರು. ಇದರ ಜೊತೆಗೆ, ಸೆಮಿಕಂಡಕ್ಟರ್‌ಗಳು, ಫಾರ್ಮಾಸ್ಯುಟಿಕಲ್ಸ್ (ಔಷಧ ವಲಯ) ಮತ್ತು ಹಡಗು ನಿರ್ಮಾಣದಂತಹ ಅಮೆರಿಕದ ಪ್ರಮುಖ ಉದ್ಯಮಗಳನ್ನು "ಪುನರ್ನಿರ್ಮಿಸಲು ಮತ್ತು ವಿಸ್ತರಿಸಲು" 550 ಬಿಲಿಯನ್ ಡಾಲರ್ ಹೂಡಿಕೆ ಮಾಡಲು ಜಪಾನ್ ಒಪ್ಪಿಕೊಂಡಿತು.

ಒಬ್ಬ ಅನುಭವಿ ಗ್ಯಾಂಗ್‌ಸ್ಟರ್ (ರೌಡಿ) ತರಹ, ಟ್ರಂಪ್ ಒಂದು ದೇಶದ ವಿರುದ್ಧ ಮತ್ತೊಂದು ದೇಶವನ್ನು ಎತ್ತಿಕಟ್ಟಲು ನೋಡಿದರು. ಜಪಾನ್ ಜೊತೆ ಮಾಡಿಕೊಂಡ ಒಪ್ಪಂದವನ್ನು ಬಳಸಿಕೊಂಡು ದಕ್ಷಿಣ ಕೊರಿಯಾದ



ಮೇಲೆ ಒತ್ತಡ ಹೇರಿದರು. ಅಮೆರಿಕ ವಿಧಿಸುವ ತೆರಿಗೆಯನ್ನು ಶೇಕಡಾ 15ಕ್ಕೆ ಇಳಿಸುವುದಾಗಿ ಹೇಳಿ, ಅದಕ್ಕೆ ಪ್ರತಿಯಾಗಿ ದಕ್ಷಿಣ ಕೊರಿಯಾ ಅಮೆರಿಕದಲ್ಲಿ 350 ಬಿಲಿಯನ್ ಡಾಲರ್ ಹಣವನ್ನು ಹೂಡಿಕೆ ಮಾಡುವಂತೆ ಮಾಡಿದರು.

ದಕ್ಷಿಣ ಕೊರಿಯಾ ತನ್ನ ಭದ್ರತೆಗಾಗಿ ಅಮೆರಿಕದ ಮೇಲೆಯೇ ಸಂಪೂರ್ಣವಾಗಿ ಅವಲಂಬಿತವಾಗಿರುವುದರಿಂದ, ಅವರ ಸಂಸತ್ತು ಬೇರೆ ದಾರಿಯಿಲ್ಲದೆ ಈ ಹೂಡಿಕೆಗೆ ಹಣ ಹೊಂದಿಸಲು ಒಂದು ಹೊಸ ಕಾನೂನನ್ನು ಜಾರಿಗೆ ತಂದಿತು. ಆದರೂ ಟ್ರಂಪ್‌ಗೆ ಇದು ಸಾಲದಾಗಿತ್ತು. ಕೊಟ್ಟ ಮಾತನ್ನು ದಕ್ಷಿಣ ಕೊರಿಯಾ ಉಳಿಸಿಕೊಂಡಿಲ್ಲ ಎಂದು ಆರೋಪಿಸಿದ ಟ್ರಂಪ್, ಜನವರಿಯಲ್ಲಿ ಅದರ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಮತ್ತೆ ಶೇಕಡಾ 25ಕ್ಕೆ ಏರಿಸಿದರು.

ದಕ್ಷಿಣ ಕೊರಿಯಾ ಹೂಡಿಕೆಯನ್ನು ಮಾಡುವುದಕ್ಕೆ ಹಿಂಜರಿದಿದ್ದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಯಾಕೆಂದರೆ, ಈ ಒಪ್ಪಂದದ ಪ್ರಕಾರ ದಕ್ಷಿಣ ಕೊರಿಯಾದ ಹಣವನ್ನು ಹೇಗೆ ಬಳಸಬೇಕು ಎಂಬುದನ್ನು ಪರೋಕ್ಷವಾಗಿ ಅಮೆರಿಕವೇ ನಿರ್ಧರಿಸುತ್ತಿತ್ತು. ಅಲ್ಲಿನ ವಾಣಿಜ್ಯ ಕಾರ್ಯದರ್ಶಿ ಹಾವರ್ಡ್ ಲುಟ್ನಿಕ್ ನೇತೃತ್ವದ ಹೂಡಿಕೆ ಸಮಿತಿಯು ಯೋಜನೆಗಳನ್ನು ಆಯ್ಕೆ ಮಾಡಿ, ಅಂತಿಮ ಅನುಮೋದನೆಗಾಗಿ ಟ್ರಂಪ್ ಮುಂದೆ ಅದನ್ನು ಮಂಡಿಸಬೇಕಿತ್ತು.

ಜೊತೆಗೆ, ಈ ಹೂಡಿಕೆಗಳಿಗೆ ಯಾವುದೇ ಆರ್ಥಿಕ ಸಮರ್ಥನೆಯೂ ಇರಲಿಲ್ಲ. ಈ ಯೋಜನೆಗಳು ನಿಜವಾಗಿಯೂ ಲಾಭದಾಯಕವೇ ಆಗಿದ್ದರೆ, ಖಾಸಗಿ ಕಂಪನಿಗಳು ತಾವಾಗಿಯೇ ಹೂಡಿಕೆ ಮಾಡುತ್ತಿದ್ದವು. ವಾಸ್ತವವಾಗಿ, ಟ್ರಂಪ್ ಉದ್ದೇಶಿಸಿರುವ ಉದ್ಯಮಗಳಿಗೆ ಇತರ ವಿದೇಶಿ ಕಂಪನಿಗಳಿಗೆ ಹೋಲಿಸಿದರೆ ಅಮೆರಿಕದಲ್ಲಿ ಉತ್ಪಾದನಾ ವೆಚ್ಚ ಬಹಳ ಜಾಸ್ತಿ. ಜಾಗತಿಕ ಮಟ್ಟದಲ್ಲಿ ದಕ್ಷಿಣ ಕೊರಿಯಾ ಮುಂಚೂಣಿಯಲ್ಲಿರುವ ಹಡಗು ನಿರ್ಮಾಣ ಉದ್ಯಮವೇ ಇದಕ್ಕೆ ಅತ್ಯುತ್ತಮ ಉದಾಹರಣೆ.

ಲಾಭದಾಯಕತೆ ಅನ್ನುವುದು ಕೇವಲ ಉತ್ಪಾದನೆಯ ಕ್ಷಮತೆಯನ್ನಷ್ಟೇ ಅವಲಂಬಿಸಿರುವುದಿಲ್ಲ. ತೆರಿಗೆಗಳು, ಸಬ್ಸಿಡಿಗಳು ಮತ್ತು ಸರ್ಕಾರದ ಇತರ ನೀತಿಗಳು ಕೂಡ ಮುಖ್ಯವಾಗುತ್ತವೆ. ಆದರೆ, ವಿದೇಶಿ ಹೂಡಿಕೆಯನ್ನು ರಾಜಕೀಯ ಲಾಭಕ್ಕಾಗಿ ತಮಗೆ ಬೇಕಾದ ಕಂಪನಿಗಳ ಕಡೆಗೆ ಬಲವಂತವಾಗಿ ತಿರುಗಿಸಿದ ತಕ್ಷಣವೇ, ಮುಕ್ತ ಉದ್ದಿಮೆಗಳು (free enterprise) ಮತ್ತು ಸರ್ಕಾರದ ಆಶ್ರಯದಲ್ಲಿ ನಡೆಯುವ ಉದ್ಯಮಗಳ ನಡುವೆ ವ್ಯತ್ಯಾಸವೇ ಉಳಿಯುವುದಿಲ್ಲ.

ಟ್ರಂಪ್ ಅವರ ಈ ಆರ್ಥಿಕ ಸುಲಿಗೆ ಇಲ್ಲಿಗೇ ನಿಲ್ಲುವುದಿಲ್ಲ. ಒಪ್ಪಂದದ ಪ್ರಕಾರ, ಹೂಡಿಕೆಗಾಗಿ ತಂದ ಸಾಲದ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸಿದ ನಂತರ, ಉಳಿಯುವ ನಿವ್ವಳ ಲಾಭದ ಶೇಕಡಾ 90ರಷ್ಟು ನೇರವಾಗಿ ಅಮೆರಿಕಕ್ಕೆ ಹರಿದು ಹೋಗುತ್ತದೆ! ವಿಶೇಷವೆಂದರೆ, ಅಮೆರಿಕ ಆರಂಭಿಕ ಹೂಡಿಕೆಯಲ್ಲಿ ಒಂದು ನಯಾಪೈಸೆಯನ್ನೂ ಹಾಕಿರುವುದಿಲ್ಲ.

ಇಲ್ಲಿ ಕೆಲವು ಪ್ರಶ್ನೆಗಳು ಉತ್ತರವಿಲ್ಲದೆ ಉಳಿದುಕೊಂಡಿವೆ. ಈ ಒಪ್ಪಂದಗಳನ್ನು ಹೇಗೆ ಜಾರಿಗೊಳಿಸಲಾಗುತ್ತದೆ? ಖಾಸಗಿ ಉದ್ದಿಮೆಗಳಿಗೆ ಎಷ್ಟು ಸಾರ್ವಜನಿಕ ಹಣ ಹರಿದು ಬರುತ್ತದೆ? ಮತ್ತು ಈ ಯೋಜನೆಗಳಿಗೆ ಸಂಬಂಧಿಸಿದಂತೆ ಗಂಭೀರವಾದ ಲಾಭ-ವೆಚ್ಚದ ವಿಶ್ಲೇಷಣೆಯನ್ನು ಮಾಡಲಾಗುತ್ತದೆಯೇ?

ಹೇಗೆ ಅರ್ಥಮಾಡಿಕೊಂಡರೂ ಇವನ್ನು ಹೂಡಿಕೆಗಾಗಿ ಮಾಡಿಕೊಂಡ ಒಪ್ಪಂದಗಳು ಎನ್ನುವುದಕ್ಕೆ ಸಾಧ್ಯವೇ ಇಲ್ಲ. ಬದಲಿಗೆ ಇವು ಬಲವಂತದಿಂದ ವಸೂಲಿ ಮಾಡುವ ಕಪ್ಪಕಾಣಿಕೆಯೋ ಅಥವಾ ಇನ್ನೂ ಕೆಟ್ಟದಾಗಿ ಹೇಳುವುದಾದರೆ ಲಂಚ ವಸೂಲಿಯ ತಂತ್ರವಾಗಿವೆ. ಇಷ್ಟೊಂದು ದೊಡ್ಡ ಆರ್ಥಿಕ ಹೊರೆಯನ್ನು ಹೊರುವುದಕ್ಕೆ ದಕ್ಷಿಣ ಕೊರಿಯಾ ಅಥವಾ ಬೇರೆ ಇನ್ಯಾವುದೇ ದೇಶಕ್ಕೂ ಸಾಧ್ಯವಿಲ್ಲ. ಇಷ್ಟು ದೊಡ್ಡ ಹೊರೆಯನ್ನು ಹೊತ್ತರೆ ಆ ದೇಶಗಳ ಆರ್ಥಿಕತೆ ಗಂಭೀರ ಆರ್ಥಿಕ ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಇಲ್ಲಿರುವ ದೊಡ್ಡ ವ್ಯಂಗ್ಯವೆಂದರೆ ಅಮೆರಿಕದ ವ್ಯಾಪಾರ ಹಾಗೂ ಚಾಲ್ತಿ ಖಾತೆಯಲ್ಲಿ ಆಗುತ್ತಿರುವ ಕೊರತೆಯನ್ನು ಕಡಿಮೆ ಮಾಡಲು ನಾನು ಈ ಸುಂಕಗಳನ್ನು ಹಾಕುತ್ತಿದ್ದೇನೆ ಎಂದು ಟ್ರಂಪ್ ಹೇಳುತ್ತಿದ್ದಾರೆ. ಆದರೆ, ಒಂದು ವೇಳೆ ವಿದೇಶಗಳಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಅಮೆರಿಕಕ್ಕೆ ಹಣ ಹರಿದು ಬಂದರೆ, ಅಲ್ಲಿನ ಡಾಲರ್ ಮೌಲ್ಯ ಇನ್ನು ಜಾಸ್ತಿಯಾಗುತ್ತದೆ. ಡಾಲರ್ ಬೆಲೆ ಹೆಚ್ಚಾದರೆ ವಿದೇಶಗಳಿಂದ ಅಮೆರಿಕಕ್ಕೆ ಬರುವ ಸರಕುಗಳ ಪ್ರಮಾಣ (ಆಮದು) ಇನ್ನು ಹೆಚ್ಚಾಗುತ್ತದೆ. ಆಗ, ಟ್ರಂಪ್ ಕಡಿಮೆ ಮಾಡಲು ಹೊರಟಿರುವ ನಷ್ಟದ ಪ್ರಮಾಣ ಇನ್ನೂ ಹೆಚ್ಚುತ್ತದೆ.

ಅದಕ್ಕಿಂತ ಕೆಟ್ಟ ವಿಷಯವೆಂದರೆ, ಅಮೆರಿಕ ಇನ್ನು ಮುಂದೆ ಮುಕ್ತ ಮಾರುಕಟ್ಟೆಯ ತತ್ವಗಳನ್ನು ಪಾಲಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಟ್ರಂಪ್ ಅವರ ಈ ನಡೆ ಅಮೆರಿಕದ ಉದ್ಯಮಗಳಿಗೆ ಮತ್ತು ವಿದೇಶಿ ಸರ್ಕಾರಗಳಿಗೆ ರವಾನಿಸುತ್ತಿದೆ. ಬದಲಿಗೆ, ದುರ್ಬಲ ದೇಶಗಳ ಮೇಲೆ ಸುಂಕದ ಭೀತಿ ಹುಟ್ಟಿಸಿ, ತನ್ನ ಆರ್ಥಿಕ ಬಲದ ಮೂಲಕ ಅವರ ಸಂಪತ್ತನ್ನು ದೋಚಲು ಅದು ಮುಂದಾಗುತ್ತಿದೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಮಾರುಕಟ್ಟೆಯ ಮುಕ್ತ ಪೈಪೋಟಿಯ ಬದಲಿಗೆ, ರಾಜಕೀಯ ಪಕ್ಷಪಾತವೇ ಮುಖ್ಯ ಮಾನದಂಡವಾದರೆ, ಅದರಿಂದ ಉಂಟಾಗುವ ಆರ್ಥಿಕ ಏರುಪೇರುಗಳು ಇಡೀ ಜಾಗತಿಕ ಆರ್ಥಿಕತೆಯ ಮೇಲೆ ಭೀಕರ ಪರಿಣಾಮ ಬೀರುವುದು ಖಂಡಿತ.

**ಲೇಖಕರ ಪರಿಚಯ:**

ಆನ್ ಒ. ಕ್ರೂಗರ್ ಅವರು ವಿಶ್ವ ಬ್ಯಾಂಕ್‌ನ ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞೆ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಯ [IMF] ಮಾಜಿ ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಇವರು ಪ್ರಸ್ತುತ ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಅಡ್ವಾನ್ಸ್ಡ್ ಇಂಟರ್‌ನ್ಯಾಶನಲ್ ಸ್ಟಡೀಸ್‌ನಲ್ಲಿ ಅಂತರರಾಷ್ಟ್ರೀಯ ಆರ್ಥಿಕತೆಯ ಹಿರಿಯ ಸಂಶೋಧನಾ ಪ್ರಾಧ್ಯಾಪಕರಾಗಿದ್ದಾರೆ ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ಅಭಿವೃದ್ಧಿ ಕೇಂದ್ರದಲ್ಲಿ ಹಿರಿಯ ಸಂಶೋಧಕರಾಗಿದ್ದಾರೆ.

# ನಿರ್ಡಾಲೀಕರಣ ಪ್ರಾರಂಭವಾಗಿದೆಯೇ?

**ಕೌಶಿಕ್ ಬಸು**

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧದ ಆರ್ಥಿಕ ಪರಿಣಾಮಗಳು ಸ್ಪಷ್ಟವಾಗುತ್ತಿದೆ. ಪ್ರಪಂಚದಾದ್ಯಂತ ನಾಯಕರು ತಾಳ್ಮೆ ಕಳೆದುಕೊಳ್ಳುತ್ತಿದ್ದಾರೆ. ವಾಷಿಂಗ್ಟನ್‌ನಲ್ಲಿ ಇತ್ತೀಚೆಗೆ ನಡೆದ ಅಂತರರಾಷ್ಟ್ರೀಯ ಹಣಕಾಸು ನಿಧಿ [IMF] ಮತ್ತು ವಿಶ್ವಬ್ಯಾಂಕ್‌ನ ಸಭೆಗಳನ್ನು ಗಮನಿಸಿದರೆ ಇದು ಬಹಳ ಸ್ಪಷ್ಟವಾಗಿದೆ. ಬ್ರಿಟನ್ನಿನ ಹಣಕಾಸು ಸಚಿವೆ ರಾಚೆಲ್ ರೀವ್ಸ್ ಅವರು "ನಮ್ಮದಲ್ಲದ ಯುದ್ಧದ ಮೂರ್ಖತನದ" ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಆದರೆ, ಇದರ ಹೆಚ್ಚಿನ ನಷ್ಟವನ್ನು ಸ್ವತಃ ಅಮೆರಿಕವೇ ಭರಿಸಬೇಕಾಗುತ್ತದೆ. ಇದರ ತಕ್ಷಣದ ಪರಿಣಾಮಗಳು ಸ್ಪಷ್ಟವಾಗಿ ಕಾಣುತ್ತಿವೆ. ಇಂಧನ ಬೆಲೆಗಳಲ್ಲಿ ತೀವ್ರ ಏರಿಕೆಯಾಗಿದೆ. ಹಣದುಬ್ಬರ ಎರಡು ವರ್ಷಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಹೆಚ್ಚುತ್ತಿರುವ ವೆಚ್ಚಗಳನ್ನು ಸರಿದೂಗಿಸಲು ಜನರು ತಮ್ಮ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಭವಿಷ್ಯದಲ್ಲಿ ನಿರುದ್ಯೋಗ ಹೆಚ್ಚುವ ಆತಂಕ ನಮ್ಮೆದುರಿಗಿದೆ.

ಈ ಅಲ್ಪಾವಧಿಯ ಆಘಾತಗಳೂ ಗಂಭೀರವಾದವುಗಳೆ. ಆದರೆ ಇದಕ್ಕಿಂತ ಗಂಭೀರವಾದ ಅಪಾಯವೆಂದರೆ ಜಾಗತಿಕ ವ್ಯಾಪಾರದಲ್ಲಿ ಮೀಸಲು ಕರೆನ್ಸಿಯಾಗಿರುವ ಡಾಲರ್ ತನ್ನ ಸ್ಥಾನವನ್ನು ಕಳೆದುಕೊಳ್ಳಬಹುದು. ಆದರೆ ಈ ಬಗ್ಗೆ ಹೆಚ್ಚು ಗಮನಹರಿಸುತ್ತಿಲ್ಲ.

ಯಾವುದೇ ಮೀಸಲು ಕರೆನ್ಸಿಯ ಕುಸಿತ ಬಹಳ ನಿಧಾನವಾಗಿ ಆಗುವಂತಹ ಪ್ರಕ್ರಿಯೆ. 1920ರ ದಶಕದಲ್ಲಿ ಶುರುವಾಗಿ ಸುಮಾರು ಎರಡು ದಶಕಗಳಲ್ಲಿ, ಬ್ರಿಟಿಷ್ ಪೌಂಡ್ ತನ್ನ ಪ್ರಾಬಲ್ಯವನ್ನು ಅಮೆರಿಕೆಯ ಡಾಲರ್‌ಗೆ ಬಿಟ್ಟುಕೊಡಬೇಕಾಯಿತು. ಬ್ಯಾರಿ ಐಚೆನ್‌ಗ್ರೀನ್ ಅವರು ಹೇಳುವಂತೆ, ಪ್ರಪಂಚದ ಮೊದಲ ಅಂತರರಾಷ್ಟ್ರೀಯ ಕರೆನ್ಸಿ ಎಂದು ಕರೆಯಲಾಗುವ 'ರೋಮನ್ ದಿನಾರಿಯಸ್' ಕೂಡ ಪ್ರಾಬಲ್ಯ ಕಳೆದುಕೊಳ್ಳುವ ಮೊದಲು ಬಹಳ ಕಾಲ ಕುಸಿಯುತ್ತಾ ಬಂತು. ಒಂದನೇ ಶತಮಾನದಲ್ಲಿ ಚಕ್ರವರ್ತಿ ನೀರೋ ಅದರ ಮೌಲ್ಯವನ್ನು ತಗ್ಗಿಸಿದಾಗ ಈ ಕುಸಿತ ಶುರುವಾಗಿತ್ತು.

ಯಾವುದೇ ಅಂತರರಾಷ್ಟ್ರೀಯ ಕರೆನ್ಸಿ ಅಂತಿಮವಾಗಿ ಜನರ 'ನಂಬಿಕೆಯನ್ನು ಆಧರಿಸಿರುತ್ತದೆ. ಪ್ರಧಾನಿ ಮನಮೋಹನ್ ಸಿಂಗ್ ಅವರ ನೇತೃತ್ವದಲ್ಲಿ ಭಾರತ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರನಾಗಿ ಕೆಲಸ ಮಾಡುವಾಗ ನಾನು ಇದನ್ನು ಕಣ್ಣಾರೆ ಕಂಡಿದ್ದೆ. ಆಗಸ್ಟ್ 5, 2011 ರಂದು, ಎಸ್ ಅಂಡ್ ಪಿ ಸಂಸ್ಥೆಯು ಅಮೆರಿಕದ ದೀರ್ಘಕಾಲೀನ ಕ್ರೆಡಿಟ್ ರೇಟಿಂಗ್ ಅನ್ನು [AAA] ಇಂದ [AA+ ]ಗೆ ಇಳಿಸಿತು. ಇದರಿಂದ ತಕ್ಷಣ ಅಮೆರಿಕದಿಂದ ಹೂಡಿಕೆಯೆಲ್ಲಾ ಹೊರಗೆ ಹೋಗಿಬಿಡುತ್ತದೆ ಅನ್ನುವ ಆತಂಕ ಪ್ರಾರಂಭವಾಗಿತ್ತು. ಆದರೆ ಆಗಿದ್ದೆ ಬೇರೆ. ಅಮೆರಿಕದ ಆರ್ಥಿಕತೆಯೊಳಗೆ ಮತ್ತಷ್ಟು ಹಣ ಹರಿದುಬಂತು! ಜಾಗತಿಕ ಮಟ್ಟದಲ್ಲಿ ಎಷ್ಟೇ ಏರುಪೇರುಗಳಿದ್ದರೂ, "ಏನೇ ಕಷ್ಟ ಬಂದರೂ ಅಮೆರಿಕ ತನ್ನ ಸಾಲದ ಜವಾಬ್ದಾರಿಯನ್ನು ತಪ್ಪದೇ ನಿಭಾಯಿಸುತ್ತದೆ" ಎಂದು ಹೂಡಿಕೆದಾರರು ದೃಢವಾಗಿ ನಂಬಿದ್ದರು.

ಜಗತ್ತಿನ ಮುಂದಾಳಾಗಿ ಉಳಿಯಬೇಕಾದರೆ (ಸಾಫ್ಟ್ ಪವರ್) ಮುಖ್ಯವಾಗಿ ವಿಶ್ವಾಸವನ್ನು ಉಳಿಸಿಕೊಳ್ಳಬೇಕು. ಈಗ ಆ ನಂಬಿಕೆ ವೇಗವಾಗಿ ಕುಸಿಯುತ್ತಿದೆ. ಯುಎಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ [USAID] ಸಂಸ್ಥೆಯ ಮಾಜಿ ಮುಖ್ಯಸ್ಥೆ ಸಮಂತಾ ಪವರ್ ಅವರು ಇತ್ತೀಚೆಗೆ ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ನೀಡಿದ ಭಾಷಣದಲ್ಲಿ ಈ ವಿಷಯವನ್ನು ಒತ್ತಿ ಹೇಳಿದ್ದಾರೆ. ಈ ಸಂಸ್ಥೆಯನ್ನು ಮುಚ್ಚಲು ಟ್ರಂಪ್ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ಅವರು ತೀವ್ರವಾಗಿ ಟೀಕಿಸಿದರು.

ಯಾವುದೇ ಮುನ್ಸೂಚನೆಯೂ ಇಲ್ಲದೆ ಏಕಾಏಕಿ ಮತ್ತು ನಿಷ್ಕರುಣೆಯಿಂದ ಈ ಸಂಸ್ಥೆಯನ್ನು ಮುಚ್ಚಿದ್ದರಿಂದ ಬಡವರಿಗೆ ಸಿಗುತ್ತಿದ್ದ ಮಾನವೀಯ ನೆರವುಗಳು ಸ್ಥಗಿತಗೊಂಡವು. ಇದರಿಂದಾಗಿ, ಜಗತ್ತಿನಾದ್ಯಂತ ಅದನ್ನೇ ನೆಚ್ಚಿಕೊಂಡಿದ್ದ ಜನರಿಗೆ ವಿಪರೀತ ಕಷ್ಟವಾಯಿತು ಎಂದು ಅವರು ಹೇಳಿದರು.

ಯುಎಸ್‌ಎಡ್ ಸಂಸ್ಥೆಯನ್ನು ಮುಚ್ಚಿರುವುದು, ಇದರ ಜೊತೆಗೆ ಇರಾನ್ ಮತ್ತು ವೆನೆಜುವೆಲಾದಲ್ಲಿ ಟ್ರಂಪ್ ನಡೆಸಿರುವ ಮಿಲಿಟರಿ ಕಾರ್ಯಾಚರಣೆಗಳು ಹಾಗೂ ಕೆನಡಾ ಮತ್ತು ಡೆನ್ಮಾರ್ಕ್‌ನಂತಹ ಹಳೆಯ ಮಿತ್ರರಾಷ್ಟ್ರಗಳ ಮೇಲಿನ ನಿರಂತರ ವಾಗ್ದಾಳಿಗಳು ಇವೆಲ್ಲವೂ ಅಮೆರಿಕದ ಜಾಗತಿಕ ಸ್ಥಾನಮಾನ ಮತ್ತು ಅದರ ಮೇಲಿನ ವಿಶ್ವಾಸಕ್ಕೆ





ಧಕ್ಕೆಯುಂಟುಮಾಡಿವೆ. ಇದರ ಪರಿಣಾಮವಾಗಿ, ಜಗತ್ತಿನ ಮೇಲೆ ಡಾಲರ್‌ಗಿರುವ ಪಾರಮ್ಯಕ್ಕೂ ಈಗ ಅಪಾಯ ಎದುರಾಗಿದೆ.

ಇದರಿಂದ ಆಗಬಹುದಾದ ನಷ್ಟವನ್ನು ಅರ್ಥಮಾಡಿಕೊಳ್ಳಲು, ಕರೆನ್ಸಿಯ ಮುದ್ರಣದ ವೆಚ್ಚ ಹಾಗೂ ಅದರ ಮುಖ ಬೆಲೆಯ ನಡುವಿನ ವ್ಯತ್ಯಾಸವನ್ನು ಗಮನಿಸಬೇಕು. ಅಮೆರಿಕದ ಫೆಡರಲ್ ರಿಸರ್ವ್‌ಗೆ ಹತ್ತು ಡಾಲರ್ ನೋಟು ಮುದ್ರಿಸುವುದಕ್ಕೆ ಏಳು ಸೆಂಟುಗಳೂ ಬೇಡ. ಜಾಗತಿಕವಾಗಿ ಡಾಲರ್ ಮೇಲೆ ನಂಬಿಕೆ ಇರುವುದರಿಂದ ಪ್ರಪಂಚದಾದ್ಯಂತ ಅದರ ಪೂರ್ಣ ಮುಖಬೆಲೆಗೆ ಅದನ್ನು ಸ್ವೀಕರಿಸಲಾಗುತ್ತದೆ.

ಜಗತ್ತಿನ ಪ್ರಮುಖ ಕರೆನ್ಸಿಯನ್ನು ಮುದ್ರಿಸುತ್ತಿರುವ ದೇಶಗಳು ಶೂನ್ಯದಿಂದ ಅಪಾರ ಮೌಲ್ಯವನ್ನು ಸೃಷ್ಟಿಸಬಲ್ಲವು. ಇದನ್ನು ರೋಮ್‌ನಿಂದ ಹಿಡಿದು ಬ್ರಿಟನ್ನಿನವರೆಗಿನ ಸಾಮ್ರಾಜ್ಯಗಳು ತೋರಿಸಿಕೊಟ್ಟಿವೆ. ಒಂದು ವೇಳೆ ಅಮೆರಿಕ ಈ ಸಾಮರ್ಥ್ಯವನ್ನು ಕಳೆದುಕೊಂಡರೆ, ಅದರ ಆರ್ಥಿಕ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

ಅಮೆರಿಕವು ತನ್ನ ಈ ನೀತಿಗಳನ್ನು ಬದಲಿಸಿಕೊಳ್ಳದಿದ್ದರೆ, ಯುಎಸ್ ಡಾಲರ್ 'ಜಾಗತಿಕ ಕರೆನ್ಸಿ'ಯಾಗಿ ತನ್ನ ಸ್ಥಾನಮಾನವನ್ನು ಕಳೆದುಕೊಳ್ಳಲು ಪ್ರಾರಂಭವಾದ ವರ್ಷವೆಂದು ಈ ವರ್ಷವು ಇತಿಹಾಸದ ಪುಟಗಳಲ್ಲಿ ದಾಖಲಾಗಬಹುದು.

ಆಗ ಒಂದು ಪ್ರಶ್ನೆ ಹುಟ್ಟಿಕೊಳ್ಳುತ್ತದೆ: ಡಾಲರ್ ಸ್ಥಾನವನ್ನು ಯಾವ ಕರೆನ್ಸಿ ತುಂಬಬಲ್ಲದು? ಚೀನಾದ ಅಧಿಕೃತ ಕರೆನ್ಸಿಯಾದ 'ರೆನ್ಮಿನ್ಬಿ' [Renminbi] ಇದಕ್ಕೆ ಅತ್ಯಂತ ಪ್ರಬಲ ಅಭ್ಯರ್ಥಿಯಾಗಿ ತೋರುತ್ತದೆ. ಒಂದು ದಶಕದ ಹಿಂದೆ, ಅಂತರರಾಷ್ಟ್ರೀಯ ಹಣಕಾಸು ನಿಧಿಯು [IMF] ತನ್ನ ಜಾಗತಿಕ ಕರೆನ್ಸಿಗಳ ಪಟ್ಟಿಯಲ್ಲಿ ('ಸ್ಪೆಷಲ್ ಡ್ರಾಯಿಂಗ್ ರೈಟ್ಸ್' – SDR) ಚೀನಾದ ಕರೆನ್ಸಿಯನ್ನು ಸೇರಿಸಿದಾಗ ಅದಕ್ಕೊಂದು ಮಾನ್ಯತೆ ಸಿಕ್ಕಿತು. ಆದರೆ ಆಗಲೂ ಸಹ, ಇದು ಅಮೆರಿಕದ ಡಾಲರ್‌ಗೆ (ಗ್ರೀನ್‌ಬ್ಯಾಕ್) "ಸಾಟಿಯಾಗಲು ಸಾಧ್ಯವೇ ಇಲ್ಲ" ಎಂದು ಬಹುತೇಕರು ತಳ್ಳಿಹಾಕಿದ್ದರು. ಆದರೆ ಇಂದು, ಆ ರೆನ್ಮಿನ್ಬಿ ಜಾಗತಿಕ ಮಟ್ಟದಲ್ಲಿ ಡಾಲರ್‌ನಂತೆ ಪ್ರಾಬಲ್ಯವನ್ನು ಸಾಧಿಸುವ ಸಾಧ್ಯತೆಯನ್ನು ತಳ್ಳಿಹಾಕುವುದಕ್ಕೆ ಸಾಧ್ಯವಿಲ್ಲ.

ಆದರೂ ಆ ಜಾಗತಿಕ ಸ್ಥಾನವನ್ನು ಅಲಂಕರಿಸಿಕೊಳ್ಳುವುದು ಚೀನಾಕ್ಕೆ ಅಷ್ಟು ಸಲೀಸಲ್ಲ. ಸಾಮರ್ಥ್ಯ ಅಷ್ಟು ಸುಲಭಕ್ಕೆ ಸಿಗುವುದಿಲ್ಲ. ಆರ್ಥಿಕ ತಜ್ಞ ಕಿಯಾವೋ ಲಿಯು ಅವರು 2016ರಲ್ಲಿ ಬರೆದ ತಮ್ಮ 'ಕಾರ್ಪೊರೇಟ್ ಚೀನಾ 2.0' ಪುಸ್ತಕದಲ್ಲಿ ಹೇಳಿರುವಂತೆ, ಚೀನಾದಲ್ಲಿ ಒಂದು ಕಡೆ ಸರ್ವಾಧಿಕಾರದ ರಾಜಕೀಯ ಆಡಳಿತವಿದೆ. ಇನ್ನೊಂದು ಕಡೆ ವ್ಯವಹಾರಗಳಲ್ಲಿ ವೈಯಕ್ತಿಕ ಸಂಬಂಧಗಳಿಗೆ ಹೆಚ್ಚು ಬೆಲೆಕೊಡುವ" ಹೊಂದಾಣಿಕೆಯ ವ್ಯವಸ್ಥೆಯನ್ನು ಹೊಂದಿದೆ. ಜಾಗತಿಕ ಮೀಸಲು ಕರೆನ್ಸಿಗೆ ಅವಶ್ಯವಾದ ವಿಶ್ವಾಸವನ್ನು ಮೂಡಿಸುವುದಕ್ಕೆ ಇಂತಹ ಸಮ್ಮಿಶ್ರ ವ್ಯವಸ್ಥೆ ಸಾಧ್ಯವಿಲ್ಲ.

ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರಿಗೆ ಈ ಸೂಕ್ಷ್ಮದ ಅರಿವಿದ್ದಂತೆ ತೋರುತ್ತದೆ. 2024ರ ಭಾಷಣವೊಂದರಲ್ಲಿ ಅವರು ಚೀನಾದ 'ಸಾಫ್ಟ್ ಪವರ್ ಅನ್ನು ಬಲಪಡಿಸುವ ಬಗ್ಗೆ ಮಾತನಾಡಿದರು. (**ಅನುವಾದಕರ ಟಿಪ್ಪಣಿ:** ಸಾಫ್ಟ್ ಪವರ್' ಎಂದರೆ, ಮಿಲಿಟರಿ ಶಸ್ತ್ರಾಸ್ತ್ರಗಳ ಬದಲಾಗಿ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ವಿಶ್ವಾಸವನ್ನು ಮೂಡಿಸುವ ಮೂಲಕ ಇತರ ದೇಶಗಳನ್ನು ಆಕರ್ಷಿಸಿ ಪ್ರಭಾವ ಬೀರುವ ಸಾಮರ್ಥ್ಯ) ಈ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು, ಚೀನಾದ ಕರೆನ್ಸಿಯಾದ 'ರೆನ್ಮಿನ್ಬಿ'ಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಬೇಕು ಎಂದು ಷಿ ಒತ್ತಿಹೇಳಿದ್ದರು.

ಅಲ್ಲದೆ, "ರೆನ್ಮಿನ್ಬಿ ಅಂತರರಾಷ್ಟ್ರೀಯ ವ್ಯಾಪಾರ, ಹೂಡಿಕೆ ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಗಳಲ್ಲಿ ವ್ಯಾಪಕವಾಗಿ ಬಳಕೆಯಾಗಬೇಕು. ಜೊತೆಗೆ ಅದು 'ಮೀಸಲು ಕರೆನ್ಸಿ' ಸ್ಥಾನಮಾನವನ್ನು ಪಡೆಯುವಷ್ಟು ಪ್ರಬಲವಾಗಿರಬೇಕು" ಎಂದು ಅವರು ಪ್ರತಿಪಾದಿಸಿದರು. ಆದರೆ, ರೆನ್ಮಿನ್ಬಿ ರಿಸರ್ವ್ ಕರೆನ್ಸಿ ಸ್ಥಾನಮಾನ ಪಡೆಯಲು ಇರುವ ಅತಿ ದೊಡ್ಡ ಅಡಚಣೆಯೆಂದರೆ ಬಂಡವಾಳದ ಮೇಲಿನ ನಿಯಂತ್ರಣ [capital controls]. ಇದು ಚೀನಾದಲ್ಲಿ ಇಂದಿಗೂ ಕಟ್ಟುನಿಟ್ಟಾಗಿಯೇ ಇದೆ.

ಕಳೆದ ವರ್ಷ ಟ್ರಂಪ್ ಅವರ ನೀತಿಗಳಿಗೆ ಅತ್ಯಂತ ಪ್ರಬಲವಾದ ಟೀಕೆ ಅನಿರೀಕ್ಷಿತ ಮೂಲವೊಂದರಿಂದ ವ್ಯಕ್ತವಾಯಿತು. ಮೂರನೇ ಚಾರ್ಲ್ಸ್ ದೊರೆ [King Charles III]. ಏಪ್ರಿಲ್ 28 ರಂದು ಅಮೆರಿಕದ ಕಾಂಗ್ರೆಸ್ ಉದ್ದೇಶಿಸಿ ಮಾತನಾಡಿದರು. ಅವರ ಭಾಷಣ ಬ್ರಿಟಿಷರಿಗೇ ವಿಶಿಷ್ಟವಾದ ಚುರುಕಾದ ಹಾಸ್ಯ ಮತ್ತು ಸಂಯಮದಿಂದ ಕೂಡಿತ್ತು. ಅಮೆರಿಕವು ತಪ್ಪು ಹಾದಿಯಲ್ಲಿ ಸಾಗುತ್ತಿದೆ. ಈ ಹಾದಿಯು ಅದರ ಜಾಗತಿಕ ಸ್ಥಾನಮಾನವನ್ನೇ ನಾಶಪಡಿಸಬಹುದು ಎಂಬ ಸ್ಪಷ್ಟ ಸಂದೇಶವನ್ನು ಅವರು ರವಾನಿಸಿದರು.

ಆದಾಗ್ಯೂ, ಇಲ್ಲಿ ಆಶಾವಾದಕ್ಕೂ ಒಂದು ಕಾರಣವಿತ್ತು. ಚಾರ್ಲ್ಸ್ ಅವರ ಭಾಷಣಕ್ಕೆ ಕಾಂಗ್ರೆಸ್‌ನ ಎರಡೂ ಪಕ್ಷಗಳ ಸದಸ್ಯರು (ಡೆಮಾಕ್ರಟಿಕ್ ಮತ್ತು ರಿಪಬ್ಲಿಕನ್) ಪದೇಪದೇ ಚಪ್ಪಾಳೆ ತಟ್ಟುತ್ತಾ ಬೆಂಬಲ ವ್ಯಕ್ತಪಡಿಸಿದ್ದರು. ಅದನ್ನು ನೋಡಿದರೆ, ಅಮೆರಿಕ ಎದುರಿಸುತ್ತಿರುವ ಈ ಸಂಕಷ್ಟದ ಪರಿಸ್ಥಿತಿಯ ಬಗ್ಗೆ ಅವರಿಗೆ ಈಗಾಗಲೇ ಅರಿವಿದೆ ಎಂಬುದು ಸ್ಪಷ್ಟವಾಗುತ್ತಿತ್ತು.

[Kaushik Basu, a former chief economist of the World Bank and chief economic adviser to the Government of India, is Professor of Economics at Cornell University and a non-resident senior fellow at the Brookings Institution.]

# ಚೀನಾದ ಆರ್ಥಿಕತೆಯ ಬಗೆಗಿನ ಒಮ್ಮತ ಬಲವಾಗಿದೆ. ಆದರೆ ಅದು ತಪ್ಪು

## ಅರವಿಂದ್ ಸುಬ್ರಮಣಿಯನ್

ಚೀನಾದ ಅಭಿವೃದ್ಧಿ ಮಾದರಿಯು ಅಲ್ಲಿನ ದೇಶೀಯ ಗ್ರಾಹಕರಿಗೆ ಅನ್ಯಾಯ ಮಾಡುತ್ತಿದೆಯೇ? ಹೌದು ಎಂದು ಬಹುತೇಕ ಎಲ್ಲರೂ ಒಪ್ಪಿಕೊಳ್ಳುತ್ತಾರೆ, ಆದರೆ ಅದು ಸತ್ಯವಲ್ಲ.

ಈ ವಾದವು ಹಲವು ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಅವುಗಳಲ್ಲಿ ಅತ್ಯಂತ ಸರಳವಾದ ವಾದವೆಂದರೆ ರಫ್ತು–ಕೇಂದ್ರಿತ ಆರ್ಥಿಕತೆ [Mercantilist] ಮತ್ತು ಮುಕ್ತ ವ್ಯಾಪಾರದ ಆರ್ಥಿಕತೆಗಳ ನಡುವಿನ ವ್ಯತ್ಯಾಸಕ್ಕೆ ಸಂಬಂಧಿಸಿದ್ದು. ಚೀನಾ ಲಾಭ ಮತ್ತು ರಫ್ತು–ಕೇಂದ್ರಿತ ಆರ್ಥಿಕ ಮಾದರಿಯನ್ನು ಆರಿಸಿಕೊಂಡಿದೆ. ಹಾಗಾಗಿ, ಅದು ಜನರ ಬಳಕೆ ಮತ್ತು ಕಲ್ಯಾಣಕ್ಕಿಂತ ಹೆಚ್ಚಾಗಿ ಉತ್ಪಾದನೆ ಹಾಗೂ ಹೂಡಿಕೆಗೆ ಹೆಚ್ಚು ಮಹತ್ವ ನೀಡುತ್ತದೆ. ಉದಾಹರಣೆಗೆ, 'ಟ್ರೇಡ್ ವಾರ್ಸ್ ಆರ್ ಕ್ಲಾಸ್ ವಾರ್ಸ್' ಎಂಬ ಪುಸ್ತಕದಲ್ಲಿ ಮ್ಯಾಥ್ಯೂ ಸಿ. ಕ್ಲೈನ್ ಮತ್ತು ಮೈಕೆಲ್ ಪೆಟ್ಟಿಸ್ ಅವರು ಹೀಗೆ ವಾದಿಸುತ್ತಾರೆ: ಚೀನಾದೊಳಗೆ ಸಂಪತ್ತಿನ ಹಂಚಿಕೆಯ ಬಗ್ಗೆ ಗಂಭೀರವಾದ ಸಂಘರ್ಷವಿದೆ ("ವರ್ಗ ಯುದ್ಧಗಳು"). ಅಲ್ಲಿನ ನೀತಿಗಳನ್ನು ರೂಪಿಸುವ ಸರ್ಕಾರ ಎಲೈಟುಗಳು ಹಾಗೂ ದೊಡ್ಡ ಉದ್ಯಮಿಗಳ ಪರವಾಗಿದೆ. ಹಾಗಾಗಿ ಕಾರ್ಮಿಕರ ವೇತನಕ್ಕಿಂತ ಉದ್ಯಮದ ಲಾಭಕ್ಕೆ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ಅವರು ವಾದಿಸಿದ್ದಾರೆ. ಮತ್ತೊಂದೆಡೆ, ಚೀನಾ, ಅಷ್ಟೇ ಅಲ್ಲ ಒಟ್ಟಾರೆಯಾಗಿ ಪೂರ್ವ ಏಷ್ಯಾದ ಆರ್ಥಿಕ ಮಾದರಿಯ ಯಶಸ್ಸಿಗೆ ಅಲ್ಲಿನ ಕಠಿಣ ಹಾಗೂ ದಮನಕಾರಿ ಕಾರ್ಮಿಕ ನೀತಿಗಳೇ ಕಾರಣ ಎಂದು ಕೆಲವರು ವಾದಿಸುತ್ತಾರೆ.

ಈ ಎಲ್ಲಾ ವಾದಗಳಿಗೆ ಇರುವ ಪ್ರಮುಖ ಪುರಾವೆಯೆಂದರೆ, ಚೀನಾದ ಜಿಡಿಪಿಯಲ್ಲಿ 'ಕುಟುಂಬಗಳ ಬಳಕೆಯ' ಪಾಲು ಕಡಿಮೆ ಇರುವುದು. ಅಮೆರಿಕಕ್ಕೆ ಹೋಲಿಸಿದರೆ ಚೀನಾದಲ್ಲಿ ಈ ಪ್ರಮಾಣ ಕಡಿಮೆಯಾಗಿದ್ದರೂ, 1990ರ ದಶಕದ ಆರಂಭದವರೆಗೂ ಇದು ತಕ್ಕಮಟ್ಟಿಗೆ ಉತ್ತಮ ಸ್ಥಿತಿಯಲ್ಲಿಯೇ ಇತ್ತು. ಆನಂತರದಲ್ಲಿ ಚೀನಾ ರಫ್ತು–ಕೇಂದ್ರಿತ ನೀತಿಗಳಿಗೆ ತೀವ್ರವಾಗಿ ಗಮನಕೊಡಲು ಪ್ರಾರಂಭಿಸಿತು. ಇದರಿಂದ ಇದು ದೊಡ್ಡ ಪ್ರಮಾಣದ ಆರ್ಥಿಕ ಹೆಚ್ಚಳವನ್ನು ತಂದರೂ, ಜನರ ಬಳಕೆಯ ಪಾಲನ್ನು ತೀವ್ರವಾಗಿ ಕುಸಿಯುವಂತೆ ಮಾಡಿತು. ಈ ಬಳಕೆಯ ಪ್ರಮಾಣವು 2010 ರಲ್ಲಿ ಶೇಕಡಾ 35ಕ್ಕೆ ಕುಸಿದು ಕನಿಷ್ಠ ಮಟ್ಟವನ್ನು ತಲುಪಿತ್ತು. ಮತ್ತು ಇಂದು ಅದು ಕೇವಲ ಶೇ 40 ರಷ್ಟಿದೆ. ಈ ಪ್ರಮಾಣವು ಅಮೆರಿಕ ಹಾಗೂ ಪೂರ್ವ ಏಷ್ಯಾದ ಇತರ ಸಮಾನ ದೇಶಗಳಿಗಿಂತ ಬಹಳ ಕಡಿಮೆಯಾಗಿದೆ. ಈ ಅಂಕಿಅಂಶವನ್ನು ಪದೇ ಪದೇ ಉಲ್ಲೇಖಿಸಲಾಗುತ್ತದೆ. ಇದು ಮೂರು ರೀತಿಯಲ್ಲಿ ನಮ್ಮನ್ನು ದಾರಿತಪ್ಪಿಸುತ್ತದೆ. ಈ ಬಗ್ಗೆ 'ಅಭಿವೃದ್ಧಿ ಅರ್ಥಶಾಸ್ತ್ರಜ್ಞರಿಗಿಂತ, ಸಮಗ್ರ ಆರ್ಥಿಕತೆಯನ್ನು ಅಧ್ಯಯನ ಮಾಡುವ 'ಮ್ಯಾಕ್ರೋ–ಅರ್ಥಶಾಸ್ತ್ರಜ್ಞರಿಗೆ' ಹೆಚ್ಚು ಆಸಕ್ತಿ ಇರಬಹುದು.

ಹೀಗೆ ಹೋಲಿಕೆ ಮಾಡುವಾಗ ವಿವಿಧ ದೇಶಗಳ ಅಭಿವೃದ್ಧಿಯ ಮಟ್ಟವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅಂದರೆ ಬೆಳವಣಿಗೆಯು ಒಂದು ನಿರ್ದಿಷ್ಟ ಹಂತದಲ್ಲಿದ್ದಾಗ ವಿಭಿನ್ನ ದೇಶಗಳ ಪರಿಸ್ಥಿತಿ ಹೇಗಿತ್ತು ಎಂದು ಹೋಲಿಸಿ ನೋಡುವುದಿಲ್ಲ.

ಇದು ಸಾಮಾನ್ಯ ಚೀನೀ ಗ್ರಾಹಕರಿಗಿಂತ, ಆರ್ಥಿಕ ವಿಶ್ಲೇಷಕರಿಗಷ್ಟೇ ಹೆಚ್ಚು ಮುಖ್ಯ ವಿಷಯವಾಗಿ ತೋರಬಹುದು. ಚೀನಾದ ಜನಸಾಮಾನ್ಯರಿಗೆ ಜಿಡಿಪಿಯಲ್ಲಿ ತಮ್ಮ ಪಾಲು ಎಷ್ಟಿದೆ ಅಥವಾ ಇದಕ್ಕಿಂತ ಭಿನ್ನವಾದ ಅಭಿವೃದ್ಧಿಯ ನೀತಿಯನ್ನು ಅನುಸರಿಸಿದ್ದರೆ ಏನಾಗುತ್ತಿತ್ತು ಇತ್ಯಾದಿ ಕಾಲ್ಪನಿಕ ಲೆಕ್ಕಾಚಾರಗಳಿಗಿಂತ, ವಾಸ್ತವದಲ್ಲಿ ತಮ್ಮ ದಿನನಿತ್ಯದ ಖರ್ಚು–ವೆಚ್ಚ ಮಾಡುವ ಸಾಮರ್ಥ್ಯ ಹೇಗೆ ಬದಲಾಗುತ್ತಿದೆ ಎಂಬುದು ಹೆಚ್ಚು ಕಾಳಜಿಯ ವಿಷಯವಾಗಿರುತ್ತದೆ.

ಇದಕ್ಕಾಗಿಯೇ, 2011ರಲ್ಲಿ ಚೀನಾ ಕುರಿತು ನಾನು ಬರೆದ 'ಎಕ್ಲಿಪ್ಸ್'ಎಂಬ ಪುಸ್ತಕದಲ್ಲಿ ಬೇರೆಯದೇ ಆದ ಅಳತೆಗೋಲನ್ನು ಬಳಸಿದ್ದೆ. ಯುದ್ಧದ ನಂತರ ಬೇರೆ ಬೇರೆ ದೇಶಗಳ ಆರ್ಥಿಕತೆಯ ಬೆಳವಣಿಗೆ ವೇಗಗೊಳ್ಳಲು ಪ್ರಾರಂಭಿಸಿದ ಆರಂಭ ಹಂತವನ್ನು ಹೋಲಿಕೆಗೆ ಆಧಾರವಾಗಿ ತೆಗೆದುಕೊಂಡಿದ್ದೆ. ನಂತರ ಚೀನಾದ ಪ್ರತಿ ಕುಟುಂಬದ ತಲಾ ಖರ್ಚನ್ನು ಬೆಳವಣಿಗೆಯ ಅದೇ ಹಂತದಲ್ಲಿದ್ದ ದೇಶಗಳೊಂದಿಗೆ ಹೋಲಿಸಿ ನೋಡಿದೆ. ಆಗ ನಮಗೆ ಕಾಣುವ ಚಿತ್ರಣವೇ ಸಂಪೂರ್ಣವಾಗಿ ಬದಲಾಗುತ್ತದೆ.

ಜನರ ಜೀವನ ಮಟ್ಟವನ್ನು ಅಳೆಯಲು 'ತಲಾ ಖರ್ಚು' ಸರಿಯಾದ ಮಾನದಂಡ ಎಂದುಕೊಂಡರೆ, ಚೀನಾದ ಜನರು ಅದ್ಭುತ ಪ್ರಗತಿ ಸಾಧಿಸಿದ್ದಾರೆ ಅನ್ನಬಹುದು. ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪೂರ್ವ ಏಷ್ಯಾದ ಇತರ ದೇಶಗಳ ಜನರಿಗಿಂತಲೂ



ಇವರು ಹೆಚ್ಚು ಅಭಿವೃದ್ಧಿ ಕಂಡಿದ್ದಾರೆ.


ಉದಾಹರಣೆಗೆ, 1978 ಮತ್ತು 2024ರ ಅವಧಿಯಲ್ಲಿ ಚೀನಾದ ತಲಾ ಕುಟುಂಬದ ವೆಚ್ಚ ವರ್ಷಕ್ಕೆ ಸರಾಸರಿ 7.6% ರಷ್ಟು ಬೆಳೆಯುತ್ತಿತ್ತು. ಇದು ನಿಜವಾಗಿ ಆಶ್ಚರ್ಯಕರ ಬೆಳವಣಿಗೆ. 46 ವರ್ಷಗಳ ಅವಧಿಯಲ್ಲಿ ಜಪಾನ್‌ನಲ್ಲಿ 5.2%, ದಕ್ಷಿಣ ಕೊರಿಯಾದಲ್ಲಿ 5.7% ಮತ್ತು ತೈವಾನ್‌ನಲ್ಲಿ 6.2%ರಷ್ಟು ಮಾತ್ರ ಬೆಳವಣಿಗೆ ಸಾಧ್ಯವಾಗಿತ್ತು. ಚೀನಾದ ಈ ಸಾಧನೆ ಅದ್ಭುತ ಮಾತ್ರವಲ್ಲ, ಇದು ಹಿಂದೆಂದೂ ಕಾಣದ ಅಭೂತಪೂರ್ವ ಸಾಧನೆ.

ಖಂಡಿತವಾಗಿಯೂ, ಕೆಲವು ವಿಷಯಕ್ಕೆ ಸಂಬಂಧಿಸಿದಂತೆ ಎಚ್ಚರಬೇಕು. ಚೀನಾದ ಆರ್ಥಿಕ ಬೆಳವಣಿಗೆ ಮತ್ತು ಬಳಕೆಯ ದತ್ತಾಂಶಗಳು ಅಷ್ಟು ವಿಶ್ವಾಸರ್ಹವಲ್ಲದೇ ಇರಬಹುದು. ಸರಾಸರಿ ಲೆಕ್ಕಾಚಾರಗಳು ಆದಾಯ ಹಂಚಿಕೆಯಲ್ಲಿನ ತೀವ್ರ ಏರುಪೇರುಗಳನ್ನು ತೋರಿಸದೇ ಹೋಗಬಹುದು. ಒಬ್ಬ ಸಾಮಾನ್ಯ ಪ್ರಜೆಯ ವಾಸ್ತವ ಅನುಭವ ನಮ್ಮ ಅರಿವಿಗೆ ಬರದೇ ಹೋಗಬಹುದು. ಆರಂಭದಲ್ಲಿ ಚೀನಾದ ಬಳಕೆಯ ಪ್ರಮಾಣ ತೀರಾ ಕಡಿಮೆಯಿತ್ತು (ಇತರ ದೇಶಗಳ ಬಳಕೆಯ ಪ್ರಮಾಣ ಅವುಗಳ ಆರಂಭಿಕ ಹಂತಗಳಲ್ಲಿ, ಚೀನಾಕ್ಕಿಂತ 3ರಿಂದ 5ಪಟ್ಟು ಹೆಚ್ಚಾಗಿತ್ತು). ಅದಕ್ಕೆ ಹೋಲಿಸಿದರೆ ನಂತರದಲ್ಲಿ ಚೀನಾ ಕಂಡ ತೀವ್ರ ಆರ್ಥಿಕ ಬೆಳವಣಿಗೆಯ ವೇಗ ಇನ್ನೂ ಹೆಚ್ಚಾಗಿ ಕಾಣುತ್ತದೆ. ಆದಾಗ್ಯೂ, ಚೀನಾದ ಗ್ರಾಹಕರಿಗೆ ಅನ್ಯಾಯವಾಗುತ್ತಿದೆ ಅಥವಾ ಅವರನ್ನು ವಂಚಿಸಲಾಗುತ್ತಿದೆ ಎಂಬ ವಾದವು ವಾಸ್ತವಕ್ಕೆ ದೂರ.

ಚೀನಾ ಅತಿಯಾದ ವ್ಯಾಪಾರೀ ಆರ್ಥಿಕನೀತಿಯನ್ನು [extreme mercantilist] ಅನುಸರಿಸಿದ ಸಮಯದಲ್ಲಿ ಅಂದರೆ 1990ರ ನಂತರದಲ್ಲಿ ಜಿಡಿಪಿಯಲ್ಲಿ ಬಳಕೆಯ ಪಾಲು ತೀವ್ರವಾಗಿ ಕುಸಿದಿತ್ತು. ಆದರೆ ಆ ಸಮಯದಲ್ಲೂ ತಲಾ ಬಳಕೆಯ ಬೆಳವಣಿಗೆಯು ಅದೇ ವೇಗದಲ್ಲಿ ಮುಂದುವರಿದಿತ್ತು ಎಂಬುದು ಗಮನಾರ್ಹ. ಜಿಡಿಪಿಯಲ್ಲಿ ಬಳಕೆಯ ಪಾಲು ಕಡಿಮೆಯಾಗುತ್ತಿದ್ದರೂ, ಚೀನಾದ ಒಟ್ಟಾರೆ ಜಿಡಿಪಿ ಎಷ್ಟು ವೇಗವಾಗಿ ಹೆಚ್ಚಾಗುತ್ತಿತ್ತೆಂದರೆ (ಅವರ ವಿಶಾಲ ಅಭಿವೃದ್ಧಿ ಕಾರ್ಯತಂತ್ರದ ಕಾರಣದಿಂದಾಗಿ), ಬಳಕೆಯೂ ಅತ್ಯಂತ ವೇಗವಾಗಿ ಮುನ್ನುಗ್ಗಿತು.

ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬಹುದು. ನೈಜ ವೇತನ (ಹಣದುಬ್ಬರಕ್ಕೆ ಹೊಂದಿಸಿದ ಸಂಬಳ) ಉತ್ಪಾದನೆಯಷ್ಟು ವೇಗವಾಗಿ ಬೆಳೆಯದಿದ್ದರೂ, ಒಂದು ದೇಶ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸುವ ಸಾಮರ್ಥ್ಯವನ್ನು ಉಳಿಸಿಕೊಂಡರೆ, ದೊಡ್ಡ ಮಟ್ಟದಲ್ಲಿ ರಫ್ತನ್ನು ಬೆಳೆಸಬಹುದು. ಇದರಿಂದಾಗಿ ದೀರ್ಘಕಾಲದವರೆಗೆ ಆರ್ಥಿಕತೆ ತನ್ನ ಬೆಳವಣಿಗೆಯ ವೇಗವನ್ನು ಕಾಪಾಡಿಕೊಳ್ಳಬಹುದು. ದತ್ತಾಂಶಗಳು ಕೂಡ ಇದನ್ನೇ ಹೇಳುತ್ತವೆ. ಚೀನಾ ತೀವ್ರ ರಫ್ತು ನೀತಿಯನ್ನು ಅನುಸರಿಸುತ್ತಿದ್ದ ಅವಧಿಯಲ್ಲಿ (1995–2010), ಜಿಡಿಪಿಯಲ್ಲಿ ಬಳಕೆಯ ಪಾಲು ತೀವ್ರವಾಗಿ ಕುಸಿದಿತ್ತು. ಆದರೂ ಆ ಸಮಯದಲ್ಲಿ ಚೀನಾದ ಪ್ರತಿ ಕುಟುಂಬದ ಸರಾಸರಿ ತಲಾ ಬಳಕೆಯ ಬೆಳವಣಿಗೆಯು ಶೇಕಡಾ 7.9 ರಷ್ಟಿತ್ತು. ಆದರೆ 2010ರ ನಂತರ ಚೀನಾ ಈ ನೀತಿಯನ್ನು ಬದಲಿಸಿದಾಗ, ಬಳಕೆಯ ಬೆಳವಣಿಗೆಯು ಶೇಕಡಾ 6.2 ಕ್ಕೆ ಕುಸಿಯಿತು.


**Chart 1. Final Household Consumption Expenditure, 1970-2024 (% of GD**




*Source: World Bank's World Development Indicators.*

**Chart 2. Household Consumption Per Capita in "Take-off Time"**

*(constant US 2021 dollars per person; index at 100 for all countries at their start date, T)*




*Source: Penn World Tables, Version 11. To obtain household consumption per person, the series "rconna" which is total final consumption is divided by population and then multiplied by the share of household consumption in total consumption, using the series "csh_c" and "csh_g". T=1978 for China, 1950 for Japan, 1953 for Korea and 1951 for Taiwan.*

ಈ ಪ್ರವೃತ್ತಿಗಳಿಂದ ನೀತಿಗೆ ಸಂಬಂಧಿಸಿದಂತೆ ನಾವು ಏನು ಕಲಿಯಬಹುದು? ಮೊದಲನೆಯದಾಗಿ, ಚೀನಾದ ಈ ರಫ್ತು ನೀತಿಯನ್ನು ಖಂಡಿತಾ ಪ್ರಶ್ನಿಸಬಹುದು. ಏಕೆಂದರೆ ಕಡಿಮೆ ಕೌಶಲ್ಯದ ಸರಕುಗಳ ಮಾರುಕಟ್ಟೆಯನ್ನು ಚೀನಾ ತಾನೇ ಆಕ್ರಮಿಸಿಕೊಂಡಿದ್ದರಿಂದ, ಇತರ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ತೊಂದರೆಯಾಗುತ್ತದೆ. ಇದನ್ನು ಜಾನ್ಸ್ ಹಾಪ್ಕಿನ್ಸ್‌ನ ಶೌಮಿತ್ರೋ ಚಟರ್ಜಿ ಮತ್ತು ನಾನು ಇತ್ತೀಚೆಗೆ ಪ್ರತಿಪಾದಿಸಿದ್ದೇವೆ.

ಅಷ್ಟೇ ಅಲ್ಲದೆ, ಚೀನಾದ ರಫ್ತು ನೀತಿಯನ್ನು ಬೆಂಬಲಿಸುವ ಕೈಗಾರಿಕಾ ನೀತಿಗಳು ಮತ್ತು ವಿನಿಮಯ ದರದ ಕೃತಕ ಅಪಮೌಲ್ಯೀಕರಣದಿಂದಾಗಿ ಜಾಗತಿಕ ಮಾರುಕಟ್ಟೆಯ ಸಮತೋಲನ ತಪ್ಪಿದೆ ಹಾಗೂ ಇದು ವ್ಯಾಪಾರ ಸಮರಗಳಿಗೆ ಕಾರಣವಾಗಿದೆ. ಕೊನೆಯದಾಗಿ, ಚೀನಾದ ಈ ಧೋರಣೆಯಿಂದ ಚೀನಾದೊಳಗೇ ಅನುತ್ಪಾದಕವಾದ ವ್ಯರ್ಥ ಹೂಡಿಕೆ ಹೆಚ್ಚಬಹುದು. ಇದರಿಂದ ಅವರ ಭವಿಷ್ಯದ ಆರ್ಥಿಕ ಬೆಳವಣಿಗೆಗೆ ತೊಂದರೆಯಾಗಬಹುದು.

ಈ ಎಲ್ಲಾ ಕಾರಣಗಳಿಂದಾಗಿ, ಚೀನಾ ತನ್ನ ಆರ್ಥಿಕ ಅಭಿವೃದ್ಧಿ ನೀತಿಯನ್ನು ಬದಲಾಯಿಸಬೇಕು ಎಂದು ಹೇಳುವುದು ಸರಿ. ಆದರೆ ಚೀನಾದ ರಫ್ತು ನೀತಿಯಿಂದಾಗಿ ಅಲ್ಲಿನ ಗ್ರಾಹಕರಿಗೆ ನಷ್ಟವಾಗುತ್ತಿದೆ ಎನ್ನುವುದಕ್ಕಾಗುವುದಿಲ್ಲ. ಚೀನಾದಲ್ಲಿ ಕಾರ್ಮಿಕರ ಹಕ್ಕುಗಳನ್ನು ಹತ್ತಿಕ್ಕಲಾಗುತ್ತಿದೆ ಅನ್ನುವುದು ನಿಜ. ಆದರೆ ಅದು ಅಲ್ಲಿಯ ಬೃಹತ್ ಬೆಳವಣಿಗೆಗೆ ಅಡ್ಡಿಯಾಗಿಲ್ಲ ಅನ್ನುವುದು ಸ್ಪಷ್ಟ. ಚೀನಾ ದೇಶವು ಇತಿಹಾಸದಲ್ಲೇ ಅತ್ಯಂತ ವೇಗವಾದ ಮತ್ತು ದೀರ್ಘಕಾಲೀನ ಆರ್ಥಿಕ ಬೆಳವಣಿಗೆಯನ್ನು ಸಾಧಿಸಿದೆ. ಇದರಿಂದ ನೂರಾರು ಕೋಟಿ ಜನರ ಜೀವನಮಟ್ಟ ಮತ್ತು ಬಳಕೆಯ ಮಟ್ಟ ಸುಧಾರಿಸಿದೆ. ಹೀಗಿರುವಾಗ ಆ ದೇಶವನ್ನು ಟೀಕಿಸುವುದು ವಿಚಿತ್ರವಾಗಿ ಕಾಣುತ್ತದೆ. ಈಗ ಚಾಲ್ತಿಯಲ್ಲಿರುವ ಒಮ್ಮತದ ಅಭಿಪ್ರಾಯಗಳು ಚೀನಾದ ನಿಜವಾದ ಪರಿಸ್ಥಿತಿಯನ್ನು ತಿಳಿಸುವುದಕ್ಕಿಂತ ಹೆಚ್ಚಾಗಿ ಚೀನಾವನ್ನು ಗಮನಿಸುವವರ ಮನಸ್ಥಿತಿಯನ್ನು ತೋರಿಸುತ್ತದೆ. ಅಲ್ಲಿನ ಗ್ರಾಹಕರ ಹಿತರಕ್ಷಣೆಯ ನೆಪದಲ್ಲಿ ನಡೆಯುತ್ತಿರುವ 'ಚೀನಾ ನಿಂದನೆ'ಯ ಬಗ್ಗೆ ನಾವು ಜಾಗರೂಕರಾಗಿರಬೇಕು.

**ಲೇಖಕರ ಪರಿಚಯ:**

ಅರವಿಂದ್ ಸುಬ್ರಮಣಿಯನ್ ಅವರು ಪೀಟರ್‌ಸನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟರ್ನ್ಯಾಷನಲ್ ಎಕನಾಮಿಕ್ಸ್‌ನಲ್ಲಿ ಹಿರಿಯ ಸಂಶೋಧಕರಾಗಿದ್ದಾರೆ. ಇವರು ದೇವೇಶ್ ಕಪೂರ್ ಅವರೊಂದಿಗೆ ಸೇರಿ 'ಎ ಸಿಕ್ಸ್ತ್ ಆಫ್ ಹ್ಯುಮ್ಯಾನಿಟಿ: ಇಂಡಿಪೆಂಡೆಂಟ್ ಇಂಡಿಯಾಸ್ ಡೆವಲಪ್‌ಮೆಂಟ್ ಒಡಿಸ್ಸಿ' (ಹಾರ್ಪರ್ ಕಾಲಿನ್ಸ್ ಇಂಡಿಯಾ, 2025) ಎಂಬ ಪುಸ್ತಕವನ್ನು ಬರೆದಿದ್ದಾರೆ.

# ಭಾರತದಲ್ಲಿ ಗೊಬ್ಬರದ ಬಳಕೆಯನ್ನು ಸುಧಾರಿಸುವುದು ಹೇಗೆ?

**ನಂದುಲ ರಘುರಾಮ್**



ಪಶ್ಚಿಮ ಏಷ್ಯಾದಲ್ಲಿ ಈಗ ನಡೆಯುತ್ತಿರುವ ಯುದ್ಧ ಮತ್ತು ಇಂಧನ ಹಾಗೂ ರಸಗೊಬ್ಬರಗಳ ಬೆಲೆಯೇರಿಕೆ ನಮಗೆ ಯೋಚಿಸಲು ಒಂದು ಅವಕಾಶ ಒದಗಿಸುತ್ತಿದೆ. ಗೊಬ್ಬರವನ್ನು ಪೋಲು ಮಾಡದೆ ಸರಿಯಾಗಿ ಬಳಸುವುದು ಹೇಗೆ ಮತ್ತು ಅದರ ಬೇಡಿಕೆಯನ್ನು ತಗ್ಗಿಸುವುದು ಹೇಗೆ ಎಂದು ಚಿಂತಿಸಲು ಇದೊಂದು ಸದವಕಾಶ. ಭಾರತಕ್ಕೆ ಬೇಕಾಗುವ ಯೂರಿಯಾದಲ್ಲಿ ಶೇಕಡಾ 80ರಷ್ಟನ್ನು ನಮ್ಮ ದೇಶದಲ್ಲೇ ತಯಾರಿಸುತ್ತೇವೆ, ಉಳಿದಿದ್ದನ್ನು ಮಾತ್ರ ವಿದೇಶದಿಂದ ಆಮದು ಮಾಡಿಕೊಳ್ಳುತ್ತೇವೆ. ಸಂಪೂರ್ಣ ಸ್ವಾವಲಂಬನೆ ಸಾಧಿಸುವ ಉದ್ದೇಶದಿಂದ ನಮ್ಮಲ್ಲೇ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಆದರೆ ಸಮಸ್ಯೆಯೇನೆಂದರೆ, ಉದ್ದಿಮೆಗಳು ಯೂರಿಯಾ ತಯಾರಿಕೆಗೆ ಬೇಕಾದ ಇಂಧನಕ್ಕೆ ಬಹುತೇಕ ಆಮದನ್ನು ನೆಚ್ಚಿಕೊಂಡಿವೆ. ಸೌರಶಕ್ತಿಯನ್ನು ಬಳಸಿ ನೀರಿನ ಎಲೆಕ್ಟ್ರೋಲಿಸಿಸ್ ಪದ್ಧತಿಯ (ಅಂದರೆ ನೀರನ್ನು ವಿದ್ಯುತ್ ಬಳಸಿ ವಿಭಜಿಸಿ) ಮೂಲಕ ಗ್ರೀನ್ ಅಮೋನಿಯಾ ತಯಾರಿಸುವುದಕ್ಕೆ ಸಾಧ್ಯವಿದೆ. ಆದರೆ ಈಗಾಗಲೇ ನೀರಿನ ತೊಂದರೆ ಇರುವ ಜಾಗಗಳಲ್ಲಿ ಈ ಕ್ರಮವನ್ನು ಹೆಚ್ಚು ದಿನ ನಡೆಸಲು ಸಾಧ್ಯವಿಲ್ಲ.

ಸಾರಜನಕ (ಹೆಚ್ಚಾಗಿ ಯೂರಿಯಾ) ಮತ್ತು ಫಾಸ್ಫರಸ್ ಇವೆರಡೂ ಒಟ್ಟಾಗಿ ನಮ್ಮ ದೇಶದ ಆಹಾರದ ಸುಭದ್ರತೆಗೆ ಅನಿವಾರ್ಯವಾಗಿದೆ. ಬೆಲೆ ಏರಿಕೆಯಿಂದ ರೈತರಿಗೆ ಹೊರೆಯಾಗಬಾರದೆನ್ನುವ ಕಾರಣಕ್ಕೆ ಸರ್ಕಾರ ಪ್ರತಿವರ್ಷ ಗೊಬ್ಬರಕ್ಕೆ ಕೊಡುವ ಸಬ್ಸಿಡಿಯನ್ನು ಹೆಚ್ಚಿಸುತ್ತಲೇ ಇದೆ. ಆದರೆ ಬೇಸರದ ಸಂಗತಿಯೆಂದರೆ, ಸರ್ಕಾರ ಸಬ್ಸಿಡಿಗಾಗಿ ವರ್ಷಕ್ಕೆ ಖರ್ಚು ಮಾಡುವ 2 ಲಕ್ಷ ಕೋಟಿ ರೂಪಾಯಿಗಳಲ್ಲಿ ಮೂರನೇ ಎರಡು ಭಾಗದಷ್ಟು (2/3) ಹಣ ರೈತರು ಬೆಳೆಯುವುದಕ್ಕೆ ಬಳಕೆಯಾಗುತ್ತಿಲ್ಲ. ಬಹುತೇಕ ನೀರು, ಗಾಳಿ ಸೇರಿ ಅವನ್ನು ಕಲುಷಿತಗೊಳಿಸುತ್ತಿವೆ.

## ಈ ಗೊಬ್ಬರದ ಸುಳಿಗೆ ಸಿಲುಕಿದ್ದು ಹೇಗೆ?

ಬೇಕಾಬಿಟ್ಟಿಯಾಗಿ, ತೀರಾ ಹೆಚ್ಚಾಗಿ ಅಥವಾ ಒಂದು ಲೆಕ್ಕಾಚಾರವಿಲ್ಲದೆ ಗೊಬ್ಬರ ಹಾಕುವುದರಿಂದ ಹಣ ಪೋಲಾಗುತ್ತದೆ. ಅಷ್ಟೇ ಅಲ್ಲ,  ಮಣ್ಣು, ನೀರು, ಗಾಳಿ, ಮನುಷ್ಯರ ಆರೋಗ್ಯ ಮತ್ತು ಜೀವವೈವಿಧ್ಯತೆ ಎಲ್ಲವೂ ಹಾಳಾಗುತ್ತದೆ. ಹವಾಮಾನದಲ್ಲಿ ಬದಲಾವಣೆಯಾಗುತ್ತದೆ ಮತ್ತು ಜಾಗತಿಕ ತಾಪಮಾನವೂ ಹೆಚ್ಚುತ್ತದೆ. ನಾವು ಹೆಚ್ಚೆಚ್ಚು ಗೊಬ್ಬರ ಹಾಕಿದಷ್ಟೂ ಮಣ್ಣಿನ ಸಾರ ಹೆಚ್ಚೆಚ್ಚು ನಾಶವಾಗುತ್ತದೆ ಮತ್ತು ನೆಲದ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ, ಫಲವತ್ತತೆ ಕಡಿಮೆಯಾಗುತ್ತದೆ. ಪರಿಣಾಮವಾಗಿ ಇಳುವರಿ ಕಡಿಮೆಯಾಗುತ್ತದೆ. ರೈತರು ಇನ್ನೂ ಹೆಚ್ಚು ಗೊಬ್ಬರ ಹಾಕಬೇಕಾದ ಪರಿಸ್ಥಿತಿ ಬರುತ್ತದೆ. ಇದನ್ನೇ 'ಗೊಬ್ಬರದ ಸುಳಿ' ಎನ್ನುವುದು. ದಶಕಗಳಿಂದ ಗೊಬ್ಬರದ ಪೂರೈಕೆ ಎಷ್ಟೇ ಹೆಚ್ಚಾಗಿದ್ದರೂ, ಭಾರತದಲ್ಲಿ ಗೊಬ್ಬರಕ್ಕೆ ಬೇಡಿಕೆ ಕಡಿಮೆಯಾಗದಿರುವುದಕ್ಕೆ ಇದೇ ಕಾರಣ.

ಹಾಗಾಗಿ, ಕೇವಲ ಗೊಬ್ಬರ ಪೂರೈಕೆಯನ್ನು ನಿರ್ವಹಿಸುವ ಕಡೆ ನಿಗಾ ವಹಿಸಿದರೆ ಸಾಲದು. ಗೊಬ್ಬರವನ್ನು ಪರಿಣಾಮಕಾರಿಯಾಗಿ ಬಳಸಿ ಅದರ ಬೇಡಿಕೆಯನ್ನು ಕಡಿಮೆ ಮಾಡುವ ಕಡೆ ಗಮನಕೊಡಬೇಕು. ಗೊಬ್ಬರವನ್ನು ಪರಿಣಾಮಕಾರಿಯಾಗಿ ಬಳಸುವುದು ಎಂದರೆ ಪ್ರತಿ ಕೆಜಿ ಗೊಬ್ಬರದಿಂದ ಈಗ ಪಡೆಯುತ್ತಿರುವುದಕ್ಕಿಂತಲೂ ಹೆಚ್ಚು ಬೆಳೆ ತೆಗೆಯುವುದು. ಅಥವಾ ಕಡಿಮೆ ಗೊಬ್ಬರ ಬಳಸಿ ಅಷ್ಟೇ ಬೆಳೆ ತೆಗೆಯುವುದು. ಸರ್ಕಾರ ತಂದ ಪೋಷಕಾಂಶ ಆಧರಿತ ಸಬ್ಸಿಡಿ ನೀತಿಯಿಂದಲೂ ಅಂತಹ ಪ್ರಯೋಜನವಾಗಲಿಲ್ಲ. ಯೂರಿಯಾಗೆ ಬೇಡಿಕೆಯೂ ಕಡಿಮೆಯಾಗಲಿಲ್ಲ. ಯಾಕೆಂದರೆ ಆ ಯೋಜನೆಯಲ್ಲಿ ಯೂರಿಯಾ ಸೇರಿರಲಿಲ್ಲ. ಇನ್ನು ಬೇವು ಬೆರೆಸಿದ ಯೂರಿಯಾದಿಂದ ಸಾರಜನಕದ ಬಳಕೆ ಹೆಚ್ಚು ಪರಿಣಾಮಕಾರಿ ಆಗಬಹುದೆನ್ನುವ ನಿರೀಕ್ಷೆಯಿತ್ತು. ಆದರೆ ಅದರಿಂದಲೂ ಯೂರಿಯಾ ಅಮೋನಿಯ ಆಗಿ, ಗಾಳಿಯನ್ನು ಸೇರಿ, ಅದನ್ನು ಕಲುಷಿತಗೊಳಿಸುವುದನ್ನು ತಪ್ಪಿಸಲು ಆಗಲಿಲ್ಲ. ಇದೇ ರೀತಿ, ನಾವು ಹಾಕುವ ಫಾಸ್ಫೇಟ್ ಗೊಬ್ಬರಗಳು ಕೂಡ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಜಲಮಾಲಿನ್ಯ ಉಂಟುಮಾಡುತ್ತಿವೆ.

## ಇಲಾಖೆಗಳ ನಡುವೆ ಹೊಂದಾಣಿಕೆಯೇ ಇಲ್ಲ!

ನಿಜ ಹೇಳಬೇಕೆಂದರೆ, ನಮ್ಮ ಹಳೆಯ ಪದ್ಧತಿಯಂತೆ ಬೇಳೆಕಾಳುಗಳ ಬೆಳೆ, ಹಸಿರು ಗೊಬ್ಬರ ಮತ್ತು ಕಾಂಪೋಸ್ಟ್ ಬಳಸುವುದರಿಂದ ರಾಸಾಯನಿಕ ಗೊಬ್ಬರಗಳ ಅನಿವಾರ್ಯತೆಯನ್ನು ತುಂಬಾ ಕಡಿಮೆ ಮಾಡಬಹುದು. ಆದರೆ ನಮ್ಮ ಇಂದಿನ ಬೇಸಾಯದಲ್ಲಿ ಈ ಕ್ರಮವನ್ನೇ ಕೈಬಿಟ್ಟಿದ್ದೇವೆ. ಕಳೆದ ತಿಂಗಳು ಕೇಂದ್ರ ಸರ್ಕಾರ ಹಸಿರು ಗೊಬ್ಬರವನ್ನು ಪ್ರೋತ್ಸಾಹಿಸಿ ಎಂದು ರಾಜ್ಯ ಸರ್ಕಾರಗಳಿಗೆ ಆದೇಶಿಸಿದೆ. ಆದರೆ ಗೊಬ್ಬರವನ್ನು ಹೇಗೆ ಉಳಿಸಬೇಕೆಂಬುದನ್ನು ತಿಳಿಸುವ ಪ್ರಯತ್ನ ಆ ಆದೇಶದಲ್ಲಿಲ್ಲ.

ನವೆಂಬರ್ 2017ರಲ್ಲಿ ಪ್ರಧಾನಮಂತ್ರಿಯವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ಮುಂದಿನ ಐದು ವರ್ಷಗಳಲ್ಲಿ ಗೊಬ್ಬರದ ಬಳಕೆಯನ್ನು ಅರ್ಧದಷ್ಟು ಕಡಿಮೆ ಮಾಡಿ, ಎಂದು ಜನರಿಗೆ ಕರೆ ನೀಡಿದ್ದರು. ಆದರೆ, ಕೃಷಿವ್ಯವಸ್ಥೆಯಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳ ನಡುವೆ ಪರಸ್ಪರ ಹೊಂದಾಣಿಕೆಯೇ ಇಲ್ಲ. ಹಾಗಾಗಿ ದೇಶದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಉದಾಹರಣೆಗೆ, ಸರ್ಕಾರ 20ಕ್ಕೂ ಹೆಚ್ಚು ಬೆಳೆಗಳಿಗೆ 'ಕನಿಷ್ಠ ಬೆಂಬಲ ಬೆಲೆ' ಘೋಷಿಸಿದೆ. ಆದರೆ ವಾಸ್ತವದಲ್ಲಿ ಸರ್ಕಾರ ರೈತರಿಂದ ಕೇವಲ ಭತ್ತ, ಗೋಧಿ ಮತ್ತು ಕಬ್ಬನ್ನು ಮಾತ್ರ ಖರೀದಿಸುತ್ತಿದೆ. ಹಾಗಾಗಿ ರೈತರು ಕೇವಲ ಈ ಮೂರು ಬೆಳೆಗಳನ್ನಷ್ಟೇ ಬೆಳೆಯುತ್ತಿದ್ದಾರೆ. ಭಾರತದಲ್ಲಿ ಬಳಕೆಯಾಗುವ ಒಟ್ಟು ಯೂರಿಯಾದಲ್ಲಿ ಮೂರನೇ ಎರಡು ಭಾಗದಷ್ಟು ಈ ಮೂರು

ಬೆಳೆಗಳಿಗೇ ಬಳಕೆಯಾಗುತ್ತಿದೆ. ಇದರಿಂದಾಗಿ ಬೇಳೆಕಾಳುಗಳನ್ನು ಬೆಳೆಯುವ ಹಿಂದೆ ಇದ್ದ 'ಬೆಳೆತಿರುವಿಕೆ' [crop rotation] ಪದ್ಧತಿ ನಾಶವಾಗಿ, ರೈತರು ಗೊಬ್ಬರದ ಸುಳಿಗೆ ಸಿಲುಕುತ್ತಿದ್ದಾರೆ.

ಇದರ ಪರಿಣಾಮವಾಗಿ ನಮ್ಮ ಅವಶ್ಯಕತೆಗಿಂತ ಎರಡರಷ್ಟು ಹೆಚ್ಚು ಭತ್ತವನ್ನು ಬೆಳೆಯುತ್ತಿದ್ದೇವೆ. ಇದರಲ್ಲಿ ಶೇಕಡಾ 40ರಷ್ಟನ್ನು ರಫ್ತು ಮಾಡುತ್ತೇವೆ. ಇನ್ನೊಂದು ಶೇಕಡಾ 9ರಷ್ಟು ಭತ್ತವನ್ನು ಪೆಟ್ರೋಲ್ ಜೊತೆ ಬೆರೆಸುವ ಬಯೋಇಥನಾಲ್ ತಯಾರಿಕೆಗೆ ಬಳಸುತ್ತಿದ್ದೇವೆ. ನಮಗೆ ಬೇಕಾಗಿದ್ದಕ್ಕಿಂತ ಹೆಚ್ಚು ಕಬ್ಬು ಮತ್ತು ಗೋಧಿಯನ್ನೂ ಬೆಳೆಯುತ್ತಿದ್ದೇವೆ. ಜಗತ್ತಿನ ಒಟ್ಟು ಗೋಧಿ ಮತ್ತು ಕಬ್ಬಿನ ರಫ್ತಿನಲ್ಲಿ ಭಾರತದ ಪಾಲು ಶೇಕಡಾ 4ರಷ್ಟಿದೆ. ಸರ್ಕಾರ ಈಗಲಾದರೂ ಧಾನ್ಯಗಳಿಂದ ಬಯೋಇಥನಾಲ್ ಮಾಡುವುದನ್ನು ಕಡಿಮೆ ಮಾಡಬೇಕು. ಕೇವಲ ಕಬ್ಬಿನ ಮೊಲಾಸಸ್ ಅಥವಾ ಜೈವಿಕ ತ್ಯಾಜ್ಯದಿಂದ ಮಾತ್ರ ಇಂಧನ ತಯಾರಿಸಲು ಅನುಮತಿ ನೀಡಬೇಕು. ಇಲ್ಲದೆ ಹೋದರೆ ಇರುವ ಜಮೀನು, ನೀರು, ಗೊಬ್ಬರ ಹಾಗೂ ಸಬ್ಸಿಡಿಗಳಿಗಾಗಿ ಆಹಾರ ಹಾಗೂ ಇಂಧನದ ನಡುವೆ ತೀವ್ರ ಪೈಪೋಟಿ ಪ್ರಾರಂಭವಾಗುತ್ತದೆ.

ಗೊಬ್ಬರವನ್ನು ಕಂಡುಹಿಡಿಯುವುದಕ್ಕಿಂತ ಮುಂಚೆ, ಸಾವಿರಾರು ವರ್ಷಗಳಿಂದ ಬೇಳೆಕಾಳು ಮತ್ತು ಧಾನ್ಯಗಳ 'ಬೆಳೆತಿರುವಿಕೆ'ಯ ಕ್ರಮ ನಮ್ಮ ಕೃಷಿಯನ್ನು ಕಾಪಾಡಿಕೊಂಡು ಬಂದಿತ್ತು. ಯಾಕೆಂದರೆ ಬೇಳೆಕಾಳುಗಳು ಮುಂದಿನ ಬೆಳೆಗೆ ಮಣ್ಣಿನಲ್ಲಿ ನೈಸರ್ಗಿಕ ಸಾರಜನಕವನ್ನು ಉಳಿಸಿ ಹೋಗುತ್ತವೆ, ಕಡಿಮೆ ಯೂರಿಯಾ ಅಥವಾ ಯೂರಿಯಾ ಇಲ್ಲದೆ ಹೆಚ್ಚು ಉತ್ಪಾದನೆ ಕಂಡ ಏಕೈಕ ಬೆಳೆ ಅಂದರೆ ಸೋಯಾಬೀನ್, ಆದರೆ ಇದು ಮಣ್ಣಿನಲ್ಲಿ ಯಾವುದೇ ನೈಟ್ರೋಜನ್ ಬಿಟ್ಟು ಹೋಗುವುದಿಲ್ಲ. ಹಾಗಾಗಿ ಮುಂದಿನ ಬೆಳೆಗೆ ಇದರಿಂದ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಭಾರತ ಸರ್ಕಾರವು ಬೇಳೆಕಾಳು ಆಧಾರಿತ 'ಬೆಳೆತಿರುವಿಕೆ' ಅಥವಾ ಮಿಶ್ರಬೆಳೆ [Multicropping] ಪದ್ಧತಿಯನ್ನು ಪ್ರೋತ್ಸಾಹಿಸಲೇಬೇಕು. ಏಕೆಂದರೆ, ಈ ದ್ವಿದಳ ಧಾನ್ಯಗಳು ಗಾಳಿಯಲ್ಲಿರುವ ಸಾರಜನಕವನ್ನು ತಾವಾಗಿಯೇ ಮಣ್ಣಿನಲ್ಲಿ ಹಿಡಿದಿಡುತ್ತವೆ. ಇವುಗಳನ್ನು ಬೆಳೆಯುವುದಕ್ಕೆ ಯೂರಿಯಾ ಬೇಕಾಗುವುದಿಲ್ಲ. ಬೇಕಾದರೂ ಧಾನ್ಯಗಳಿಗೆ ಬಳಸುವ ಶೇಕಡಾ 10ರಷ್ಟು ಮಾತ್ರ ಸಾಕು. ಅಷ್ಟೇ ಅಲ್ಲ, ಮಳೆ ಕೊರತೆ ಎದುರಿಸುತ್ತಿರುವ (ಈ ವರ್ಷ ಮುನ್ಸೂಚನೆ ನೀಡಿರುವಂತೆ) ಮಳೆಯಾಶ್ರಿತ ಪ್ರದೇಶಗಳಿಗೆ ಇವು ಅತ್ಯಂತ ಸೂಕ್ತವಾದ ಬೆಳೆಗಳು.

ಅಷ್ಟೇ ಅಲ್ಲ, ಭಾರತ ತೀವ್ರವಾದ ಪ್ರೋಟೀನ್ ಕೊರತೆಯನ್ನು ಎದುರಿಸುತ್ತದೆ. ಅದನ್ನು ಪರಿಹರಿಸಿಕೊಳ್ಳುವುದಕ್ಕೆ ಬೇಳೆಕಾಳುಗಳು ಹೇರಳವಾಗಿ ಬೇಕಾಗಿದೆ. ಜಗತ್ತಿನಲ್ಲೇ ಅತಿ ಹೆಚ್ಚು ಶಾಕಾಹಾರಿಗಳು ಇರುವುದು ಭಾರತದಲ್ಲಿ. ಇವರಿಗೆ ಪ್ರೊಟೀನ್ ಸಿಗುವುದೇ ಬೇಳೆಕಾಳುಗಳಿಂದ. ಆದರೆ ಸರ್ಕಾರದ ನೀತಿಗಳು ಕೇವಲ ಭತ್ತ ಮತ್ತು ಗೋಧಿಗೆ ಸೀಮಿತವಾಗಿವೆ. ಹಾಗಾಗಿ ಇಂದು ಬೇಳೆಕಾಳುಗಳ ಕೊರತೆಯಿದೆ. ಅವುಗಳನ್ನು ಬೆಳೆಯುವುದು ಕಡಿಮೆಯಾಗಿದೆ ಅಥವಾ ಸ್ಥಗಿತಗೊಂಡಿದೆ, ಅಥವಾ ಬೇಳೆಕಾಳುಗಳ ಕೃಷಿ ಇಳುವರಿ ಬಾರದ ಕಳಪೆ ಭೂಮಿಗೆ ಸ್ಥಳಾಂತರಗೊಂಡಿದೆ. ತೆಲಂಗಾಣ ರಾಜ್ಯ ರಚನೆಯಾದ ಮೇಲೆ ಅಲ್ಲಿ ಬೇಳೆಕಾಳುಗಳ ಉತ್ಪಾದನೆ ಅರ್ಧಕ್ಕಿಳಿದಿದೆ. ಇಂದು ನಮಗೆ ಬೇಕಾದ ಬೇಳೆಕಾಳುಗಳಲ್ಲಿ ಶೇಕಡಾ 20 ರಷ್ಟನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಭತ್ತ ಬೆಳೆಯುತ್ತಿರುವ ಜಾಗದಲ್ಲಿ ಕೇವಲ ಶೇಕಡಾ 20ರಷ್ಟು ಜಾಗದಲ್ಲಿ ಬೇಳೆಕಾಳು ಬೆಳೆದರೆ ಯೂರಿಯಾ, ನೀರು ಎಲ್ಲವನ್ನೂ ಉಳಿಸಬಹುದು ಮತ್ತು ಅಪೌಷ್ಟಿಕತೆಯನ್ನೂ ತಪ್ಪಿಸಬಹುದು.

ಅಕ್ಟೋಬರ್ 2025ರಲ್ಲಿ ಸರ್ಕಾರ 'ದಲ್ಹಾನ್ ಆತ್ಮನಿರ್ಭರ ಮಿಷನ್' ಯೋಜನೆಯನ್ನು ಪ್ರಾರಂಭಿಸಿತು. ತೊಗರಿ, ಉದ್ದು ಮತ್ತು ಮಸೂರ್ ಬೇಳೆಗಳನ್ನು ನಾಲ್ಕು ವರ್ಷಗಳ ಕಾಲ ಬೆಂಬಲ ಬೆಲೆಯಲ್ಲಿ ಶೇಕಡ ನೂರರಷ್ಟನ್ನೂ ಖರೀದಿ ಮಾಡುವುದಾಗಿ ಭರವಸೆ ನೀಡಿತು. ಐದು ವರ್ಷಗಳಲ್ಲಿ ಉತ್ಪಾದನೆಯನ್ನು 350 ಲಕ್ಷ ಟನ್‌ಗೆ ಹೆಚ್ಚಿಸುವ ಉದ್ದೇಶದಿಂದ 11,440 ಕೋಟಿ ರೂಪಾಯಿಗಳನ್ನು ಮೀಸಲಿಡಲಾಯಿತು. ಆದರೆ ಏಪ್ರಿಲ್ 2026ರ ಸರ್ಕಾರದ ವರದಿಯ ಪ್ರಕಾರ, ಬೇಳೆಕಾಳು ಬೆಳೆಯುವ ಭೂಮಿ ಹೆಚ್ಚಾಗಿರುವುದು ಕೇವಲ ಶೇಕಡಾ 1.26ರಷ್ಟು ಮಾತ್ರ. 2021 ರಿಂದ 2024 ರ ನಡುವೆ ಬೇಳೆಕಾಳು ಬೆಳೆಯುವ ಪ್ರದೇಶ ಶೇಕಡಾ 10ರಷ್ಟು ಜಾಗ ಕಡಿಮೆಯಾಗಿತ್ತು. ಅದಕ್ಕೆ ಹೋಲಿಸಿದರೆ ಈಗ ಹೆಚ್ಚಾಗಿರುವುದು ಲೆಕ್ಕಕ್ಕೇ ಇಲ್ಲ. ಕಡಲೇಕಾಯಿ ಕಥೆಯೂ ಅಷ್ಟೇ, ಕೇವಲ ಶೇಕಡಾ 1.3ರಷ್ಟು ಮಾತ್ರ ಹೆಚ್ಚಾಗಿದೆ. ಸುಪ್ರೀಂ ಕೋರ್ಟ್ ಮಾರ್ಚ್ ತಿಂಗಳಿನಲ್ಲಿ ಶಿಫಾರಸ್ಸು ಮಾಡಿರುವಂತೆ ಯೋಜನೆಗಳು ಹೆಚ್ಚು ಪರಿಣಾಮಕಾರಿಯಾಗಿ ಜಾರಿಯಾಗಬೇಕು.

## ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಹೇಗೆ?

ರಾಸಾಯನಿಕ ಗೊಬ್ಬರಗಳಿಗೆ ಪರ್ಯಾಯವಾಗಿ ಮತ್ತು ಮಣ್ಣಿನ ಆರೋಗ್ಯವನ್ನು ಹೆಚ್ಚಿಸಲು ಭಾರತವು ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್ ಮತ್ತು ಬಯೋಚಾರ್ (ಬಯೋಗ್ಯಾಸ್ ಪ್ಲಾಂಟ್‌ಗಳಿಂದ ಸಿಗುವ ಜೈವಿಕ ಅನಿಲದ ತ್ಯಾಜ್ಯ) ಬಳಕೆಯನ್ನು ಕನಿಷ್ಠ ಮೂರು ಪಟ್ಟು ಹೆಚ್ಚಿಸಬೇಕಾಗಿದೆ. ಇನ್ನು ಮುಂದೆ ಗೊಬ್ಬರ ಶಿಫಾರಸ್ಸು ಮಾಡುವ ಸರ್ಕಾರಿ ನೀತಿಯೇ ಬದಲಾಗಬೇಕು; ಸ್ಥಳೀಯವಾಗಿ ಸಿಗುವ ಎಲ್ಲಾ ಸಾವಯವ ಮೂಲಗಳನ್ನು 'ಮೊದಲ ಡೋಸ್' [Basal dose] ಆಗಿ ಭೂಮಿಗೆ ಹಾಕಬೇಕು. ಆ ನಂತರವೂ ಏನಾದರೂ ಪೋಷಕಾಂಶಗಳ ಕೊರತೆ ಬಿದ್ದರೆ ಮಾತ್ರ, ಅದನ್ನು ತುಂಬಿಸಲು ರಾಸಾಯನಿಕ ಗೊಬ್ಬರಗಳನ್ನು ಹೆಚ್ಚುವರಿ 'ಟಾಪ್–ಅಪ್' ಡೋಸ್ ಆಗಿ ಬಳಸಬೇಕು. ಭಾರತದಾದ್ಯಂತ ನಡೆಸಲಾದ ಸಮಗ್ರ ಬೆಳೆ ಪ್ರಯೋಗಗಳಿಂದ ಒಂದು ಮಹತ್ವದ ಸಂಗತಿ ಸಾಬೀತಾಗಿದೆ. ಶಿಫಾರಸು ಮಾಡಲಾದ ಗೊಬ್ಬರದಲ್ಲಿ ಅರ್ಧದಷ್ಟು ರಾಸಾಯನಿಕ ಗೊಬ್ಬರವನ್ನು ಬಳಸಿ ಉಳಿದರ್ಧಕ್ಕೆ ಕೊಟ್ಟಿಗೆ ಗೊಬ್ಬರ, ಬಯೋಚಾರ್ ಅಥವಾ ಕಾಂಪೋಸ್ಟ್‌ನಿಂದಲೇ ಭರ್ತಿ ಮಾಡಬಹುದು; ಇದರಿಂದ ಇಳುವರಿಯಲ್ಲಿ ಯಾವುದೇ ನಷ್ಟವೂ ಆಗುವುದಿಲ್ಲ.

ಇದರ ಜೊತೆಗೆ, ಬೆಳೆಗಳ ಇಳುವರಿ ಹೆಚ್ಚಿಸಲು ಬೇಕಾಗುವ ಸಾರಜನಕ ಮತ್ತು ರಂಜಕದ ಪರ್ಯಾಯ ಹಾಗೂ ದಕ್ಷ ಮೂಲಗಳನ್ನು ಹುಡುಕಿಕೊಳ್ಳಬೇಕು. ಸರ್ಕಾರ ಅದಕ್ಕಾಗಿ ಹೆಚ್ಚಿನ ಹೂಡಿಕೆ ಮಾಡಬೇಕು. ಇಂದು ರೈತನಿಗೆ ಬೇಕಿರುವುದು ಈಗಾಗಲೇ ಲಭ್ಯವಿರುವ ಮತ್ತು ಸುಧಾರಿತ ತಳಿಯ ಬಿತ್ತನೆ ಬೀಜಗಳೇ ಹೊರತು, ಕೋಟಿ ಕೋಟಿ ಬಂಡವಾಳ ಬೇಡುವ ದೊಡ್ಡ ದೊಡ್ಡ ತಂತ್ರಜ್ಞಾನಗಳಾಗಲಿ ಅಥವಾ ಡ್ರೋನ್‌ಗಳಾಗಲಿ ಅಲ್ಲ! ನಮ್ಮ ದೇಶದ ಸಂಶೋಧನೆಗಳೇ ಸಾಬೀತುಪಡಿಸಿರುವಂತೆ, ಭಾರತದ ಸ್ವಂತ ಭತ್ತದ ತಳಿಗಳಿಗೇ [Germplasm] ಸಾರಜನಕದ ಬಳಕೆಯ ದಕ್ಷತೆಯನ್ನು ದುಪ್ಪಟ್ಟು ಮಾಡುವ ಸಾಮರ್ಥ್ಯವಿದೆ. ಅಂದರೆ ನಾವು ಕೊಡುವಷ್ಟೇ ಯೂರಿಯಾಕ್ಕೆ ಎರಡರಷ್ಟು ಫಸಲು ಕೊಡುವ ಶಕ್ತಿ ನಮ್ಮ ಭತ್ತದ ತಳಿಗಳಿಗಿದೆ.

ಇವೆಲ್ಲವನ್ನೂ ಜಾರಿಗೆ ತರಲು ವಿವಿಧ ಇಲಾಖೆಗಳ ನಡುವೆ ಹೊಂದಾಣಿಕೆ ಅತ್ಯಗತ್ಯವಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರವು ತಕ್ಷಣವೇ 'ಅಂತರ–ಸಚಿವಾಲಯ ರಾಷ್ಟ್ರೀಯ ಸಾರಜನಕ ಚುಕ್ಕಾಣಿ ಸಮಿತಿ'ಯನ್ನು [National Nitrogen Steering Committee] ಪುನಶ್ಚೇತನಗೊಳಿಸಬೇಕು. ಆದರೆ ಅದರ ಶಿಫಾರಸ್ಸುಗಳನ್ನು ಆಧರಿಸಿ, ಕ್ರಮ ಕೈಗೊಳ್ಳುವ ಮೊದಲೇ ಅದರ ಅಧಿಕಾರಾವಧಿ ಮುಗಿದು ಹೋಗಿತ್ತು.

(ನಂದುಲ ರಘುರಾಮ್ ಅವರು ನವದೆಹಲಿಯ ಗುರು ಗೋಬಿಂದ್ ಸಿಂಗ್ ಇಂದ್ರಪ್ರಸ್ಥ ಯೂನಿವರ್ಸಿಟಿಯ ಪ್ರೊಫೆಸರ್ ಮತ್ತು ಸಸ್ಟೈನಬಲ್ ಇಂಡಿಯಾ ಟ್ರಸ್ಟ್‌ನ ಅಧ್ಯಕ್ಷರು.)

(ದಿ ಹಿಂದೂ – 19 ಮೇ 2026)

**English version first appeared in The Hindu**

# ಕೃತಕ ಬುದ್ಧಿಮತ್ತೆಯ ಬಾಡಿಗೆದಾರರಾಗುವ ಬದಲು, ಭಾರತವೇ ಉತ್ಪಾದಿಸುವುದು ಹೇಗೆ?

**ರಘುರಾಮ್ ರಾಜನ್**

**ರೋಹಿತ್ ಲಾಂಬಾ**

ಕಳೆದ ವಾರ, ವಿಶಾಖಪಟ್ಟಣದ ಬಳಿ 600 ಎಕರೆ ಜಾಗದಲ್ಲಿ ಗೂಗಲ್ ಕಂಪನಿಯು 'ಭಾರತದ ಅತಿದೊಡ್ಡ ಎಐ ಕೇಂದ್ರ (ಹಬ್)' ಎಂದು ಕರೆಯಲಾಗುತ್ತಿರುವ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿತು. ಈ ಯೋಜನೆಗೆ ಅದಾನಿ–ಕನೆಕ್ಸ್ ಮತ್ತು ಏರ್‌ಟೆಲ್‌ನ ನೆಕ್ಸ್‌ಟ್ರಾ ಕಂಪನಿಗಳು ಮೂಲಸೌಕರ್ಯ ಪಾಲುದಾರರು. ಇದಕ್ಕೆ ಬೇಕಾದ ಸಿಲಿಕಾನ್ ಚಿಪ್‌ಗಳನ್ನು ಕ್ಯಾಲಿಫೋರ್ನಿಯಾದಲ್ಲಿ ವಿನ್ಯಾಸಗೊಳಿಸಲಾಗುತ್ತದೆ ಮತ್ತು ತೈವಾನ್‌ನಲ್ಲಿ ತಯಾರಿಸಲಾಗುತ್ತದೆ. ಡೇಟಾ ಸೆಂಟರ್ ಕಾರ್ಯಾರಂಭ ಮಾಡಿದಾಗ, ಅಲ್ಲಿನ ಪ್ರಮುಖ ತಂತ್ರಜ್ಞಾನ [AI model weights] ಗೂಗಲ್ ಕಂಪನಿಯ ಒಡೆತನದಲ್ಲಿರುತ್ತದೆ. ಇದರಲ್ಲಿ ಭಾರತದ ಕೊಡುಗೆಯೆಂದರೆ ಕೇವಲ ಭೂಮಿ, ವಿದ್ಯುತ್, ಕಟ್ಟಡ ನಿರ್ಮಾಣ ಮತ್ತು ದಿನನಿತ್ಯದ ನಿರ್ವಹಣೆ ಮಾತ್ರ.

ಇದೂ ಒಂದು ವಿಧದದಲ್ಲಿ ಸಾಧನೆಯೇ. ಆದರೆ, ದುರಾದೃಷ್ಟವಶಾತ್ ನಾವು ಹಿಂದೆಯೂ ಇಂಥದ್ದೇ ಕೆಲಸ ಮಾಡಿದ್ದೆವು.

ಮೂವತ್ತು ವರ್ಷಗಳ ಹಿಂದೆ, ಐಟಿ ಸೇವೆಗಳ ಭರಾಟೆ ಶುರುವಾದಾಗಲೂ ಇದೇ ರೀತಿಯ ಒಪ್ಪಂದ ನಡೆದಿತ್ತು. ಅಮೆರಿಕಾದ ಕಂಪನಿಗಳು ತಾವು ವಿನ್ಯಾಸಗೊಳಿಸಿದ ಸಿಸ್ಟಮ್‌ಗಳಿಗೆ ಕೋಡಿಂಗ್ ಮಾಡಲು ಮತ್ತು ಅವುಗಳನ್ನು ನಿರ್ವಹಿಸಲು ಜನ ಹುಡುಕುತ್ತಿದ್ದಾಗ, ಭಾರತವು ಇಂಗ್ಲಿಷ್ ಬಲ್ಲ, ಕಡಿಮೆ ವೇತನಕ್ಕೆ ದುಡಿಯುವ ಎಂಜಿನಿಯರುಗಳನ್ನು ಒದಗಿಸಿತು. ಆ ವ್ಯವಸ್ಥೆ ಯಶಸ್ವಿಯಾಯಿತು. ಇನ್ಫೋಸಿಸ್, ವಿಪ್ರೋ ಮತ್ತು ಟಿಸಿಎಸ್‌ನಂತಹ ಕಂಪನಿಗಳು ಬೆಳೆದು ನಿಂತವು. ಒಂದು ಹೊಸ ಮಧ್ಯಮ ವರ್ಗವೇ ಸೃಷ್ಟಿಯಾಯಿತು. ಜಗತ್ತಿನಾದ್ಯಂತ ನಮಗೆ ಒಳ್ಳೆಯ ಹೆಸರೂ ಬಂತು.

ಭಾರತದ ಸೇವಾ ವಲಯದ ಮೌಲ್ಯ ಹೆಚ್ಚಿತು. ಇದರ ಪರಿಣಾಮವಾಗಿ, ಇಂದು ಬೆಂಗಳೂರು ಮತ್ತು ಹೈದರಾಬಾದ್‌ನಲ್ಲಿರುವ ಜಾಗತಿಕ ಸಾಮರ್ಥ್ಯ ಕೇಂದ್ರಗಳು ವಿಶ್ವದ ಬೃಹತ್ ಕಂಪನಿಗಳಿಗಾಗಿ ನೈಜ ಸಂಶೋಧನೆ ಹಾಗೂ ಉತ್ಪನ್ನ ಅಭಿವೃದ್ಧಿಯ ಕಾರ್ಯಗಳಲ್ಲಿ ತೊಡಗಿಕೊಂಡಿವೆ. ಇದು ಖಂಡಿತಾ ಸಂಭ್ರಮಿಸಬೇಕಾದ ಸಾಧನೆಯೇ. ಆದರೆ, ನಾವು ಮಾಡಬೇಕಾದ ಕೆಲಸ ಇನ್ನೂ ಅಪೂರ್ಣವಾಗಿಯೇ ಉಳಿದಿತ್ತು."

ನಾವು ಮಾಡದೇ ಹೋದದ್ದೆಂದರೆ, ಆ ಲಾಭವನ್ನು ಮುಂದಿನ ಹಂತಕ್ಕೆ ಬೆಳೆಯುವುದಕ್ಕೆ ನಾವು ಬಳಸಲಿಲ್ಲ. ಜಾಗತಿಕ ಮಟ್ಟದ ಸಂಶೋಧನಾ ವಿಶ್ವವಿದ್ಯಾಲಯಗಳಿಗೆ ನಾವು ಅನುದಾನ ನೀಡಲಿಲ್ಲ. ದಶಕಗಳಿಂದ ರಾಷ್ಟ್ರೀಯ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೂಡಿಕೆಯನ್ನು ಹೆಚ್ಚಿಸಲಿಲ್ಲ. ಅದು ಇಂದಿಗೂ ಜಿಡಿಪಿಯ ಶೇಕಡಾ 1ಕ್ಕಿಂತ ಕಡಿಮೆಯಿದೆ. ನಾವು ಅತ್ಯಾಧುನಿಕ ತಂತ್ರಜ್ಞಾನದ ಉದ್ಯಮಶೀಲತಾ ಬಂಡವಾಳವನ್ನು [deep-tech venture capital], ಉತ್ಪಾದನಾ ಸಾಮರ್ಥ್ಯವನ್ನು ಅಥವಾ ಸರ್ಕಾರ ಬೆಂಬಲಿತ ದೀರ್ಘಕಾಲೀನ ಕೈಗಾರಿಕಾ ಸಾಲ–ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಿಲ್ಲ. ದಕ್ಷಿಣ ಕೊರಿಯಾ 'ಸ್ಯಾಮ್‌ಸಂಗ್ ಅನ್ನು ಬೆಳೆಸಿತು. ಕರ್ನಾಟಕಕ್ಕಿಂತ ಚಿಕ್ಕದಾದ ತೈವಾನ್ ಟಿಎಸ್‌ಎಂಸಿಯನ್ನು ನಿರ್ಮಿಸಿತು, ಅದು ಇಂದು ಜಾಗತಿಕ ಎಐ ಆರ್ಥಿಕತೆಯ ಅತ್ಯಂತ ನಿರ್ಣಾಯಕ ನಿಯಂತ್ರಣ ಕೇಂದ್ರವಾಗಿದೆ. ಆದರೆ ಭಾರತವು ಕೇವಲ ಹೊರಗುತ್ತಿಗೆ ವ್ಯವಸ್ಥೆಯನ್ನು ಮಾತ್ರ ನಿರ್ಮಿಸಿದೆ. ಬೇರೆಯವರು ವಿನ್ಯಾಸಗೊಳಿಸಿದ ಸಿಸ್ಟಮ್‌ಗಳನ್ನು ಬಳಸಿಕೊಳ್ಳುವುದನ್ನು ನಾವು ಅದ್ಭುತವಾಗಿ ಕಲಿತೆವು. ಆದರೆ, ಅವುಗಳನ್ನು ನಾವೇ ವಿನ್ಯಾಸಗೊಳಿಸುವ ಕೆಲಸವನ್ನು ಮುಂದೂಡಿದೆವು.

ಹಾಗೆ ಮುಂದೂಡಿದ ಕೆಲಸದ ಬೆಲೆಯನ್ನು ಈಗ ನಾವು ಕೃತಕ ಬುದ್ಧಿಮತ್ತೆಯ ರೂಪದಲ್ಲಿ ತೆರಬೇಕಾಗಿದೆ. ಒಂದು ಅತ್ಯಾಧುನಿಕ ಎಐ ಮಾಡೆಲ್‌ಅನ್ನು ರೂಪಿಸುವುದಕ್ಕೆ ಕೋಟ್ಯಂತರ ಡಾಲರ್ ಹಣ ಬೇಕಾಗುತ್ತದೆ. ಅದಕ್ಕೆ ದಶಕಗಳ ಕಾಲದ ನಿರಂತರ ಸಂಶೋಧನೆಯ ಹಿನ್ನೆಲೆ ಬೇಕು. ಮತ್ತು ಅಮೆರಿಕಾ, ಚೀನಾ, ಬ್ರಿಟನ್ ಹಾಗೂ ಕೆನಡಾದ ಕೆಲವು ಡಜನ್ ಉನ್ನತ ವಿಶ್ವವಿದ್ಯಾಲಯಗಳಿಂದ ಬರುವ ಪ್ರತಿಭಾವಂತರ ಅಗತ್ಯವಿದೆ. ಭಾರತದಲ್ಲಿ ಇದ್ಯಾವುದೂ ಇಲ್ಲ.

ಕಳೆದ ಹದಿನೈದು ದಿನಗಳಲ್ಲಿ, ಇಬ್ಬರು ಪ್ರಮುಖರು ಈಗಿನ ಪರಿಸ್ಥಿತಿಯನ್ನು






ವಿಭಿನ್ನ ಕೋನಗಳಿಂದ ವಿಶ್ಲೇಷಿಸಿದ್ದಾರೆ. 'ಎಕ್ಸ್‌ಪ್ರೆಸ್ ಅಡ್ಡಾ'ದಲ್ಲಿ ಮಾತನಾಡಿದ ರುಚಿರ್ ಶರ್ಮಾ ಅವರು, ಜಾಗತಿಕ ಹೂಡಿಕೆದಾರರು ಈಗ ಭಾರತವನ್ನು "ಎಐ–ವಿರೋಧಿ ಜಾಗ" ಎಂದು ಭಾವಿಸುತ್ತಿದ್ದಾರೆ ಎಂದು ಎಚ್ಚರಿಸಿದ್ದಾರೆ. ನಂದನ್ ನಿಲೇಕಣಿ ಅವರು ರವಿ ವೆಂಕಟೇಶನ್ ಅವರೊಂದಿಗೆ ಇತ್ತೀಚೆಗೆ ಬರೆದ ಲೇಖನವೊಂದರಲ್ಲಿ, ಭಾರತದ ಸಣ್ಣ ಉದ್ದಿಮೆಗಳು ಮತ್ತು ಅನೌಪಚಾರಿಕ ಆರ್ಥಿಕತೆಯಲ್ಲಿ ಎಐ ಅನ್ನು ವಿಸ್ತರಿಸುವುದರಲ್ಲೇ ಭಾರತದ ನಿಜವಾದ ಶಕ್ತಿಯಡಗಿದೆ ಎಂದು ವಾದಿಸಿದ್ದಾರೆ. ಶರ್ಮಾ ಅವರು ಎಐನ ಅತ್ಯಂತ ದುಬಾರಿ ಮತ್ತು ಮೂಲ (ಫೌಂಡೇಶನಲ್) ಹಂತವನ್ನು ಗಮನಿಸುತ್ತಿದ್ದಾರೆ, ಮತ್ತು ಅಲ್ಲಿ ಭಾರತ ಇಲ್ಲದಿರುವುದನ್ನು ಎತ್ತಿ ತೋರಿಸುತ್ತಿದ್ದಾರೆ. ಆದರೆ ನಿಲೇಕಣಿಯವರು ಈ ತಂತ್ರಜ್ಞಾನದ ಬಳಕೆ ಮತ್ತು ವಿಸ್ತರಣೆಯ ಹಂತವನ್ನು ನೋಡುತ್ತಿದ್ದು, ಅದೇ ಭಾರತದ ಅಂತಿಮ ಗುರಿ ಎನ್ನುತ್ತಿದ್ದಾರೆ. ಆದರೆ ಅವರಿಬ್ಬರೂ ಒಂದು ಕಠಿಣ ಪ್ರಶ್ನೆಯನ್ನು ಎತ್ತುವಲ್ಲಿ ಹಿಂದೆ ಬಿದ್ದಿದ್ದಾರೆ. ಇಷ್ಟು ಪ್ರತಿಭೆ ಮತ್ತು ಮಹತ್ವಾಕಾಂಕ್ಷೆ ಇರುವ ನಮ್ಮ ದೇಶವೊಂದು, ತಂತ್ರಜ್ಞಾನದ ಬಾಡಿಗೆದಾರನಾಗುವ ಬದಲು ತಾನೇ ಅದರ ಉತ್ಪಾದಕನಾಗುವುದು ಹೇಗೆ ಎಂಬ ಪ್ರಶ್ನೆಯನ್ನು ಅವರಿಬ್ಬರೂ ಕೇಳುತ್ತಿಲ್ಲ.

ನಾವು ವಿಶಾಖಪಟ್ಟಣ, ಹೈದರಾಬಾದ್, ಮುಂಬೈ ಮತ್ತು ಪುಣೆಯಲ್ಲಿ ಮಾಡುತ್ತಿರುವ ಕೆಲಸವು, 90ರ ದಶಕದಲ್ಲಿ ಮಾಡಿದ ಅದೇ ಒಪ್ಪಂದವನ್ನು ಮರುಕಳಿಸುವ ಅಪಾಯವನ್ನು ಹೊಂದಿದೆ. ಆದರೆ ಈ ಬಾರಿ ನಾವು ಅದರಲ್ಲಿ ಇನ್ನಷ್ಟು ಆಳವಾಗಿ ಸಿಲುಕಿಕೊಳ್ಳಲಿದ್ದೇವೆ. ಈ ಡೇಟಾ ಸೆಂಟರ್‌ಗಳು ಉಪಯುಕ್ತವಾಗಿವೆ ನಿಜ. ಆದರೆ ಮುಂದಿನ ಹತ್ತು ವರ್ಷಗಳಲ್ಲಿ, ಇವುಗಳನ್ನು ಭಾರತೀಯ [AI] ಮಾಡೆಲ್‌ಗಳನ್ನು ದೊಡ್ಡ ಮಟ್ಟದಲ್ಲಿ ರೂಪಿಸಲು ಬಳಸುವ ಬದಲು, ವಿದೇಶಿ ಮಾಡೆಲ್‌ಗಳು ಸಮರ್ಥವಾಗಿ ಕಾರ್ಯನಿರ್ವಹಿಸಲು ಪೂರಕವಾಗಿ ಸಿದ್ಧಪಡಿಸಲಾಗುತ್ತದೆ. ವಿಶಾಖಪಟ್ಟಣದ ಸರ್ವರ್‌ನಿಂದ ವಿದೇಶಿ ಮಾಡೆಲ್ ಬಳಸಿ ನಡೆಯುವ ಪ್ರತಿಯೊಂದು ಭಾರತೀಯ ಭಾಷೆಯ ಕೆಲಸಕ್ಕೂ, ಅದಾನಿ ನಿರ್ಮಿಸಿದ ಮೂಲಸೌಕರ್ಯದ ಮೇಲೆಯೇ ನಾವು ಅಮೆರಿಕಾದ ಮೌಂಟೇನ್ ವ್ಯೂಗೆ (ಗೂಗಲ್ ಕೇಂದ್ರ ಕಚೇರಿ ಇರುವ ಸ್ಥಳಕ್ಕೆ) ನಿರಂತರವಾಗಿ ಸಣ್ಣ ಮೊತ್ತದ ಬಾಡಿಗೆಯನ್ನು ಕಟ್ಟಬೇಕಾಗುತ್ತದೆ. ಈ ರೀತಿಯ ವ್ಯವಸ್ಥೆ ನಮಗೇನೂ ಹೊಸದಲ್ಲ. ಆದರೆ ತಂತ್ರಜ್ಞಾನ ಮಾತ್ರ ಹೊಸದು.

ಇದು ಕೇವಲ ಉತ್ಪಾದಕತೆಗೆ ಸೀಮಿತವಾದ ಸಂಗತಿಯಲ್ಲ. ಎಐ ತಂತ್ರಜ್ಞಾನ ನಮ್ಮ ಮಿಲಿಟರಿ ವ್ಯವಸ್ಥೆ ಪ್ರವೇಶಿಸುತ್ತಿದೆ. ಮತ್ತು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಂತಕ್ಕೂ ಕಾಲಿಡುತ್ತಿದೆ. ಬೇರೆ ದೇಶಗಳು ನಮಗೆ ನಿರಂತರ ಭದ್ರತೆ ನೀಡುತ್ತವೆ ಎಂದು ಕುರುಡಾಗಿ ನಂಬಿಕೊಳ್ಳುವ ಸ್ಥಿತಿಯಲ್ಲಿ ಇಂದು ಜಗತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಎಐನಲ್ಲಿ ನಮ್ಮ ಈ ಕೊರತೆ ಭಾರತದ ಸ್ವಾಯತ್ತತೆಗೆ ಅಪಾಯ ತರಬಹುದು. ಭಾರತ ಇವತ್ತೇ ಅತ್ಯಾಧುನಿಕ ಎಐನಲ್ಲಿ ಮುಂಚೂಣಿಯಲ್ಲಿರುವ ಓಪನ್ ಎಐ ಅಂತಹ ಸಂಸ್ಥೆಗಳನ್ನು ಹಿಂದೆ ಹಾಕಬೇಕಾಗಿಲ್ಲ. ಆದರೆ ಕನಿಷ್ಠ ಅವರೊಡನೆ ಸ್ಪರ್ಧಿಸುವುದಕ್ಕಾದರೂ ಕಲಿಯಬೇಕು.

ಅಂದರೆ, ದೊಡ್ಡ ಮಟ್ಟದಲ್ಲಿ ಹೊಸ ರೀತಿಯ ಎಐ ಮಾಡೆಲ್‌ಗಳನ್ನು ಪ್ರಯೋಗಿಸಬೇಕು; ವಿದೇಶಿ ಕಂಪನಿಗಳನ್ನೇ ಅವಲಂಬಿಸುವ ಬದಲು ನಮ್ಮದೇ ಆದ ಸ್ವಂತ ಸರ್ವರ್ ಮತ್ತು ಕಂಪ್ಯೂಟಿಂಗ್ ವ್ಯವಸ್ಥೆಯನ್ನು ಹೊಂದಬೇಕು; ಹಾಗೂ ವಿದೇಶಿ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಳ್ಳುವಾಗ ಕೇವಲ ಅವರಿಗೆ ಜಾಗ ಮತ್ತು ಕರೆಂಟ್ ಕೊಡುವುದರ ಬದಲು, ಭಾರತೀಯರ ತಾಂತ್ರಿಕ ಸಾಮರ್ಥ್ಯವನ್ನು ಬೆಳೆಸುವಂತಹ ಒಪ್ಪಂದ ಮಾಡಿಕೊಳ್ಳಬೇಕು. ವಿದೇಶಿ ಡೇಟಾ ಸೆಂಟರ್‌ಗಳಿಗೆ ಗಿಗಾವ್ಯಾಟ್ ಗಟ್ಟಲೆ ವಿದ್ಯುತ್ ಒದಗಿಸುವುದು ಹೇಗೆ ಅಂತ ನಮ್ಮ ಸರ್ಕಾರಕ್ಕೆ ಚೆನ್ನಾಗಿ ಗೊತ್ತು. ಆದರೆ ಒಂದು ಒಳ್ಳೆ ರಿಸರ್ಚ್ ಡಿಪಾರ್ಟ್‌ಮೆಂಟ್, ಲ್ಯಾಬೋರೇಟರಿ ಮತ್ತು ಹೊಸ ಪೀಳಿಗೆಯ ವಿಜ್ಞಾನಿಗಳನ್ನು ಸೃಷ್ಟಿಸುವುದು ಹೇಗೆ ಅನ್ನುವುದನ್ನು ಅದು ಕಲಿಯಬೇಕಿದೆ. ಸರ್ಕಾರಕ್ಕೆ ಕಟ್ಟಡಗಳನ್ನು ಕಟ್ಟೋದು ಅರ್ಥವಾಗುತ್ತೆ, ಆದರೆ ಬುದ್ಧಿಮತ್ತೆಯನ್ನು ಬೆಳೆಸೋದು ಅರ್ಥವಾಗ್ತಿಲ್ಲ.

2025–26ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಜಗತ್ತಿನ ಒಟ್ಟು 'ಎಐ ಟ್ರೈನಿಂಗ್–ಡೇಟಾ' ಸ್ಟಾರ್ಟ್‌ಅಪ್‌ಗಳಲ್ಲಿ ಅಮೆರಿಕದ ಪಾಲು 40% ಮತ್ತು ಯುರೋಪಿಯನ್ ಯೂನಿಯನ್ ಪಾಲು 21% ಇದ್ದರೆ, ಭಾರತದಲ್ಲಿರುವುದು ಕೇವಲ 2% ಮಾತ್ರ. ನಾವೆಷ್ಟು ಹಿಂದಿದ್ದೇವೆ ಅನ್ನೋದು ಸರ್ಕಾರಕ್ಕೂ ಗೊತ್ತಿದೆ. ಆದರೂ ಸರ್ಕಾರ ಬಹುತೇಕ ಮೂಲಸೌಕರ್ಯ ನಿರ್ಮಿಸುವ ಘೋಷಣೆಗಳನ್ನು ಮಾಡುತ್ತವೆಯೇ ಹೊರತು, ನಮ್ಮ ಸ್ವಂತ ಸಾಮರ್ಥ್ಯ ಬೆಳೆಸುವ ಬಗ್ಗೆ ಯೋಚಿಸುವುದಿಲ್ಲ.

ನಿಜವಾದ ದೊಡ್ಡ ಅಪಾಯ ಅಂದ್ರೆ, ಭಾರತದಲ್ಲಿ ನಮ್ಮ ಮಿತಿಯನ್ನೇ ನಾವು ನಮ್ಮ ಕಾರ್ಯತಂತ್ರ [strategy] ಅಂತ ಬಹಳ ಬೇಗ ನಂಬಿಬಿಡ್ತೀವಿ. ನಮಗಿನ್ನೂ ಅತ್ಯಾಧುನಿಕ ತಂತ್ರಜ್ಞಾನ ಸಾಧಿಸೋಕೆ ಸಾಧ್ಯವಾಗುತ್ತಿಲ್ಲ ಅನ್ನೋ ಕಾರಣಕ್ಕೆ, ಆ ಅತ್ಯಾಧುನಿಕ ತಂತ್ರಜ್ಞಾನ ನಮಗೆ ಮುಖ್ಯಾನೇ ಅಲ್ಲ ಅಂತ ನಮಗೆ ನಾವೇ ಹೇಳ್ಕೊಳ್ತೀವಿ. ಬೇರೆಯವರು ಬೆಳೆಸಿದ ತಂತ್ರಜ್ಞಾನಾನ ಎಲ್ಲರಿಗೂ ತಲುಪಿಸುವುದರಲ್ಲಿ [diffusion] ನಾವು ಎಕ್ಸ್‌ಪರ್ಟ್ಸ್, ಹಾಗಾಗಿ ಅಷ್ಟು ಮಾಡಿದ್ರೆ ಸಾಕು ಅಂತ ಸಮರ್ಥಿಸಿಕೊಳ್ತೀವಿ. ಇದರಲ್ಲಿ ಸ್ವಲ್ಪ ಭಾಗ ಭಾರತದ ನಿಜವಾದ ಸಾಮರ್ಥ್ಯದ ಪ್ರಾಮಾಣಿಕ ಅಂದಾಜು ಇರಬಹುದು. ಆದರೆ ಉಳಿದದ್ದು

ನಮಗೆ ಏನನ್ನು ಮಾಡಲು ಇಚ್ಛೆ ಇಲ್ಲವೋ ಅದಕ್ಕೆ ನಾವು ನಾವು ನೀಡುತ್ತಿರುವ ನೆಪಗಳು.

ಆದಾಗ್ಯೂ, ತಂತ್ರಜ್ಞಾನವನ್ನು ಎಲ್ಲೆಡೆ ತಲುಪಿಸುವ ನಮ್ಮ ಸಾಮರ್ಥ್ಯ ಕೂಡ ಸಮಾನವಾದ ಅಡಿಪಾಯದ ಮೇಲೆ ನಿಂತಿಲ್ಲ ಎಂಬುದನ್ನು ನಾವು ಮರೆಯಬಾರದು. ಭಾರತದ ಬ್ಯಾಂಕಿಂಗ್ ಕ್ಷೇತ್ರವು 30 ವರ್ಷಗಳಿಂದ ಡಿಜಿಟಲೀಕರಣಗೊಳ್ಳುತ್ತಾ ಬಂದಿದ್ದರಿಂದಲೇ 'ಯುಪಿಐ' [UPI] ಯಶಸ್ವಿಯಾಯಿತು. ಹಾಗೆಯೇ, ಸರ್ಕಾರವು 60 ವರ್ಷಗಳಿಂದ ತನ್ನ ನಾಗರಿಕರನ್ನು ಗುರುತಿಸುವ ಕೆಲಸ ಮಾಡುತ್ತಿದ್ದರಿಂದ 'ಆಧಾರ್' [Aadhaar] ಯಶಸ್ವಿಯಾಯಿತು. ಆದರೆ, ಎಲ್ಲಿ ಇಂತಹ ಗಟ್ಟಿ ತಳಹದಿ ಇರಲಿಲ್ಲವೋ – ಅಂದರೆ ಆರೋಗ್ಯ, ಶಾಲಾ ಶಿಕ್ಷಣ ಮತ್ತು ಕೃಷಿ ವಿಸ್ತರಣೆಯಂತಹ ಕ್ಷೇತ್ರಗಳಲ್ಲಿ – ಇದೇ ಮಾದರಿಯ ತಂತ್ರಜ್ಞಾನದ ವ್ಯವಸ್ಥೆಗಳನ್ನು ರೂಪಿಸಿದರೂ, ಜನರು ಅದನ್ನು ಒಪ್ಪಿಕೊಂಡೂ ಬಳಸಲಿಲ್ಲ. ಕೃತಕ ಬುದ್ಧಿಮತ್ತೆಯನ್ನು [AI] ಎಲ್ಲೆಡೆ ವಿಸ್ತರಿಸುವ ವಿಚಾರದಲ್ಲೂ ನಾವು ಇದೇ ಸಮಸ್ಯೆಯನ್ನು ಎದುರಿಸಬೇಕಾಗಬಹುದು.

ಕಳೆದ ವಾರ ವಿಶಾಖಪಟ್ಟಣದಲ್ಲಿ, ಬೇರೊಬ್ಬರ 'ಬುದ್ಧಿಮತ್ತೆಗೆ [AI] ಆಶ್ರಯ ನೀಡುವ ಕಟ್ಟಡಗಳಿಗೆ ನಾವು ಅಡಿಪಾಯ ಹಾಕಿದ್ದೇವೆ. ಆ ಕಟ್ಟಡಗಳು ನಮ್ಮವಾಗಿರುತ್ತವೆ, ಆದರೆ ಆ ಬುದ್ಧಿಮತ್ತೆ ನಮ್ಮದಲ್ಲ. ಕಾಂಕ್ರೀಟ್ ಗಟ್ಟಿಯಾಗುವ ಮುನ್ನವೇ (ಅಂದರೆ, ಸಮಯ ಮಿಂಚುವ ಮುನ್ನವೇ), 'ಈ ಬಾರಿ ಇಷ್ಟು ಮಾತ್ರ ನಮಗೆ ಸಾಕೇ?' ಎಂಬ ಪ್ರಶ್ನೆಯನ್ನು ನಾವು ನಮ್ಮನ್ನೇ ಕೇಳಿಕೊಳ್ಳಬೇಕಿದೆ.

(ಲಾಂಬಾ ಅವರು ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದಾರೆ, ಮತ್ತು ರಾಜನ್ ಅವರು ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್).

The original was published in English the Indian express

## ಎಐ ಬಗ್ಗೆ ಪೋಪ್ ಎಚ್ಚರಿಕೆ

ಇದು ಅಂತರಾ ಹಲ್ದಾರ್ ಅವರ ಲೇಖನದ ಸಾರಾಂಶ. ಮುಂದಿನ ಸಂಚಿಕೆಯಲ್ಲಿ ಇದರ ಪೂರ್ಣ ಭಾಗ ಪ್ರಕಟಿಸಲಾಗುತ್ತದೆ.

ಬೈಬಲ್‌ನಲ್ಲಿ ಒಂದು ಕಥೆಯಿದೆ. ಎಲ್ಲಾ ಮನುಷ್ಯರು ಒಂದಾಗಿ, ಒಂದೇ ಭಾಷೆ ಆಡುತ್ತಾ ಸ್ವರ್ಗದವರೆಗೂ ಒಂದು ದೊಡ್ಡ ಗೋಪುರ ಕಟ್ಟಲು ಹೋಗ್ತಾರೆ. ಆದರೆ ಅವರ ಅಹಂಕಾರ ನೋಡಿ ದೇವರಿಗೆ ಸಿಟ್ಟು ಬಂದು, ಆ ಗೋಪುರವನ್ನು ಕೆಡವಿ, ಮನುಷ್ಯರೆಲ್ಲರೂ ಬೇರೆ ಬೇರೆ ಭಾಷೆ ಮಾತಾಡುವಂತೆ ಮಾಡಿ ಪ್ರಪಂಚಾದ್ಯಂತ ಚದುರಿಸಿಬಿಡ್ತಾನೆ.

ಈಗಿನ ಎಐ ನೋಡಿದರೆ ಈ ಕಥೆ ನೆನಪಾಗುತ್ತೆ. ಈ ತಂತ್ರಜ್ಞಾನ ಮನುಕುಲವನ್ನು ಉದ್ಧಾರ ಮಾಡುತ್ತಾ? ಅಥವಾ ವಿನಾಶದ ಕಡೆಗೆ ಕೊಂಡೊಯ್ಯುತ್ತಾ? ಅನ್ನೋದೇ ದೊಡ್ಡ ಪ್ರಶ್ನೆ. ಪ್ರಪಂಚದ ದೊಡ್ಡ ದೊಡ್ಡ ಟೆಕ್ ಕಂಪನಿಗಳು ಭವಿಷ್ಯವನ್ನು ತಮ್ಮ ಕಂಟ್ರೋಲ್‌ಗೆ ತೆಗೆದುಕೊಳ್ಳಲು ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಎಐ ಸಿಸ್ಟಮ್‌ಗಳನ್ನು ರೆಡಿ ಮಾಡ್ತಿವೆ. ಇದರಿಂದ ಜ್ಞಾನ, ಕೆಲಸ, ರಾಜಕೀಯ ಎಲ್ಲವೂ ಬದಲಾಗುತ್ತೆ ಅಂತಿದ್ದಾರೆ. ಕೆಲವರು ಇದೊಂದು ಅದ್ಭುತ ಅಂದ್ರೆ, ಇನ್ನು ಕೆಲವರು ಇದರಿಂದ ಅಪಾಯ ಕಾಯ್ತಿದೆ ಅಂತ ಹೆದರುತ್ತಿದ್ದಾರೆ.

ಇದು ನೋಡಲು 2008ರ ಆರ್ಥಿಕ ಕುಸಿತದ ಮುಂಚಿನ ಪರಿಸ್ಥಿತಿ ತರಹಾನೇ ಇದೆ. ಅವತ್ತೂ ಅಷ್ಟೇ, ಬ್ಯಾಂಕಿಂಗ್ ಕ್ಷೇತ್ರದ ಕೆಲವೇ ಕೆಲವು ಜನ "ನಮಗೆಲ್ಲಾ ಗೊತ್ತು, ಭವಿಷ್ಯ ಸೂಪರ್ ಆಗಿರುತ್ತೆ" ಅಂದುಕೊಂಡು ಆಟ ಆಡಿ ಆಮೇಲೆ ಕೈ ಸುಟ್ಟುಕೊಂಡ್ರು. ಆದರೆ ಎಐ ತರೋ ಆಪತ್ತು ಅದಕ್ಕಿಂತ ನೂರು ಪಟ್ಟು ದೊಡ್ಡದಾಗಿರಬಹುದು. ಇದಕ್ಕೆ ಸರಿಯಾದ ಹೋಲಿಕೆ ಅಂದ್ರೆ 18ನೇ ಶತಮಾನದಲ್ಲಿ ನಡೆದ ಕೈಗಾರಿಕಾ ಕ್ರಾಂತಿ. ಅವತ್ತು ಫ್ಯಾಕ್ಟರಿಗಳು, ರೈಲ್ವೆಗಳು ಬಂದು ಜಗತ್ತನ್ನೇ ಬದಲಾಯಿಸಿದಾಗ, ಶ್ರೀಮಂತರು ಇನ್ನು ಶ್ರೀಮಂತರಾದ್ರು, ಬಡವರು ನರಕ ಅನುಭವಿಸಿದ್ರು.

ಅವತ್ತು ಪೋಪ್ ಲಿಯೋ ಕಾರ್ಮಿಕರ ಕಷ್ಟಗಳ ಬಗ್ಗೆ ಧ್ವನಿ ಎತ್ತಿದ್ರು. ಈಗಿನ ಹೊಸ ಪೋಪ್ ಲಿಯೋ [XIV] ಅವರು 'ಮಾಗ್ನಿಫಿಕಾ ಹ್ಯೂಮಾನಿಟಾಸ್' ಅನ್ನೋ ತಮ್ಮ ಪತ್ರದ ಮೂಲಕ ಎಐ ಬಗ್ಗೆ ಎಚ್ಚರಿಕೆ ಕೊಡ್ತಿದ್ದಾರೆ. ಅಂದು ದೈಹಿಕ ಶ್ರಮದ ಕೈಗಾರಿಕೀಕರಣವಾಗಿದ್ದರೆ, ಇಂದು 'ಬುದ್ಧಿವಂತಿಕೆ'ಯ ಕೈಗಾರಿಕೀಕರಣವಾಗುತ್ತಿದೆ!

ಸಿಲಿಕಾನ್ ವ್ಯಾಲಿಯ ಜನರಿಗೆ "ಮಷೀನ್‌ಗಳು ಏನೆಲ್ಲಾ ಮಾಡಬಲ್ಲವು?" ಅನ್ನೋದು ಮುಖ್ಯ. ಆದರೆ ವ್ಯಾಟಿಕನ್‌ನ ಪೋಪ್‌ಗೆ "ಮನುಷ್ಯ ಅಂದ್ರೆ ಯಾರು?" ಅನ್ನೋದು ಮುಖ್ಯ. ಟೆಕ್ ಕಂಪನಿಗಳ ಪಾಲಿಗೆ ಎಐ ರೋಗಗಳನ್ನು ವಾಸಿ ಮಾಡುವ, ಸಾವು ಗೆಲ್ಲುವ ಒಂದು ದೇವರ ತರಹ ಕಾಣ್ತಿದೆ. ಆದರೆ ಇದರ ಹಿಂದೆ ಅವರ ಬಿಸಿನೆಸ್ ಲಾಭ ಅಡಗಿದೆ.

ಆದರೆ ಪೋಪ್ ಪ್ರಕಾರ,ಮನುಷ್ಯರೆಂದರೆ ಕೇವಲ ಡೇಟಾ ಪ್ರೊಸೆಸ್ ಮಾಡುವ ಕಂಪ್ಯೂಟರ್‌ಗಳಲ್ಲ. ನಮ್ಮಲ್ಲಿ ಪ್ರೀತಿ, ಸ್ನೇಹ, ನೋವು, ನಲಿವು ಮತ್ತು ನೈತಿಕ ಜವಾಬ್ದಾರಿ ಇದೆ. ಮನುಷ್ಯನ ಬೆಲೆಯನ್ನು ಕೇವಲ ಆಫೀಸ್‌ನ ಪ್ರೊಡಕ್ಟಿವಿಟಿ ಅಥವಾ ಮಾರ್ಕೆಟ್ ರೇಟ್ ಮೇಲೆ ಅಳೆಯಲು ಸಾಧ್ಯವಿಲ್ಲ.

ಮಾರುಕಟ್ಟೆಯ ಲಾಭ-ನಷ್ಟಗಳೇ ಎಲ್ಲವನ್ನೂ ತೀರ್ಮಾನಿಸಲು ಸಾಧ್ಯವಿಲ್ಲ. ಎಐ ಇಂದ ಕೆಲಸ ಕಳೆದುಕೊಳ್ಳುವ ಜನರ ಗತಿಯೇನು? ಇವು ಇಂಜಿನಿಯರಿಂಗ್ ಪ್ರಶ್ನೆಗಳಲ್ಲ, ಇವು ನೈತಿಕ ಪ್ರಶ್ನೆಗಳು.
ಕೊನೆಯದಾಗಿ:
"ನಮ್ಮ ಹತ್ತಿರ ಅಣುಬಾಂಬ್ ಇದೆ ಅಂದ ತಕ್ಷಣ, ನಾವು ಜಗತ್ತನ್ನು ನಾಶ ಮಾಡಿಕೊಳ್ಳಬೇಕು ಅಂತೇನೂ ಇಲ್ವಲ್ಲ?" ತಂತ್ರಜ್ಞಾನ ಇದೆ ಅಂದ ತಕ್ಷಣ ಅದನ್ನು ಬ್ಲೈಂಡ್ ಆಗಿ ಬಳಸಲೇಬೇಕು ಅಂತ ನಿಯಮವಿಲ್ಲ. ತಂತ್ರಜ್ಞಾನ ತನ್ನಷ್ಟಕ್ಕೆ ತಾನು ಭವಿಷ್ಯವನ್ನು ನಿರ್ಧಾರ ಮಾಡಲ್ಲ, ಅದನ್ನು ಬಳಸುವ ಮನುಷ್ಯರು ನಿರ್ಧರಿಸ್ತಾರೆ. ಸದ್ಯಕ್ಕೆ ನಡೀತಿರೋ ಹೋರಾಟ ಕೇವಲ ತಂತ್ರಜ್ಞಾನದ ಮೇಲಲ್ಲ, ತಂತ್ರಜ್ಞಾನವನ್ನು ಕೇವಲ 'ಲಾಭ'ಕ್ಕಾಗಿ ಬಳಸುವ ಆಸೆ ಮತ್ತು 'ಮನುಕುಲದ ಒಳಿತಿಗಾಗಿ' ಬಳಸಬೇಕೆಂಬ ಕಾಳಜಿಯ ನಡುವೆ.

# ಕೃತಕ ಬುದ್ಧಿಮತ್ತೆಯನ್ನು ಕುರಿತಂತೆ ಪೋಪ್ ಇನ್ನು ಒಂದು ಹೆಜ್ಜೆ ಮುಂದೆ ಹೋಗಬೇಕಿತ್ತು

## ಡ್ಯಾರನ್ ಅಸೆಮೊಗ್ಲು

ನಾವು ಒಬ್ಬರಿಗೊಬ್ಬರು ಮಾತನಾಡುವ ರೀತಿ, ಮಾಹಿತಿ ಪಡೆದುಕೊಳ್ಳುವ ಬಗೆ, ಕೆಲಸ ಮಾಡುವ ವಿಧಾನ, ಎಲ್ಲವನ್ನೂ ಎಐ (ಕೃತಕ ಬುದ್ಧಿಮತ್ತೆ) ಮರುರೂಪಿಸುತ್ತಿದೆ. ಜನರ ಆದಾಯ ಮತ್ತು ಸ್ಥಾನಮಾನ ಹಂಚಿಕೆಯಾಗುವ ಕ್ರಮ, ಅಷ್ಟೇ ಯಾಕೆ, ಯುದ್ಧ ಮಾಡುವ ರೀತಿಯನ್ನೂ ಇದು ಬದಲಾಯಿಸುತ್ತಿದೆ. ಆದರೆ, ಇಷ್ಟೆಲ್ಲಾ ಆಗುತ್ತಿದ್ದರೂ ಸಾರ್ವಜನಿಕರು ಮಾತ್ರ ಎಐ ಕಂಪನಿಗಳ ನಡುವಿನ ಪೈಪೋಟಿ ಅಥವಾ ತಂತ್ರಜ್ಞಾನದ ಸಾಮರ್ಥ್ಯದ ಬಗ್ಗೆ ಅಮೂರ್ತ ಚರ್ಚೆಯಲ್ಲಿ ತೊಡಗಿಕೊಂಡಿದ್ದಾರೆ. “ನಿಜವಾಗಿಯೂ ಎಐ ನಮಗೆ ಯಾವ ಉದ್ದೇಶಕ್ಕೆ ಬೇಕು” ಅಥವಾ “ನಮ್ಮ ಇಂದಿನ ಮನಸ್ಥಿತಿ, ಸಂಸ್ಥೆಗಳು ಹಾಗೂ ನಿಯಂತ್ರಣ ವ್ಯವಸ್ಥೆಗೆ ತಂತ್ರಜ್ಞಾನವನ್ನು ಒಟ್ಟಾರೆಯಾಗಿ ಜನರ ಒಳಿತನ್ನು ಸುಧಾರಿಸಲು ಬಳಕೆಯಾಗುವಂತೆ ಮಾಡುವ ಸಾಮರ್ಥ್ಯವಿದೆಯೇ,” ಎಂದು ಯಾರೂ ಕೇಳುತ್ತಿಲ್ಲ.

ಇಂಥ ಸಮಯದಲ್ಲಿ, ಹದಿನಾಲ್ಕನೆಯ ಪೋಪ್ ಲಿಯೋ ಅವರು ತಮ್ಮ ಮೊದಲ ಅಧಿಕೃತ ಪತ್ರದಲ್ಲಿ [encyclical] ಈ ಬಗ್ಗೆ ಬರೆದಿರುವುದು ತುಂಬಾ ಸಂತಸದ ವಿಷಯ. ಅವರು ಎಐ ಈಗ ಹೋಗುತ್ತಿರುವ ದಾರಿ ಮನುಷ್ಯನ ಗೌರವಕ್ಕೆ ಅಪಾರ ಧಕ್ಕೆ ತರುವಂತಿದೆ ಎಂದಿದ್ದಾರೆ. “ತಂತ್ರಜ್ಞಾನದಿಂದ ಆಗುವ ಬದಲಾವಣೆಗಳು ನಮ್ಮ ಆಯ್ಕೆಗಳು. ಅವು ಹಣೆಬರಹ ಅಲ್ಲ” ಎಂದು ಬಹಳ ದಿನಗಳಿಂದ ವಾದಿಸುತ್ತಿರುವ ಒಬ್ಬ ಅರ್ಥಶಾಸ್ತ್ರಜ್ಞನಾಗಿ ನಾನು ಪೋಪ್ ಅವರ ಮಧ್ಯಪ್ರವೇಶವನ್ನು ಸ್ವಾಗತಿಸುತ್ತೇನೆ.

ಪೋಪ್ ಅವರು ಒಂದು ಹೆಜ್ಜೆ ಮುಂದೆ ಹೋಗಿ, “ತಂತ್ರಜ್ಞಾನ ಯಾವತ್ತೂ ತಟಸ್ಥವಾಗಿರಲಿಲ್ಲ. ಅದನ್ನು ಯಾರು ವಿನ್ಯಾಸಗೊಳಿಸುತ್ತಾರೆ, ಯಾರು ಹಣ ಹೂಡುತ್ತಾರೆ, ಯಾರು ನಿಯಂತ್ರಿಸುತ್ತಾರೆ, ಮತ್ತು ಯಾರು ಬಳಸುತ್ತಾರೆ ಅನ್ನುವುದು ಅದರ ಲಕ್ಷಣಗಳನ್ನು ನಿರ್ಧರಿಸುತ್ತದೆ” ಎಂದು ಹೇಳಿದ್ದಾರೆ. ಈ ದೃಷ್ಟಿಯಲ್ಲಿ ಅವರು ಉಳಿದವರಿಗಿಂತ ಮುಂದಿದ್ದಾರೆ. ಆದರೂ, ನನ್ನ ಆತಂಕ ಏನೆಂದರೆ “ಎಐ ಅನ್ನು ನಿಜವಾಗಿ ಯಾವ ಉದ್ದೇಶಕ್ಕೆ ವಿನ್ಯಾಸಗೊಳಿಸಬೇಕು?” ಎನ್ನುವ ಅತಿ ಮುಖ್ಯ ಪ್ರಶ್ನೆ ಕುರಿತಂತೆ ಅವರು ಇನ್ನೂ ಗಂಭೀರವಾಗಿ ಯೋಚಿಸಬೇಕಿತ್ತು. ಅದು ಅವರಿಗೂ ಸಾಧ್ಯವಾಗಿಲ್ಲ.

ನಾನು ಮತ್ತು ಸೈಮನ್ ಜಾನ್ಸನ್ ನಮ್ಮ ‘ಪವರ್ ಅಂಡ್ ಪ್ರೋಗ್ರೆಸ್: ಅವರ್ ಥೌಸಂಡ್–ಇಯರ್ ಸ್ಟ್ರಗಲ್ ಓವರ್ ಟೆಕ್ನಾಲಜಿ ಅಂಡ್ ಪ್ರಾಸ್ಪೆರಿಟಿ’ ಕೃತಿಯಲ್ಲಿ ಒತ್ತಿ ಹೇಳಿರುವಂತೆ, ಕೃತಕಬುದ್ಧಿಮತ್ತೆಯಂತಹ ತಂತ್ರಜ್ಞಾನ ಸಾಗುವುದಕ್ಕೆ ಹಲವು ದಾರಿಗಳಿವೆ. ಮತ್ತು ಪ್ರತಿಯೊಂದು ಮಾರ್ಗವೂ ಸಮಾಜದ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಈಗ ಯುದ್ಧ ಮತ್ತು ಕಾನೂನು ವ್ಯವಸ್ಥೆಯಲ್ಲಿ ಕೃತಕಬುದ್ಧಿಮತ್ತೆ ಬಳಕೆಯಾಗುತ್ತಿರುವ ಕ್ರಮವನ್ನು ಪೋಪ್ ಪ್ರಶ್ನಿಸಿರುವುದು ಸರಿಯಿದೆ. ಕೇವಲ ಕೆಲವು ವರ್ಷಗಳ ಹಿಂದೆ ಎಐ ಬಳಸಿ ಸಾಮೂಹಿಕ ಕಣ್ಗಾವಲು ಮಾಡುವುದು, ಅಲ್ಗಾರಿದಮ್‌ಗಳೇ ಶತ್ರುಗಳನ್ನು ಗುರುತಿಸಿ ಕೊಲ್ಲುವುದು ಇವೆಲ್ಲ ನಿಷೇಧಿತ ಅಥವಾ ಸ್ವೀಕಾರಾರ್ಹವಲ್ಲ ಅಂದುಕೊಂಡಿದ್ದವು. ಆದರೆ ಈಗ ಇವೆಲ್ಲಾ ಮಾಮೂಲಿಯಾಗಿಬಿಟ್ಟಿವೆ.

ಸಿಲಿಕಾನ್ ವ್ಯಾಲಿಯಲ್ಲಿರುವ ಅನೇಕರು ಒಂದು ಹೊಸ ‘ಮಿಲಿಟರಿ–ಅಲ್ಗಾರಿದಮ್ ಬಳಸಿ ಅಮೆರಿಕ ತನ್ನ ಮಿಲಿಟರಿ ಶಕ್ತಿಯನ್ನು [hard power] ಬಲಪಡಿಸಿಕೊಳ್ಳಬೇಕೆಂದು ಒತ್ತಾಯಿಸುತ್ತಿರುವ ಬೆನ್ನಲ್ಲೇ, ಲಿಯೋ ಅವರು ಎಚ್ಚರಿಸುತ್ತಾ, “ಮಾನವರ ಮುಖವನ್ನು ನೋಡದೆಯೇ ದಾಳಿ ಮಾಡಲು ನೆರವಾಗುವ ಯಾವುದೇ ತಂತ್ರಜ್ಞಾನವು, ಸಂಘರ್ಷದ ನೈತಿಕತೆಯನ್ನು ಕಡಿಮೆ ಮಾಡುತ್ತದೆ” ಎಂದು ಹೇಳಿದ್ದಾರೆ. ನಂತರ ಪೋಪ್ ಅವರು, “ಎಐ ಅನ್ನು ‘ಸಶಸ್ತ್ರ’ ಸ್ಪರ್ಧೆಯ ಮನಸ್ಥಿತಿಯಿಂದ ಮುಕ್ತಗೊಳಿಸಲು ‘ಕೃತಕ ಬುದ್ಧಿಮತ್ತೆಯ ನಿಶ್ಶಸ್ತ್ರೀಕರಣ’ ಆಗಬೇಕು ಎಂದು ಒತ್ತಾಯಿಸುತ್ತಾರೆ. ಈ ಸ್ಪರ್ಧೆಯು ಇಂದಿನ ದಿನಗಳಲ್ಲಿ ಕೇವಲ ಮಿಲಿಟರಿ ಕ್ಷೇತ್ರಕ್ಕಷ್ಟೇ ಸೀಮಿತವಾಗಿಲ್ಲ. ಆರ್ಥಿಕ ಹಾಗೂ ಬೌದ್ಧಿಕ ಮಟ್ಟದಲ್ಲೂ ಹರಡಿಕೊಂಡಿರುವ ಸಂಗತಿಯಾಗಿದೆ,” ಎನ್ನುತ್ತಾರೆ.

ಈ ಎಲ್ಲ ಕಳಕಳಿಗಳ ಹಿಂದೆ ಒಂದು ಮೂಲಭೂತ ಸತ್ಯ ಅಡಗಿದೆ: ತಂತ್ರಜ್ಞಾನದ ಬೆಳವಣಿಗೆ ಎಂದರೆ ಅದು ನೈತಿಕ ಬೆಳವಣಿಗೆಯಲ್ಲ. ಕೇವಲ ತಾಂತ್ರಿಕವಾಗಿ ಒಂದು ಕೆಲಸ ಮಾಡಲು ಸಾಧ್ಯ ಎಂದ ಮಾತ್ರಕ್ಕೆ ಅದು ಮಾನವ ಸಮುದಾಯಕ್ಕೆ ಒಳ್ಳೆಯದನ್ನೇ ಮಾಡುತ್ತದೆ ಎನ್ನಲಾಗದು. ತಂತ್ರಜ್ಞಾನವು ಪೂರಕವಾಗಿದೆಯೇ ಅಥವಾ ಮಾರಕವಾಗಿದೆಯೇ; ಅದರ ಚುಕ್ಕಾಣಿ ಯಾರ ಕೈಯ್ಯಲ್ಲಿದೆ ಮತ್ತು ಅವರ ಹಿತಾಸಕ್ತಿ ಮತ್ತು ಸಿದ್ಧಾಂತಗಳು ಎಂತಹುದು ಎನ್ನುವುದನ್ನು ಆಧರಿಸಿರುತ್ತದೆ.

ಪೋಪ್ ಅವರು ಇಂದಿನ ಅತಿ ದೊಡ್ಡ ಅಪಾಯದ ಬಗ್ಗೆಯೂ ಸ್ವಲ್ಪ ಸುಳಿವು ನೀಡಿದ್ದಾರೆ. ಅದೇನೆಂದರೆ, “ಎಐ ನಮ್ಮ ದೈನಂದಿನ ಸಾಧಾರಣ ಕೆಲಸಗಳನ್ನು ತಾನೇ ಮಾಡುವ ಮೂಲಕ ಉತ್ಪಾದನೆಯನ್ನು ಹೆಚ್ಚಿಸುವುದಾಗಿ ಭರವಸೆ ನೀಡುತ್ತಿದೆ. ಆದರೆ ಕಾರ್ಮಿಕನಿಗೆ ನೆರವಾಗುವ ಬದಲು, ಮನುಷ್ಯನೇ ಯಂತ್ರಗಳ ವೇಗಕ್ಕೆ ಮತ್ತು ಅದರ ಅವಶ್ಯಕತೆಗೆ ತಕ್ಕಂತೆ ಕೆಲಸ ಮಾಡುವುದಕ್ಕೆ ಒಗ್ಗಿಸುತ್ತಿದೆ.” ಆದರೆ ಪೋಪ್ ಅವರು ಇಂದಿನ ಎಐ ವಿನ್ಯಾಸದ ಹಿಂದಿನ ಚಿಂತನೆಯನ್ನು ಪ್ರಶ್ನಿಸುತ್ತಿಲ್ಲ. ಇಂದಿನ ಎಐ ಉದ್ಯಮದ ಇಡೀ ಧೋರಣೆ ಮನುಷ್ಯನ ಸಾಮರ್ಥ್ಯವನ್ನು ಅನುಕರಿಸುವುದು ಮತ್ತು ಮನುಷ್ಯನ ಕೆಲಸಗಳನ್ನು ಯಾಂತ್ರೀಕರಣಗೊಳಿಸುವ ಕಡೆಗಿದೆ. ಮನುಷ್ಯ ಮಾಡಬಹುದಾದ ಎಲ್ಲಾ



ಕೆಲಸಗಳನ್ನು ತಾನೇ ಮಾಡಬಲ್ಲ ಒಂದು 'ಸಾರ್ವತ್ರಿಕ ಕೃತಕ ಬುದ್ಧಿಮತ್ತೆ' ಆರ್ಟಿಫಿಷಿಯಲ್ ಜನರಲ್ ಇಂಟೆಲಿಜೆನ್ಸ್ ರೂಪಿಸುವುದೇ ಉದ್ಯಮದ ಪರಮೋಚ್ಚ ಗುರಿಯಾಗಿದೆ.

ಈ ಇಡೀ ಸಿದ್ಧಾಂತವು ಯಂತ್ರದ ಬುದ್ಧಿಮತ್ತೆ ಮತ್ತು ಮಾನವನ ಬುದ್ಧಿಮತ್ತೆಗಳು ಮೂಲಭೂತವಾಗಿ ಒಂದೇ ರೀತಿಯದ್ದು ಎಂಬ ತಪ್ಪು ಕಲ್ಪನೆಯನ್ನು ಆಧರಿಸಿದೆ. ಆದರೆ, ಮನುಷ್ಯರು ಒಂದೇ ಬಾರಿ ನೋಡಿ ಕಲಿಯುತ್ತಾರೆ. ನಾವು ಕೇವಲ ಕೆಲವು ಉದಾಹರಣೆಗಳನ್ನು ನೋಡಿ ಸಿದ್ಧಾಂತಗಳನ್ನು ರೂಪಿಸಿಕೊಳ್ಳುತ್ತೇವೆ. ನಮ್ಮ ಮನಸ್ಸಿನಲ್ಲೇ ಸಾಧ್ಯತೆಗಳನ್ನು ರೂಪಿಸಿಕೊಳ್ಳುತ್ತೇವೆ. ತಪ್ಪು–ಒಪ್ಪುಗಳ ಸಾಮಾಜಿಕ ಪ್ರಕ್ರಿಯೆಯಲ್ಲಿ ನಮ್ಮ ತಿಳುವಳಿಕೆಯನ್ನು ಮತ್ತಷ್ಟು ಹದಗೊಳಿಸಿಕೊಳ್ಳುತ್ತೇವೆ. ಇದಕ್ಕೇ ನೋಡಿ, ಮಕ್ಕಳು ಕೇವಲ ಕೆಲವು ಪದಗಳನ್ನು ಅನುಕರಿಸುವ ಮೂಲಕ, ಅವುಗಳನ್ನು ವಿಸ್ತರಿಸುತ್ತಾ, ಎದುರಿಗಿರುವವರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಗಮನಿಸುತ್ತಾ ತಮ್ಮ ಭಾಷೆಯನ್ನು ತಿದ್ದಿಕೊಳ್ಳುತ್ತಾ ಕಲಿಯುತ್ತಾರೆ. ಆದರೆ, ಭಾರಿ ಪ್ರಮಾಣದ ಮಾಹಿತಿಯನ್ನು ಗ್ರಹಿಸುವುದರಲ್ಲಿ ಅಥವಾ ಅವ್ಯವಸ್ಥಿತವಾಗಿ ಚದುರಿಹೋಗಿರುವ ಮಾಹಿತಿಯಿಂದ ನಮಗೆ ಪ್ರಸ್ತುತವಾದ ವಿನ್ಯಾಸಗಳನ್ನು ಹೆಕ್ಕಿಕೊಳ್ಳುವುದರಲ್ಲಿ ನಾವು ಅಷ್ಟು ನಿಪುಣರಲ್ಲ.

ಇದಕ್ಕೆ ಎಐ ಹಾಗಲ್ಲ. ಎಐ ಮಾಡೆಲ್ಲುಗಳು ಅಪಾರ ಪ್ರಮಾಣದ ತರಬೇತಿ ದತ್ತಾಂಶಗಳನ್ನು ಉಪಯೋಗಿಸಿಕೊಂಡೇ ಬೆಳೆಯುತ್ತವೆ. ದೊಡ್ಡ ಮಟ್ಟದಲ್ಲಿ ದತ್ತಾಂಶಗಳ ವಿನ್ಯಾಸವನ್ನು ಗುರುತಿಸುವುದರಲ್ಲಿ ಅದಕ್ಕೆ ಪರಿಣತಿ ಸಾಧ್ಯವಾಗಿದೆ. ಆದರೆ, ಅವು ಇದುವರೆಗೆ ಅಪ್ಪಟ ಸೃಜನಶೀಲತೆಯನ್ನು ಪ್ರದರ್ಶಿಸಿಲ್ಲ. ವಾಸ್ತವ ಜಗತ್ತಿನ ಯಾವುದೇ ಪ್ರತ್ಯಕ್ಷ ಅನುಭವ ಅವುಗಳಿಗಿಲ್ಲ. ಅಷ್ಟೇ ಅಲ್ಲ, ಭೌತಿಕ ಮತ್ತು ಸಾಮಾಜಿಕ ಪ್ರಪಂಚದೊಂದಿಗೆ ಒಡನಾಡುತ್ತಾ ತಪ್ಪು–ಒಪ್ಪುಗಳ ಮೂಲಕ ಕಲಿಯುವ ಸಾಮರ್ಥ್ಯವೂ ಅವುಗಳಿಗಿಲ್ಲ (ಕೆಲವು ನಿರ್ದಿಷ್ಟ ಕ್ಷೇತ್ರಗಳಲ್ಲಿ 'ರಿಇನ್‌ಫೋರ್ಸ್‌ಮೆಂಟ್ ಲರ್ನಿಂಗ್' ಮೂಲಕ ನಿಖರವಾದ ಗುರಿ ಮತ್ತು ಪ್ರತಿಫಲಗಳನ್ನು ನಿಗದಿಪಡಿಸಿದಾಗ ಸಿಗುವ ಸೀಮಿತ ಯಶಸ್ಸನ್ನು ಹೊರತುಪಡಿಸಿ).

ಎರಡು ವಿಭಿನ್ನ ವಸ್ತು ಅಥವಾ ವಿಷಯಗಳನ್ನು ಒಂದಕ್ಕೊಂದು ಪರ್ಯಾಯವಾಗಿ ಅಥವಾ ಕುರುಡಾಗಿ ನಕಲು ಮಾಡಲು ಬಳಸಲಾಗುವುದಿಲ್ಲ; ಹಾಗೆ ಮಾಡುವುದು ಸರಿಯೂ ಅಲ್ಲ. ಒಂದು ವೇಳೆ ಹಾಗೆ ಮಾಡಲು ಪ್ರಯತ್ನಿಸಿದರೆ, ಅದರ ಫಲಿತಾಂಶ ತೀರಾ ಸಾಧಾರಣವಾಗಿರುತ್ತದೆ. 1990ರ ದಶಕದ ಪ್ರಸಿದ್ಧ 'ಚಿಕಾಗೊ ಬುಲ್ಸ್' ಬಾಸ್ಕೆಟ್‌ಬಾಲ್ ತಂಡದ ಅಪ್ರತಿಮ ಕೋಚ್ ಆಗಿದ್ದ ಫಿಲ್ ಜಾಕ್ಸನ್ ಅವರು, ಮೈಕಲ್ ಜೋರ್ಡನ್ ಅವರನ್ನು ಸ್ಕಾಟಿ ಪಿಪ್ಪನ್ ಮತ್ತು ಡೆನ್ನಿಸ್ ರಾಡ್ಮನ್ ಅವರ ಆಟದ ಶೈಲಿಯನ್ನೇ ಸಂಪೂರ್ಣ ನಕಲು ಮಾಡಲು ಒತ್ತಾಯಿಸಿದ್ದರೆ, ಅದೊಂದು ಚಾರಿತ್ರಿಕ ಪ್ರಮಾದವಾಗುತ್ತಿತ್ತು. ಆ ತಂಡವು ಒಂದಾದ ಮೇಲೊಂದರಂತೆ ಚಾಂಪಿಯನ್‌ಶಿಪ್‌ಗಳನ್ನು ನಿರಂತರವಾಗಿ ಗೆದ್ದಿತು. ಅದು ಸಾಧ್ಯವಾಗಿದ್ದೇ ತಂಡದ ಆಟಗಾರರಿಗೆ ಒಟ್ಟಾಗಿ ಆಡುವುದಕ್ಕೆ ಸಾಧ್ಯವಾಗಿದ್ದಕ್ಕೆ. ಮತ್ತು ಒಬ್ಬರ ಕೌಶಲಕ್ಕೆ ಪೂರಕವಾಗಿ ಮತ್ತೊಬ್ಬರು ಆಡಲು ಸಾಧ್ಯವಾಗಿದ್ದರಿಂದ.

ಇದು ಕೃತಕ ಬುದ್ಧಿಮತ್ತೆ ಮತ್ತು ಮಾನವ ಕೌಶಲಗಳಿಗೂ ಅನ್ವಯಿಸುತ್ತದೆ. ಮನುಷ್ಯರು ಮಾಡಲು ಸಾಧ್ಯವಿಲ್ಲದ್ದನ್ನು ಮಾಡಲು ಎಐ ಅನ್ನು ಬಳಸಿಕೊಳ್ಳಬೇಕು. ಆಗ ಮನುಷ್ಯರಿಗೆ ತಮ್ಮ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡುವುದರಿಂದ ಕೇವಲ ನಕಲು ಮಾಡುವುದಕ್ಕಿಂತ ಉತ್ಪಾದಕತೆ ಹೆಚ್ಚುತ್ತದೆ. ಮುಂದಿನ ದಿನಗಳಲ್ಲಿ ಎಐ ತಂತ್ರಜ್ಞಾನವು ಮಾನವನ ಸಾಮರ್ಥ್ಯಗಳನ್ನು ಕಸಿದುಕೊಳ್ಳುವ ಬದಲು ಅವುಗಳನ್ನು ಹೆಚ್ಚಿಸುವ ವಾತಾವರಣವನ್ನು ನಿರ್ಮಿಸಬೇಕು. ಆಗ ಇಲೆಕ್ಟ್ರೀಷಿಯನ್ನುಗಳು ಸಮಸ್ಯೆಯನ್ನು ಹುಡುಕಲು ಎಐ ನೆರವು ಪಡೆಯಬಹುದು. ಹಾಗೆಯೇ ದಾದಿಯರು [nurse] ರೋಗಲಕ್ಷಣಗಳನ್ನು ವಿಶ್ಲೇಷಿಸಲು ಎಐ ಸಹಾಯ ಕೇಳಬಹುದು ಮತ್ತು ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಅಗತ್ಯಕ್ಕೆ ತಕ್ಕಂತೆ ಬೋಧನೆಯನ್ನು ರೂಪಿಸಲು ಎಐ ಅನ್ನು ಬಳಸಿಕೊಳ್ಳಬಹುದು. ಇದು ಕೆಲಸಗಾರರನ್ನು ಕೆಲಸದಿಂದ ತೆಗೆಯುವುದಕ್ಕಿಂತ ಹೆಚ್ಚು ಲಾಭದಾಯಕ.

ಎಐ ಉದ್ಯಮದ ಒಳಗಿರುವವರು ಮತ್ತು ಆಶಾವಾದಿಗಳು ಇದಕ್ಕೆ ಪ್ರತಿಕ್ರಿಯಿಸುತ್ತಾ, ತಂತ್ರಜ್ಞಾನ ಬೆಳೆದಂತೆಲ್ಲಾ ಸರ್ಕಾರಗಳು ಸಂಪತ್ತನ್ನು ಮರುಹಂಚಿಕೆ ಮಾಡುವ ನೀತಿಯನ್ನು ಜಾರಿಗೆ ತಂದರೆ, ಯಾಂತ್ರೀಕರಣದಿಂದ ಎಲ್ಲರಿಗೂ ಲಾಭವಾಗುತ್ತದೆ ಎನ್ನುತ್ತಾರೆ. ಆದರೆ ಈ ವಾದ ಇತಿಹಾಸದಲ್ಲಿ ಎಂದೂ ನಿಜವಾಗಿಲ್ಲ. ಕಳೆದ ನಲವತ್ತು ವರ್ಷಗಳ ಡಿಜಿಟಲ್ ಯಾಂತ್ರೀಕರಣದಿಂದ ಆಗಿದ್ದೇ ಬೇರೆ. ಸಂಪತ್ತು ಬಹುತೇಕ ಸಮಾಜದ ಮೇಲಸ್ತರದವರ ಕೈಗಳಿಗೆ ಸೇರಿದೆ. ಮಧ್ಯಮ ಕೌಶಲದ ಉದ್ಯೋಗಗಳು ನಾಶವಾಗಿವೆ. ಮತ್ತು ದೇಶದ ಒಟ್ಟಾರೆ ಉತ್ಪಾದಕತೆಯೂ ನಿರೀಕ್ಷಿತ ಮಟ್ಟದಲ್ಲಿ ಬೆಳೆಯಲಿಲ್ಲ. ಹೀಗೆ, ಇಡೀ ಉದ್ಯಮವನ್ನು ಕೆಲವೇ ಕೆಲವು ಕಂಪನಿಗಳು ನಿಯಂತ್ರಿಸುತ್ತಿರುವ ಈ ಸಂದರ್ಭದಲ್ಲಿ, ಇನ್ನೂ ದೊಡ್ಡ ಮಟ್ಟದ ಯಾಂತ್ರೀಕರಣ ನಡೆದರೂ ಫಲಿತಾಂಶ ಇದಕ್ಕಿಂತ ಭಿನ್ನವಾಗಿರುತ್ತದೆ ಎಂದು ನಿರೀಕ್ಷಿಸಲು ಸಾಧ್ಯವೇ ಇಲ್ಲ.

ಈ ತಂತ್ರಜ್ಞಾನದಿಂದ ಅಮೆರಿಕಕ್ಕೆ ಹೋಲಿಸಿದರೆ ಜಾಗತಿಕವಾಗಿ ಆಗುವ ತೊಂದರೆ ಇನ್ನೂ ಹೆಚ್ಚು. ನಮ್ಮಂತಹ ಅಭಿವೃದ್ಧಿಶೀಲ ಜಗತ್ತಿನ ಶತಕೋಟಿ ಜನರಿಗೆ ಬಡತನದಿಂದ ಹೊರಬರಲು ಒಂದು ಒಳ್ಳೆಯ ಕೆಲಸ ಅನಿವಾರ್ಯ. ಅದೊಂದೇ ಅವರಿಗಿರುವ ಭರವಸೆ. ಪರಿಸ್ಥಿತಿ ಹೀಗಿರುವಾಗ ಮನುಷ್ಯರನ್ನು ಬಿಟ್ಟು ಕೇವಲ ಯಂತ್ರಗಳಿಗೇ ಪ್ರಾಮುಖ್ಯತೆ ಕೊಡುವ ಎಐ ನೀತಿಯನ್ನು ತಂದರೆ, ಅದು ಇಡೀ ಸಮಾಜವನ್ನು ವಿನಾಶದ ಕಡೆಗೆ ತಳ್ಳುತ್ತದೆ. ಆ ಕಾರಣಕ್ಕೇ, ಎಐ ತಂತ್ರಜ್ಞಾನದ ಇಡೀ ವಿನ್ಯಾಸವೇ ಬದಲಾಗಬೇಕು ಎಂದು ನಾವು ಒಕ್ಕೊರಲಿನಿಂದ ಒತ್ತಾಯಿಸಲೇಬೇಕು.

ಇಂದಿನ ಎಐ ಉದ್ಯಮ ಈ ಯಾವುದೇ ಸತ್ಯಗಳನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಬಹುಶಃ ಅದೇ ಅದರ ಅತ್ಯಂತ ದೊಡ್ಡ ವೈಫಲ್ಯ. ಕೆಲವು ಬೆರಳೆಣಿಕೆಯ ಜನ ಇಡೀ ಜಗತ್ತಿನ ಮೇಲೆ ಈ ತಂತ್ರಜ್ಞಾನವನ್ನು ಹರಿಬಿಡುತ್ತಿದ್ದಾರೆ. ಮನುಕುಲದ ಮೇಲಿನ ನಿಯಂತ್ರಣವೇ ಅವರ ಸಿದ್ಧಾಂತವಾಗಿದೆ. ಪ್ರತಿಯೊಂದರಲ್ಲೂ ಮನುಷ್ಯನಿಗಿಂತ ಯಂತ್ರಗಳೇ ಶ್ರೇಷ್ಠ ಎಂಬ ನಂಬಿಕೆಯಿಂದ ಅವರು ಸಾಗುತ್ತಿದ್ದಾರೆ.

ನೈತಿಕ ಸ್ಪಷ್ಟತೆಗಾಗಿ ಮತ್ತು ಸಮಾಜದಾದ್ಯಂತ ಗಂಭೀರವಾದ ಚರ್ಚೆಗಾಗಿ ಲಿಯೋ ಕರೆ ನೀಡಿರುವುದು ಸರಿ. ಆದರೆ, ನಮ್ಮ ಮಾತುಕತೆಗಳು ಕೇವಲ ಬೌದ್ಧಿಕ ಉಪದೇಶಗಳಷ್ಟೇ ಆಗಬಾರದು. ಸ್ಪಷ್ಟವಾದ ನಿರ್ಧಾರಗಳು ಸಾಧ್ಯವಾಗಬೇಕು. ಮಾರುಕಟ್ಟೆಯನ್ನು ಆಕ್ರಮಿಸಿಕೊಂಡಿರುವ ದೊಡ್ಡ ಕಂಪನಿಗಳ ವಿರುದ್ಧ ಏಕಸ್ವಾಮ್ಯ ವಿರೋಧಿ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗಬೇಕು. ಮನುಷ್ಯನಿಗೆ ಪೂರಕವಾಗಿ ಕೆಲಸ ಮಾಡುವ ಎಐ ತಂತ್ರಜ್ಞಾನದಲ್ಲಿ ಸರ್ಕಾರ ಹೂಡಿಕೆ ಮಾಡಬೇಕು. ಕಣ್ಗಾವಲು ಮತ್ತು ಸ್ವಯಂಚಾಲಿತ ಆಯುಧಗಳನ್ನು ಬಳಸುವುದರ ಮೇಲೆ ನಿಯಂತ್ರಣವಿರಬೇಕು. ಇಡೀ ವ್ಯವಸ್ಥೆಗೆ ಆಧಾರವಾಗಿರುವ ದತ್ತಾಂಶದ [data] ಮೇಲೆ ಕಾರ್ಮಿಕರಿಗೆ ಮತ್ತು ನಾಗರಿಕರಿಗೆ ಅರ್ಥಪೂರ್ಣ ಹಕ್ಕುಗಳನ್ನು ನೀಡಬೇಕು. ಅದು ಇಂದಿನ ಅಗತ್ಯವಾಗಿದೆ.

ಲಿಯೋ ಅವರ ಮಧ್ಯಪ್ರವೇಶದಿಂದ ಇಂತಹದೊಂದು ಬದಲಾವಣೆ ಸಾಧ್ಯವಾಗಬಹುದೆನ್ನುವ ಒಂದು ಸಣ್ಣ ಭರವಸೆ ಮೂಡಿದೆ. ಆದರೆ, ಉಳಿದಂತೆ ನಾವೆಲ್ಲರೂ ಕೂಡ ಮಾನವಕುಲದ ಪರವಾಗಿ ಧ್ವನಿ ಎತ್ತಲೇಬೇಕಾಗಿದೆ.

**ಲೇಖಕರ ಪರಿಚಯ:**

ಡ್ಯಾರನ್ ಅಸೆಮೊಗ್ಲು 2024ರ ಅರ್ಥಶಾಸ್ತ್ರದ ನೋಬೆಲ್ ಪ್ರಶಸ್ತಿ ಪುರಸ್ಕೃತರು. ಎಂಐಟಿಯಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರು. ಇವರು ಜೇಮ್ಸ್ ಎ. ರಾಬಿನ್ಸನ್ ಅವರೊಂದಿಗೆ ವೈ ನೇಷನ್ಸ್ ಫೇಲ್: ದಿ ಒರಿಜಿನ್ಸ್ ಆಫ್ ಪವರ್, ಪ್ರಾಸ್ಪೆರಿಟಿ ಅಂಡ್ ಪಾವರ್ಟಿ' ಹಾಗೂ ಸೈಮನ್ ಜಾನ್ಸನ್ ಅವರೊಂದಿಗೆ 'ಪವರ್ ಅಂಡ್ ಪ್ರೋಗ್ರೆಸ್: ಅವರ್ ಥೌಸಂಡ್–ಇಯರ್ ಸ್ಟ್ರಗಲ್ ಓವರ್ ಟೆಕ್ನಾಲಜಿ ಅಂಡ್ ಪ್ರಾಸ್ಪೆರಿಟಿ' ಪುಸ್ತಕಗಳನ್ನು ಬರೆದಿದ್ದಾರೆ.

# ಕಟ್ಟೆಯೊಡೆದ ಕಾರ್ಮಿಕರ ಸಹನೆ

## ಟಿ ಎಸ್ ವೇಣುಗೋಪಾಲ್

ಹಿಂದೆ ಹೀಗಿರಲಿಲ್ಲ. ಕಾಲ ಬದಲಾಗಿ ಹೋಯ್ತು ಅಂತಾರಲ್ಲ, ಅದು ಕೊನೇ ಪಕ್ಷ ಕಾರ್ಮಿಕರ ಪ್ರತಿಭಟನೆಯ ವಿಷಯದಲ್ಲಂತೂ ನಿಜ ಅನಿಸುತ್ತೆ. ಹಿಂದೆಯೂ ಪ್ರತಿಭಟನೆಗಳು ನಡೀತಿದ್ವು, ಸ್ವಲ್ಪ ಗಲಾಟೆ–ಗದ್ದಲಾನೂ ಇರ್ತಿತ್ತು ನಿಜ. ಆದ್ರೆ, ಅವಾಗ ಕಾರ್ಮಿಕರ ಸಮಸ್ಯೆಗಳನ್ನ ಕೇಳೋಕೆ ಒಂದು ವ್ಯವಸ್ಥೆ ಅಂತ ಇತ್ತು. ಮಾತುಕತೆ ನಡೆಸೋಕೆ, ನ್ಯಾಯ ಕೇಳೋಕ್ಕೆ ಅಂತಾನೇ ಕೆಲವು ವೇದಿಕೆಗಳಿದ್ವು. ಇದರಿಂದ ಕಾರ್ಮಿಕರಿಗೆ ತಮ್ಮ ನೋವು ಹೇಳ್ಕೊಳ್ಳೋಕೆ ಒಂದು ಅವಕಾಶ ಸಿಗ್ತಿತ್ತು. ಮಾತುಕತೆಯೂ ಆಗ್ತಿತ್ತು. ಬಹುತೇಕ ಸಂದರ್ಭಗಳಲ್ಲಿ ಒಪ್ಪಂದಗಳೂ ಸಾಧ್ಯವಾಗ್ತಿದ್ವು.

ಆದ್ರೆ ಏಪ್ರಿಲ್ 12ರ ನಂತರ ನೋಯ್ಡಾದಲ್ಲಿ ನಡೆದಿದ್ದೇ ಬೇರೆ. ಅಲ್ಲಿನ ಕಾರ್ಮಿಕರು ಬೇಸತ್ತು ಹೋಗಿದ್ರು. ಸೋಷಿಯಲ್ ಮೀಡಿಯಾ ಮೂಲಕ ಮಾತನಾಡಿಕೊಂಡ್ರು. ಒಂದಾಗಿ ಪ್ರತಿಭಟನೆ ಪ್ರಾರಂಭಿಸಿಬಿಟ್ರು. ಪ್ರತಿಭಟನೆ ಒಂದು ಫ್ಯಾಕ್ಟರಿಗೆ ನಿಲ್ಲಲಿಲ್ಲ, ಮೂರೇ ದಿನಗಳಲ್ಲಿ ಹಲವು ಫ್ಯಾಕ್ಟರಿಗಳಿಗೆ ಹರಡಿತು. ದೊಡ್ಡ ಕಂಪೆನಿಗಳ ಕಾರ್ಮಿಕರೂ ಸೇರಿಕೊಂಡರು. ಪ್ರತಿಭಟನೆಗೆ ಕೈಜೋಡಿಸಿ ಬೀದಿಗಿಳಿದ ಕಾರ್ಮಿಕರ ಸಂಖ್ಯೆ 50,000 ಮೀರಿತು ಅಂತ ಪತ್ರಿಕೆಗಳು ವರದಿ ಮಾಡಿದವು. ಅಷ್ಟೇ ಯಾಕೆ, ಮನೆಗೆಲಸ ಮಾಡೋರು ಕೂಡ ಈ ಹೋರಾಟಕ್ಕೆ ಕೈಜೋಡಿಸಿದ್ರು. ಪಾಪ, ಅವರಿಗೂ ಸಂಬಳ ಕಡಿಮೆಯಿತ್ತು. ಜೊತೆಗೆ ಮಾಲೀಕರು ಅವರನ್ನ ಸರಿಯಾಗಿ ನಡೆಸಿಕೊಳ್ತಿರಲಿಲ್ಲ. ಸಾವಿರಾರು ಜನ ಬೀದಿಗೆ ಇಳಿದರು. ಕೆಲವರು ಕಲ್ಲೂ ತೂರಿದ್ರು, ಗಾಡಿಗಳಿಗೆ ಬೆಂಕಿನೂ ಹಚ್ಚಿದ್ರು. ಕೆಲವು ಕಡೆ ಪೊಲೀಸರ ಜೊತೆ ದೊಡ್ಡ ಜಗಳಾನೇ ನಡೀತು. 300ಕ್ಕೂ ಹೆಚ್ಚು ಜನರನ್ನು ಬಂಧಿಸಲಾಯ್ತು.

ಈ ಪ್ರತಿಭಟನೆಗಳನ್ನು ನೋಡಿದರೆ, ಕಾರ್ಮಿಕರು ಎಷ್ಟು ರೋಸಿಹೋಗಿದ್ದಾರೆ ಅನ್ನೋದು ಎದ್ದು ಕಾಣುತ್ತದೆ. ಇವೆಲ್ಲಾ ನಿನ್ನೆ ಮೊನ್ನೆ ಪ್ರಾರಂಭವಾದ ಸಮಸ್ಯೆಗಳಲ್ಲ. ಎಷ್ಟೋ ವರ್ಷಗಳಿಂದ ನಡೆದುಕೊಂಡೇ ಬಂದಿದೆ. ಕಾರ್ಮಿಕರು ತಮ್ಮ ಅಸಮಾಧಾನವನ್ನು ತೋಡಿಕೊಳ್ತಾನೇ ಬಂದಿದ್ದಾರೆ. ಚರ್ಚೆಗಳು ನಡೆದಿವೆ. ಪರಿಸ್ಥಿತಿ ಸುಧಾರಿಸೋ ಬದಲು ವರ್ಷದಿಂದ ವರ್ಷಕ್ಕೆ ಹದಗೆಡುತ್ತಿದೆ. ಸರ್ಕಾರವಾಗಲಿ ಅಥವಾ ಮಾಧ್ಯಮಗಳಾಗಲಿ ಪರಿಸ್ಥಿತಿಯನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ. ನಿರ್ಲಕ್ಷಿಸುತ್ತಲೇ ಬಂದವು. ಸಹಜವಾಗಿಯೇ ಪ್ರತಿಭಟನೆಗಳು ತೀವ್ರವಾಗಿ, ಕೊನೆಗೆ ಹಿಂಸೆಗೂ ತಿರುಗಿತು.

ಕಾರ್ಮಿಕರಿಗೆ ಬೇರೆ ಏನು ದಾರಿ ಇದೆ? ಇರೋ ಕೆಲಸದಲ್ಲಿ ಹೊಟ್ಟೆ ತುಂಬ್ತಿಲ್ಲ. ಹೋಗೋದಕ್ಕೆ ಬೇರೆ ಯಾವ ದಾರಿಯೂ ಇಲ್ಲ. ಬೀದಿಗಿಳಿಲೇಬೇಕು. ಘನತೆಯ ಬದುಕಿಗೆ ದನಿ ಎತ್ತಲೇ ಬೇಕು. ಎಲ್ಲಾ ಕಡೆಯೂ ಇದೇ ಗತಿ. ಅದಕ್ಕೆ ಬಿಹಾರದ ಬರೌನಿ, ಗುಜರಾತಿನ ಸೂರತ್, ಹರಿಯಾಣ – ಹೀಗೆ ಹಲವು ರಾಜ್ಯಗಳಲ್ಲಿ ಕಾರ್ಮಿಕರು ಪ್ರತಿಭಟನೆ ದಾರಿ ಹಿಡಿದರು. ಖಾಸಗಿ ಕಂಪನಿಗಳಿರಲಿ ಅಥವಾ ಸರ್ಕಾರಿ ಫ್ಯಾಕ್ಟರಿಗಳಿರಲಿ, ಎಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ರಾಜ್ಯಗಳ ಕಾನೂನುಗಳು ಬೇರೆ ಬೇರೆಯಾಗಿದ್ದರೂ, ಅಲ್ಲಿರೋ ಕಾರ್ಮಿಕರ ಸಮಸ್ಯೆಗಳು ಮಾತ್ರ ಒಂದೇ ತರಹ ಇವೆ. ಎಲ್ಲಾ ಕಡೆಯೂ ಗುತ್ತಿಗೆ ಕೆಲಸದ ಅವಾಂತರವೇ ಕಾರ್ಮಿಕರನ್ನು ಕಾಡ್ತಿರೋದು.

ಇವತ್ತಿನ ದಿನಗಳಲ್ಲಿ ಕಂಪನಿಗಳು ಕಾರ್ಮಿಕರನ್ನು ನೇರವಾಗಿ ಕೆಲಸಕ್ಕೆ ತಗೊಳ್ತಾ ಇಲ್ಲ. ಏಜೆಂಟರು ಅಥವಾ ಮಧ್ಯವರ್ತಿಗಳ ಮೂಲಕ ನೇಮಕ ಮಾಡಿಕೊಳ್ತಾ ಇವೆ. ಅಷ್ಟೇ ಅಲ್ಲ, ಕಂಪೆನಿಗಳು ಬರುಬರುತ್ತಾ ಗುತ್ತಿಗೆ ಕಾರ್ಮಿಕರನ್ನೇ ಹೆಚ್ಚೆಚ್ಚು ನಂಬಿಕೊಳ್ತಿದಾವೆ. ಸಂಘಟಿತ ವಲಯದಲ್ಲೂ ಅವರ ಸಂಖ್ಯೆ ವಿಪರೀತ ಹೆಚ್ಚಿದೆ. ವಾರ್ಷಿಕ ಕೈಗಾರಿಕಾ ಸಮೀಕ್ಷೆಗಳನ್ನು ನೋಡಿದರೆ ನಿಮಗೆ ಇದರ ಅಂದಾಜು ಸಿಗುತ್ತೆ. ಈ ಶತಮಾನದ ಆರಂಭದಲ್ಲಿ ಒಟ್ಟು ಕಾರ್ಮಿಕರಲ್ಲಿ ಗುತ್ತಿಗೆ ಕಾರ್ಮಿಕರ ಪಾಲು ಶೇಕಡಾ 20ಕ್ಕಿಂತ ಕಡಿಮೆ ಇತ್ತು. ಆದರೆ ಈಗ ಅವರ ಸಂಖ್ಯೆ ದುಪ್ಪಟಗೊಂಡು ಶೇಕಡ 42ರಷ್ಟಾಗಿದೆ.

ಗುತ್ತಿಗೆ ಕಾರ್ಮಿಕರ ವ್ಯವಸ್ಥೆಯಲ್ಲಿ, ಕಾರ್ಮಿಕರ ಹಿತ ಕಾಯೋ ಕಾನೂನುಗಳು ಸಹಜವಾಗಿಯೇ ಅರ್ಥ ಕಳೆದುಕೊಳ್ಳುತ್ತವೆ. ಯಾವುದೂ ಜಾರಿಯಾಗೋಲ್ಲ. ಕೆಲಸದ ಗ್ಯಾರಂಟಿ ಇರೋಲ್ಲ, ಕೈಗೆ ಸಿಗೋ ಸಂಬಳಾನೂ ಕಡಿಮೆ ಅಷ್ಟೇ ಅಲ್ಲ, ಕೆಲಸ ಮಾಡೋ ಸ್ಥಳದಲ್ಲಿ ಒಂದು ಶೌಚಾಲಯವೂ ಸರಿಯಾಗಿರೋಲ್ಲ. ಕೆಲಸದ ಅವಧೀನೂ ವಿಪರೀತ. ಅದಕ್ಕೆ ನೋಯ್ಡಾದ ಬಟ್ಟೆ ಕಾರ್ಖಾನೆಗಳಲ್ಲಿ ಕೆಲಸ ಮಾಡೋ ಹೆಣ್ಣು ಮಕ್ಕಳು, "ನಮಗೆ ದಿನಕ್ಕೆ 12 ಗಂಟೆ ಕೆಲಸ ಮಾಡೋಕೆ ಆಗಲ್ಲ, ಟೈಮ್ ಕಮ್ಮಿ ಮಾಡಿ ಮತ್ತು ಸರಿಯಾದ ಟಾಯ್ಲೆಟ್ ವ್ಯವಸ್ಥೆ ಮಾಡಿಕೊಡಿ" ಅಂತ ಕೇಳ್ತಿದ್ದಾರೆ. ಜೊತೆಗೆ ಈ ಕಾಂಟ್ರಾಕ್ಟ್ ಕೆಲಸದ ವ್ಯವಸ್ಥೆಯಲ್ಲಿ ಸಾಮಾಜಿಕ ಭದ್ರತೆ ಅನ್ನೋದು ದೂರದ ಮಾತು, ಕನಿಷ್ಠ ಸಿಗಬೇಕಾದ ರಜೆ, ಪಿಎಫ್, ವಿಮೆ ಇತ್ಯಾದಿ ಕನಿಷ್ಠ ಸೌಲಭ್ಯಗಳು ಕೂಡ ಸಿಗ್ತಿಲ್ಲ.

ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಅಥವಾ ಔಪಚಾರಿಕ ಕೈಗಾರಿಕೆಗಳಲ್ಲೂ ಕಾರ್ಮಿಕರ ಕಥೆ ಇದೇನೆ. 2025ರ ಲೆಕ್ಕಾಚಾರದ ಪ್ರಕಾರ, ಸುಮಾರು 67.8% ಕಾರ್ಮಿಕರ ಹತ್ತಿರ ಯಾವುದೇ ಲಿಖಿತ ಒಪ್ಪಂದ ಇರಲಿಲ್ಲ. ಅಂದ್ರೆ ಕೆಲಸಕ್ಕೆ ಸೇರಿಕೊಂಡಿದ್ದಕ್ಕೆ ಅವರ ಬಳಿ ಯಾವುದೇ ಅಧಿಕೃತ ದಾಖಲೆಗಳಿಲ್ಲ. ಸುಮಾರು 62.4% ಕಾರ್ಮಿಕರಿಗೆ ಸಂಬಳಸಹಿತ ರಜೆ ಇಲ್ಲ. ಅಂದರೆ ರಜೆ ತಗೊಂಡ್ರೆ ಸಂಬಳ ಕಟ್ ಆಗುತ್ತೆ. 59.2% ಜನರಿಗೆ ಪಿಎಫ್ ಅಥವಾ ಇನ್ಶೂರೆನ್ಸ್ ಇತ್ಯಾದಿ ಯಾವುದೇ ಸಾಮಾಜಿಕ ಭದ್ರತೆಗಳಿಲ್ಲ. ಜೊತೆಗೆ ದಿನಕ್ಕೆ ಹನ್ನೆರಡು ಗಂಟೆಗೂ ಹೆಚ್ಚು ಕಾಲ ಏನೂ ಅನುಕೂಲ ಇಲ್ಲದ ವಾತಾವರಣದಲ್ಲಿ ಕೆಲಸ ಮಾಡಬೇಕು. ಇಷ್ಟು ಸಾಲದು ಎಂಬಂತೆ ಯಾವ ಕ್ಷಣದಲ್ಲಿ ಬೇಕಾದರೂ ಕೆಲಸ ಹೋಗಬಹುದು ಅನ್ನೋ ಆತಂಕ ಬೇರೆ. ಖಾಯಂ ಸಂಬಳ ಅಂತ ಸಿಗುತ್ತಿರೋದು ಕೇವಲ ಶೇಕಡ 25ರಷ್ಟು ಕಾರ್ಮಿಕರಿಗೆ ಮಾತ್ರ. ಅಂದರೆ ದೊಡ್ಡ ದೊಡ್ಡ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿರುವ ಬಹುತೇಕ ಕಾರ್ಮಿಕರ ಪರಿಸ್ಥಿತಿ ದಿನಗೂಲಿ ನೌಕರರಿಗಿಂತ ಏನೂ ಭಿನ್ನವಾಗಿಲ್ಲ.

ಕೈಗಾರಿಕಾ ಕಾರ್ಮಿಕರ ಕನಿಷ್ಠ ವೇತನವನ್ನು ಆಯಾ ರಾಜ್ಯ ಸರ್ಕಾರಗಳು ನಿರ್ಧರಿಸುತ್ತವೆ. ನಿಯಮದ ಪ್ರಕಾರ ಮೂಲ ವೇತನ ಅಂತ ಒಂದು ಮೊತ್ತವನ್ನು ನಿರ್ಧರಿಸಿ ಅದಕ್ಕೆ ಹಣದುಬ್ಬರಕ್ಕೆ ತಕ್ಕಂತೆ ಹೆಚ್ಚುವರಿ ಮೊತ್ತವನ್ನು ಸೇರಿಸಿ ಕನಿಷ್ಠ ವೇತನವನ್ನು ನಿಗದಿಪಡಿಸಲಾಗುತ್ತೆ. ಮೂಲ ವೇತನವನ್ನು ಕನಿಷ್ಠ ಐದು ವರ್ಷಕ್ಕೊಮ್ಮೆಯಾದರೂ ಪರಿಷ್ಕರಿಸಬೇಕೆಂಬ ನಿರೀಕ್ಷೆಯಿದೆ. ಆದರೆ ಬಹಳಷ್ಟು ರಾಜ್ಯಗಳಲ್ಲಿ ಕನಿಷ್ಠ ವೇತನವನ್ನು ಪರಿಷ್ಕರಿಸಿ ದಶಕವೇ ಕಳೆದಿದೆ. 2025ರ ಸರ್ವೆ ಪ್ರಕಾರ, ಅರ್ಧದಷ್ಟು ಕಾರ್ಮಿಕರಿಗೆ ಸಿಗೋದು ತಿಂಗಳಿಗೆ ಕೇವಲ 15,000 ರೂಪಾಯಿ ಸಂಬಳ. ಅದ್ರಲ್ಲೂ ಕಾಂಟ್ರಾಕ್ಟರ್‌ಗಳು ತಮ್ಮ ಕಮಿಷನ್ ಅಂತ ಸ್ವಲ್ಪ ಇಟ್ಕೊಂಡ್ರೆ, ಕಾರ್ಮಿಕರ ಕೈಗೆ ಬರೋದು ಇನ್ನೂ ಕಡಿಮೆ. ಜೊತೆಗೆ ನಗರಗಳಲ್ಲಿ ಒಂದು ಪುಟ್ಟ ರೂಮಿಗೆ 5,000 ರೂಪಾಯಿ ಬಾಡಿಗೆ ಕಟ್ಟಬೇಕು. ಇನ್ನು ಕರೆಂಟ್, ನೀರು ಅಂತೆಲ್ಲಾ ಖರ್ಚು ಮಾಡಿದ್ರೆ, ಕೈಯಲ್ಲಿ ಬಿಡಿಗಾಸೂ ಉಳಿಯೋಲ್ಲ. ದೇಶದಲ್ಲಿ ಎಲ್ಲಾ ಕಡೆಯೂ ಕಾರ್ಮಿಕರ ಸ್ಥಿತಿ ಹೀಗೇ ಇದೆ. ಹಾಗಾಗಿ ಎಲ್ಲಿ ಹೋದರೂ ಕಾರ್ಮಿಕರ ಬೇಡಿಕೆಗಳು ಒಂದೆ.

ಕನಿಷ್ಠ ವೇತನವನ್ನ ಹೆಚ್ಚಿಸಬೇಕು. ಕೆಲಸದ ಅವಧಿಯನ್ನು ನಿಗದಿಗೊಳಿಸ್ಬೇಕು. ಜಾಸ್ತಿ ಕೆಲಸ ಮಾಡ್ಸಿಕೊಂಡ್ರೆ ಅದಕ್ಕೆ ಸರಿಯಾದ 'ಓವರ್ ಟೈಮ್' ಹಣ ಕೊಡಬೇಕು. ಮೂಲಭೂತ ಸೌಲಭ್ಯಗಳು ಮತ್ತು ಸಾಮಾಜಿಕ ಭದ್ರತೆ ಸಿಗಬೇಕು. ಜೊತೆಗೆ ಸರ್ಕಾರವೇ ಇದನ್ನೆಲ್ಲಾ ಕಾರ್ಮಿಕರಿಗೆ ಕೊಡಬೇಕು, ಕೊಡ್ತೀವಿ ಅಂತ ಮೊದಲೇ ಒಪ್ಪಿಕೊಂಡಿತ್ತು. ನವೆಂಬರ್ 21, 2025ರಂದು, ಕೇಂದ್ರ ಸರ್ಕಾರ 29 ಕೇಂದ್ರ ಕಾನೂನುಗಳನ್ನು ಒಂದುಗೂಡಿಸಿ ನಾಲ್ಕು ಸಮಗ್ರ 'ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿತ್ತು. ಎಲ್ಲಾ ಕಾರ್ಮಿಕರಿಗೆ ಶಾಸನಬದ್ಧ ಕನಿಷ್ಠ ವೇತನದ ಖಾತರಿ ನೀಡಿತ್ತು. ಕೆಲಸದ ಅವಧಿಯನ್ನು ದಿನಕ್ಕೆ 8 ರಿಂದ 12 ಗಂಟೆಗಳಿಗೆ ಹಾಗೂ ವಾರಕ್ಕೆ ಗರಿಷ್ಠ 48 ಗಂಟೆಗಳಿಗೆ ಮಿತಿಗೊಳಿಸಿತ್ತು. ನಿಗದಿತ ಸಮಯಕ್ಕಿಂತ ಹೆಚ್ಚು ಕೆಲಸ ಮಾಡಿದರೆ ಎರಡರಷ್ಟು ವೇತನ ನೀಡುವುದು ಕಡ್ಡಾಯ ಅಂತ ಘೋಷಿಸಿತ್ತು. ಹಾಗಾಗಿ ಕಾರ್ಮಿಕರು ಇದನ್ನು ಕೇಳಬೇಕಾಗಿರಲಿಲ್ಲ. ಇದಕ್ಕಾಗಿ ಹೋರಾಟವೂ ಬೇಕಾಗಿರಲಿಲ್ಲ. ಆದರೆ ಸರ್ಕಾರ ಕೊಡ್ತೀವಿ ಅಂತ ಘೋಷಿಸಿದ್ದ ನೀತಿಯನ್ನು ಜಾರಿಗೊಳಿಸಿ ಅಂತ ಕಾರ್ಮಿಕರು ನೆನಪಿಸಬೇಕಾದ ಪರಿಸ್ಥಿತಿ. ನೆನಪಿಸಿದರೂ ನೆನಪಾಗುತ್ತಿಲ್ಲ. ಹಾಗಾಗಿ ತಮಗೆ ನ್ಯಾಯವಾಗಿ ಸಿಗಬೇಕಾದ್ದನ್ನ ಪಡೆಯೋದಕ್ಕೂ ಬೀದಿಗಿಳಿದು ಹೋರಾಟ

ಮಾಡಬೇಕಾಗಿದೆ. ಇಲ್ಲದ ಮೊಕದ್ದಮೆಗಳನ್ನು ಹಾಕಿಸ್ಕೊಂಡು ಜೈಲಿಗೆ ಹೋಗ್ಬೇಕಾದ ಪರಿಸ್ಥಿತಿ ಪಾಪ ಕಾರ್ಮಿಕರದ್ದು.


ಹರಿಯಾಣ ಮತ್ತು ಉತ್ತರಪ್ರದೇಶದಲ್ಲಿ ಕಾರ್ಮಿಕರು ಬೀದಿಗೆ ಇಳಿದು ಪ್ರತಿಭಟನೆ ಮಾಡ್ದಾಗ ಸರ್ಕಾರಕ್ಕೂ ಕಷ್ಟ ಆಯ್ತು. ಈಗ ಸುಮ್ಮನಿದ್ರೆ ರಾಜಕೀಯವಾಗಿ ತೊಂದರೆಯಾಗಬಹುದು ಅಂತ ಅನ್ನಿಸಿರಬೇಕು. ಹರಿಯಾಣದಲ್ಲಿ ಕನಿಷ್ಠ ವೇತನ 11,274 ರಿಂದ 15,221ರೂಪಾಯಿಗೆ ಅಂದರೆ ಶೇಕಡ 35ರಷ್ಟು ಏರಿಸಿತು. ಅದನ್ನು ನೋಡಿದ ಪಕ್ಕದ ನೋಯ್ಡಾದ ಕೆಲಸಗಾರರು ಬೀದಿಗಿಳಿದರು. ನಮಗೂ ಸಂಬಳ ಜಾಸ್ತಿ ಮಾಡಿ ಅಂತ ಪ್ರತಿಭಟಿಸಿದ್ರು. ನೋಯ್ಡಾದಲ್ಲೂ ಸ್ವಲ್ಪ ಸಂಬಳ ಜಾಸ್ತಿ ಆಗಿದೆ. 11,313 ಇದ್ದುದು 13,690 ರೂಪಾಯಿ ಆಗಿದೆ. ಅಂದರೆ ಶೇಕಡ 21ರಷ್ಟು ಹೆಚ್ಚಾಗಿದೆ.

ನಾವು ವೇತನವನ್ನು ಒಟ್ಟಾರೆ ಆರ್ಥಿಕತೆಯಿಂದ ಪ್ರತ್ಯೇಕಿಸಿ ನೋಡುವುದಕ್ಕೆ ಸಾಧ್ಯವಿಲ್ಲ. ಬೆಲೆ ಏರಿಕೆ ಇತ್ಯಾದಿ ಸೂಚಿಗಳನ್ನು ಹೋಲಿಸಿ ನೋಡಬೇಕು. ವೇತನದಲ್ಲಿ ಒಂದಿಷ್ಟು ಹೆಚ್ಚಾದರೆ ಏನೂ ಪ್ರಯೋಜನವಿಲ್ಲ. ಬೆಲೆ ಏರಿಕೆ ಆ ಹೆಚ್ಚುವರಿಯನ್ನು ತಿಂದುಹಾಕಿಬಿಡುತ್ತೆ. ಅವರ ಬದುಕು ಸುಧಾರಿಸೋಲ್ಲ. ಹೆಚ್ಚೆಂದರೆ ಇರೊ ಸ್ಥಿತಿಯನ್ನು ಕಾಪಾಡಿಕೊಂಡು ಹೋಗ್ಬಹುದು. ಕಾರ್ಮಿಕರ ಬದುಕು ಸ್ವಲ್ಪವಾದರೂ ಸುಧಾರಿಸಬೇಕಾದರೆ ವೇತನದ ಹೆಚ್ಚಳವೂ ಹಣದುಬ್ಬರದ ದರಕ್ಕಿಂತ ಹೆಚ್ಚಿರಬೇಕು. ಆಗ ಅವರಿಗೆ ದಿನನಿತ್ಯದ ಬದುಕು ಮುಗಿಸಿಕೊಂಡು ಒಂದಿಷ್ಟನ್ನು ಉಳಿಸಬಹುದು. ಆದರೆ ಕಾರ್ಮಿಕರ ಪರಿಸ್ಥಿತಿ ಭಾರತದಲ್ಲಿ ಸದ್ಯಕ್ಕೆ ದುಡ್ಡು ಉಳಿಸುವ ಸ್ಥಿತಿಯಲ್ಲಿಲ್ಲ. ದೇಶದಲ್ಲಿನ ಕೌಟುಂಬಿಕ ಉಳಿತಾಯದ ಸ್ಥಿತಿಯನ್ನು ನೋಡಿದರೆ ಕಾರ್ಮಿಕರ ಸ್ಥಿತಿ ತಿಳಿಯುತ್ತದೆ. ಅವರ ಉಳಿತಾಯದ ಪ್ರಮಾಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಒಟ್ಟಾರೆ ಜಿಡಿಪಿಯಲ್ಲಿ ಕುಟುಂಬಗಳ ಉಳಿತಾಯದ ಪಾಲು 2015ರಲ್ಲಿ ಶೇಕಡ 7.1%ರಷ್ಟಿತ್ತು. ಅದು ಕ್ರಮೇಣ ಕಡಿಮೆಯಾಗುತ್ತಿದೆ. ಈಗ ಅದು ಸುಮಾರು ಶೇಕಡ 5ರಷ್ಟಾಗಿದೆ. ಅಂದರೆ ಅವರಿಗೆ ದಿನನಿತ್ಯದ ಖರ್ಚು ಹೆಚ್ಚಾ ಇದೆ. ಬರೋ ಆದಾಯ ಅದಕ್ಕೆ ಸಾಲ್ತಿಲ್ಲ. ಅದಕ್ಕಾಗಿ ಹೆಚ್ಚೆಚ್ಚು ಸಾಲ ಮಾಡಿಕೊಳ್ತಿದ್ದಾರೆ. ಹಾಗಾಗಿಯೇ 2015ರಲ್ಲಿ ಅವರ ಸಾಲದ ಪ್ರಮಾಣ ಜಿಡಿಪಿಯ 3%ರಷ್ಟು ಇದ್ದದು 2024ರಲ್ಲಿ 6.2%ಕ್ಕೆ ತೀವ್ರವಾಗಿ ಏರಿದೆ. ಶೇಕಡ ಲೆಕ್ಕಾಚಾರ ಬಿಟ್ಟು ಒಟ್ಟಾರೆ ಸಾಲದ ಪ್ರಮಾಣವನ್ನ ನೋಡಿದರೆ ಅದು ಐದು ಪಟ್ಟು ಹೆಚ್ಚಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಕಾರ್ಪೋರೇಟ್ ಕಂಪನಿಗಳ ತೆರಿಗೆಪೂರ್ವ ಲಾಭ 2025ರಲ್ಲಿ ಜಿಡಿಪಿಯ ಶೇಕಡ 15.5% ಮುಟ್ಟಿ ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ. ಅಂದ್ರೆ ಒಂದು ಕಡೆ ಕಾರ್ಮಿಕರ ಮತ್ತು ಸಾಮಾನ್ಯ ಜನರ ಆರ್ಥಿಕ ಪರಿಸ್ಥಿತಿ ನೆಲಕಚ್ಚುತ್ತಿದ್ದರೆ, ಕಾರ್ಪೋರೇಟ್ ಜಗತ್ತಿನ ಲಾಭ ಗಗನಕ್ಕೆ ಏರ್ತಾ ಇದೆ.

ಜನ ಹೆಚ್ಚೆಚ್ಚು ಸಂಕಷ್ಟಕ್ಕೆ ಒಳಗಾಗ್ತಾ ಇದ್ರೂ ನಾವು ದೇಶದ ಜಿಡಿಪಿ ಹೆಚ್ತಾ ಇದೆ, ಭಾರತದ ಆರ್ಥಿಕತೆ ತೀರಾ ವೇಗವಾಗಿ ಬೆಳೀತಾ ಇದೆ ಅಂತ ಹಿಗ್ತಾ ಇದೀವಿ. ಜಿಡಿಪಿ ನಿಜವಾಗಿ ಬೆಳೀತಿದೆ ಅಂತ ಒಪ್ಪಿಕೊಂಡರೂ ಕಾರ್ಮಿಕರ ಆದಾಯ ಆ ವೇಗದಲ್ಲಿ ಬೆಳೀತಿಲ್ಲ. ಅನ್ನೋದು ಸತ್ಯ. ಆರ್ಥಿಕತೆಯ ಬೆಳವಣಿಗೆಯಾಗ್ತಿದೆ. ಅದರ ಜೊತೆಗೆ ಕಾರ್ಮಿಕರ ಉತ್ಪಾದನಾ ಸಾಮರ್ಥ್ಯ ಹೆಚ್ತಾ ಇದೆ ಅನ್ನೋದು ಸತ್ಯ. ಆದರೆ ಅದಕ್ಕೆ ತಕ್ಕಂತೆ ಕಾರ್ಮಿಕರ ಆದಾಯ ಹೆಚ್ಚುತ್ತಿಲ್ಲ ಅನ್ನೋದು ವಾಸ್ತವ. 2011ರಿಂದ 2024ರ ನಡುವೆ ಕಾರ್ಮಿಕರ ಸರಾಸರಿ ಉತ್ಪಾದನಾ ಸಾಮರ್ಥ್ಯ ಪ್ರತಿವರ್ಷ 1.49%ರಷ್ಟು ಬೆಳೆಯುತ್ತಿದೆ ಎಂದು ಅಂದಾಜಿಸಲಾಗಿದೆ. ಆದರೆ, ಅವರ ನೈಜ ಸಂಬಳ ಬೆಳೆದಿರೋದು ವರ್ಷಕ್ಕೆ ಕೇವಲ 0.87% ಮಾತ್ರ. ಇನ್ನು ಹಣದುಬ್ಬರ ಬೆಳೀತಾ ಇರೋ ವೇಗವನ್ನು ಲೆಕ್ಕಕ್ಕೆ ತೊಗೊಂಡ್ರೆ, ಅವರ ನೈಜ ವೇತನ ಕಡಿಮೆಯಾಗ್ತಿದೆ ಅಂತ ಹೇಳಬಹುದು.

ಈ ಬಗ್ಗೆ ಅನುಮಾನವೇ ಇಲ್ಲ. ಲೇಬರ್ ಡೇಟಾ ಸ್ಪಷ್ಟವಾಗಿ ಇದನ್ನ ಹೇಳುತ್ತೆ. ಅಷ್ಟೇ ಅಲ್ಲ, ಸರ್ಕಾರದ ಅಧಿಕೃತ ಆರ್ಥಿಕ ಸಮೀಕ್ಷೆಯೂ ಇದನ್ನು ಒಪ್ಪಿಕೊಂಡಿದೆ. 2011–12ರಿಂದ 2022–23 ಅವಧಿಯಲ್ಲಿ ನೋಡಿದರೆ ನೈಜ ವೇತನದ ಸರಾಸರಿಯೂ ಪ್ರತಿವರ್ಷ ಶೇಕಡ 1.2ರಷ್ಟು ಕಡಿಮೆಯಾಗುತ್ತಾ ಬರುತ್ತಿದೆ. ಕಳೆದ ಎರಡು ವರ್ಷಗಳಲ್ಲಿ 1% ಜಾಸ್ತಿ ಆಗಿದೆ. ಆದರೂ 2011–12ರ ವೇತನದ ಮೌಲ್ಯಕ್ಕೆ ಹೋಲಿಸಿದರೆ ಕಡಿಮೆಯೇ.

ಯಾವುದೇ ರೀತಿಯಲ್ಲಿ ನೋಡಿದರೂ ಕಾರ್ಮಿಕರ ಸ್ಥಿತಿ ಕುಸಿಯುತ್ತಿರೋದು ಸ್ಪಷ್ಟ. ಜೊತೆಗೆ ಇಷ್ಟು ವರ್ಷ ಹೋರಾಡಿ ಪಡೆದುಕೊಂಡಿದ್ದ ಹಕ್ಕುಗಳು ಒಂದೊಂದಾಗಿ ಕೈತಪ್ಪಿಹೋಗ್ತಿವೆ. ಸರ್ಕಾರ ಕಸಿದುಕೊಳ್ತಿದೆ.




ಬೆಳವಣಿಗೆಯಿಂದ ಜನರ ಬದುಕನ್ನು ದೂರವಿಟ್ಟು ಜಿಡಿಪಿಯನ್ನು ಹೆಚ್ಚಿಸುತ್ತೇವೆ ಅನ್ನುವುದಕ್ಕೆ ಯಾವುದೇ ನೈತಿಕ ಸಮರ್ಥನೆಯೂ ಇಲ್ಲ. ಸ್ವಲ್ಪವೂ ಅನುಕೂಲಕರವಲ್ಲದ ಪರಿಸ್ಥಿತಿಯಲ್ಲಿ, ತುಂಬಾ ಕಮ್ಮಿ ಸಂಬಳ ಕೊಟ್ಟು ದುಡಿಸಿಕೊಳ್ಳೋದು ಕೂಡ ಅಷ್ಟೇ ಅನೈತಿಕ. ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದಲೂ ಇದು ಒಳ್ಳೆಯದಲ್ಲ. ವೇತನ ಕಡಿಮೆಯಾದರೆ ಅವರ ಕೊಳ್ಳುವ ಶಕ್ತಿ ಕಡಿಮೆಯಾಗುತ್ತೆ. ಅವರು ಸರಕುಗಳನ್ನು ಕೊಳ್ಳುವುದು ಕಡಿಮೆಯಾಗುತ್ತೆ. ಅಂದರೆ ಬೇಡಿಕೆ ಕುಸಿಯುತ್ತೆ. ಇಂಡಿಯಾದಲ್ಲಿ ಇತ್ತೀಚೆಗೆ ಮಾರ್ಕೆಟ್ ಡಲ್ ಆಗಿರೋಕ್ಕೆ ಕಾರ್ಮಿಕರ ಆದಾಯ ವರ್ಷಗಳಿಂದ ಹೆಚ್ಚಾಗದೇ ಇರೋದೇ ಮುಖ್ಯ ಕಾರಣ. ದೇಶದ ಆರ್ಥಿಕತೆ ನಿಜವಾಗಿಯೂ ಬೆಳೆಯಬೇಕಾದ್ರೆ ಕಾರ್ಮಿಕರ ಬದುಕನ್ನು ಸುಧಾರಿಸೋದು ಅವರ ಹಕ್ಕುಗಳನ್ನು ರಕ್ಷಿಸುವುದು ಕೂಡ ನಮ್ಮ ಯೋಜನೆಯ ಭಾಗವಾಗಬೇಕು.

ಕೆಲವರು ಸಮಸ್ಯೆಯ ಮೂಲವನ್ನು ಬೆಳವಣಿಗೆಯ ಮಾದರಿಯಲ್ಲಿ ಗುರುತಿಸ್ತಾರೆ. ಸಾಮಾನ್ಯವಾಗಿ ಒಂದು ದೇಶದ ಆರ್ಥಿಕತೆ ಬೆಳೆಯುವ ಪ್ರಕ್ರಿಯೆಯಲ್ಲಿ ಮೊದಲು ಕೃಷಿ ಅಭಿವೃದ್ಧಿ ಹೊಂದುತ್ತದೆ, ನಂತರ ಉತ್ಪಾದನಾ ವಲಯ, ಆಮೇಲೆ ಸೇವಾ ವಲಯ ಅಭಿವೃದ್ಧಿ ಹೊಂದುತ್ತದೆ ಎನ್ನಲಾಗಿದೆ. ಉತ್ಪಾದನಾ ವಲಯಕ್ಕೆ ಹೆಚ್ಚು ಜನಕ್ಕೆ ಉದ್ಯೋಗ ಕೊಡೋದಕ್ಕೆ ಸಾಧ್ಯ ಆಗುತ್ತದೆ. ಆದರೆ ಭಾರತದಲ್ಲಿ ಉತ್ಪಾದನಾ ವಲಯ ಅಷ್ಟಾಗಿ ಬೆಳವಣಿಗೆ ಕಾಣ್ತಿಲ್ಲ ಅನ್ನೋ ಆತಂಕವನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ. 2012–13ರವರೆಗೆ ಜಿಡಿಪಿ ಬೆಳೆಯುತ್ತಿದ್ದಂತೆ ಅದರ ಜೊತೆಗೆ ಉತ್ಪಾದನಾ ವಲಯ ಬೆಳೀತಿತ್ತು. ನಂತರ ಕುಸಿಯಲು ಶುರುವಾಯ್ತು. ಈಗ ಜಾಗತಿಕ ಉತ್ಪಾದನೆಯಲ್ಲಿ ಭಾರತದ ಪಾಲು ಶೇಕಡ ಮೂರಕ್ಕಿಂತ ಕಡಿಮೆಯಿದೆ. ಸಾಮಾನ್ಯವಾಗಿ ಸರಕುಗಳ ರಫ್ತು ಹೆಚ್ಚಾದ ಹಾಗೆ ಉತ್ಪಾದನಾ ವಲಯವೂ ಬೆಳೆಯುತ್ತೆ. ಆದರೆ ಕಳೆದ 15 ವರ್ಷಗಳಲ್ಲಿ ರಫ್ತು ಅಷ್ಟಾಗಿ ಬೆಳೆದಿಲ್ಲ. ಚೀನಾ ಮತ್ತು ವಿಯೆಟ್ನಾಂನಂತಹ ದೇಶಗಳಿಗೆ ಹೋಲಿಸಿದರೆ, ನಮ್ಮ ದೇಶದಲ್ಲಿ ಜಿಡಿಪಿಗೆ ಉತ್ಪಾದನಾ ವಲಯದ ಕೊಡುಗೆ ಕಡಿಮೆಯೆಂದೇ ಹೇಳಬೇಕು. ನಮ್ಮಲ್ಲಿ ಉತ್ಪಾದನಾ ವಲಯಕ್ಕೆ ಹೆಚ್ಚು ಉದ್ಯೋಗ ಒದಗಿಸೋದಕ್ಕೆ ಸಾಧ್ಯವಾಗುತ್ತಿಲ್ಲ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವಿಶ್ಲೇಷಣೆಯ ಪ್ರಕಾರ, ಭಾರತದ ಉದ್ಯೋಗ ಮಾರುಕಟ್ಟೆಯಲ್ಲಿ ಉತ್ಪಾದನಾ ವಲಯದ ಪಾಲು ತೀರಾ ಕಡಿಮೆಯಿದೆ.

ನಾಲ್ಕು ದಶಕಗಳಿಂದ ಉತ್ಪಾದನಾ ವಲಯದಲ್ಲಿ ಕೆಲಸ ಮಾಡುತ್ತಿರೋ ಯುವಕರ ಸಂಖ್ಯೆ ಶೇಕಡ 15ರ ಆಸುಪಾಸಿನಲ್ಲೇ ಇದೆ. ಸೇವಾ ವಲಯದಲ್ಲಿ ಕೆಲಸಗಾರರಿಗೆ ಒಳ್ಳೆಯ ವೇತನ ಸಿಗುತ್ತೆ. ಅಲ್ಲಿ ಉದ್ಯೋಗದ ವಾತಾವರಣವೂ ಚೆನ್ನಾಗಿದೆ. ಆದರೆ ಅಲ್ಲಿ ಉದ್ಯೋಗದ ಅವಕಾಶಗಳು ಕಡಿಮೆ. ಅದರಲ್ಲೂ ಕೌಶಲವಿಲ್ಲದ ಕಾರ್ಮಿಕರಿಗೆ ಅಲ್ಲಿ ಅಷ್ಟಾಗಿ ಉದ್ಯೋಗಾವಕಾಶವಿಲ್ಲ.

ಅದೆಲ್ಲಕ್ಕಿಂತ ಹೆಚ್ಚಾಗಿ ನಮ್ಮಲ್ಲಿ ಸರ್ಕಾರ ಕಳೆದ ಕೆಲವು ದಶಕಗಳಿಂದ ಸರ್ಕಾರ ಅನುಸರಿಸಿಕೊಂಡು ಬರುತ್ತಿರುವ  ಉದಾರವಾದೀ ಆರ್ಥಿಕ ನೀತಿ ನಮ್ಮಲ್ಲಿನ ಆರ್ಥಿಕ ಸಮಸ್ಯೆಯನ್ನು ತೀವ್ರಗೊಳಿಸಿದೆ. ಉದಾರವಾದಿ ಆರ್ಥಿಕ ನೀತಿ ಖಾಸಗಿ ಬಂಡವಾಳಕ್ಕೆ ರಕ್ಷಣೆಯನ್ನು ಬಯಸುತ್ತೆ. ಅದರ ದೃಷ್ಟಿಯಲ್ಲಿ ಅದು ಸರ್ಕಾರದ ಕರ್ತವ್ಯ. ಸರ್ಕಾರ ಖಾಸಗೀ ಬಂಡವಾಳಕ್ಕೆ ಎಲ್ಲಾ ರೀತಿಯ ಪ್ರೋತ್ಸಾಹ, ಬೆಂಬಲ ರಕ್ಷಣೆ ನೀಡಬೇಕು. ಅದರ ಮೇಲೆ ಯಾವುದೇ ರೀತಿಯ ನಿಯಂತ್ರಣವನ್ನು ಸರ್ಕಾರ ಹೇರಬಾರದು. ಅದರ ಮುಕ್ತ ಹರಿವಿಗೆ ಅವಕಾಶ ಮಾಡಿಕೊಡಬೇಕು. ಖಾಸಗಿ ಹೂಡಿಕೆದಾರರು ಸದಾ ಸಂತುಷ್ಟವಾಗಿರುವಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಅವರು ಬಂಡವಾಳವನ್ನು ಬೇರೆ ಕಡೆಗೆ ಸಾಗಿಸುತ್ತಾರೆ. ಅವರ ಚಟುವಟಿಕೆಗೆ ಯಾವುದೇ ಅಡಚಣೆಯೂ ಬರಬಾರದು. ಕಾರ್ಮಿಕರೂ, ಅವರಿಗೆ ವಿಧೇಯರಾಗಿರಬೇಕು. ಹಾಗಾಗಿ ತಮ್ಮ ಹಕ್ಕುಗಳನ್ನು ತ್ಯಾಗಮಾಡಬೇಕು. ವಿದೇಶೀ ಹಾಗೂ ಖಾಸಗೀ ಬಂಡವಾಳವನ್ನು ಸಂತುಷ್ಟಗೊಳಿಸೋದಕ್ಕಾಗಿ ಸರ್ಕಾರ ಕಾರ್ಮಿಕರ ಸ್ವಾತಂತ್ರ್ಯವನ್ನ ಮೊಟಕುಗೊಳಿಸುತ್ತಾ ಬರುತ್ತಿದೆ. ಅವರ ಅನುಕೂಲಕ್ಕೆ ತಕ್ಕಂತೆ ಕಾನೂನುಗಳು ಬದಲಾಗುತ್ತಿವೆ. ಕಾರ್ಮಿಕ ಸಂಘಟನೆಗಳು ದುರ್ಬಲಗೊಂಡಿವೆ. ವೇತನಗಳು ಕುಸಿಯುತ್ತಿವೆ. ಬದುಕು ದುರ್ಭರವಾಗುತ್ತಿದೆ. ಕಾರ್ಪೋರೇಟ್ ಮಂದಿ ವಿಪರೀತ ಲಾಭ ಮಾಡಿಕೊಳ್ಳುತ್ತಿದ್ದಾರೆ. ಕಾರ್ಮಿಕರ ಜೀವನಮಟ್ಟ ಕುಸಿಯುತ್ತಿದೆ. ಯಾವುದೇ ಆರ್ಥಿಕ ಹೊಡೆತವೂ ಅವರ ಬಿಕ್ಕಟ್ಟನ್ನು ತೀವ್ರಗೊಳಿಸುತ್ತದೆ. ಕೊರೋನ, ಯುದ್ಧದಿಂದ ಏರುತ್ತಿರುವ ಬೆಲೆಗಳು, ಎಲ್‌ಪಿಜಿ ಇತ್ಯಾದಿಗಳ ಕೊರತೆ ಹೀಗೆ ಯಾವುದೇ ಬಿಕ್ಕಟ್ಟನ್ನೂ ತಡೆದುಕೊಳ್ಳುವ ಸ್ಥಿತಿಯಲ್ಲಿ ಅವರಿಲ್ಲ. ಹಕ್ಕುಗಳ ನಿರಾಕರಣೆ, ಗುತ್ತಿಗೆ ಪದ್ಧತಿ, ವೇತನದ ಸ್ಥಗಿತತೆ, ಆರ್ಥಿಕ ಅಭದ್ರತೆ ಇವೆಲ್ಲಾ ಅವರನ್ನು ನಜ್ಜುಗುಜ್ಜು ಮಾಡಿವೆ.

ಈಗ ಇರಾನ್ ವಿರುದ್ಧ ಅಮೇರಿಕ–ಇಸ್ರೇಲ್ ಯುದ್ಧದಿಂದಾಗಿ ಇಂಧನ ಶಾಕ್, ಬೆಲೆಗಳ ಏರಿಕೆ ಇಂತಹ ಯಾವುದೇ ಹೊಸ ಆರ್ಥಿಕ ಆಘಾತಗಳು ಎದುರಾದಾಗ, ಅವರ ಜೀವನವು ಅಸಹನೀಯವಾಗುತ್ತೆ ಮತ್ತು ಪರಿಸ್ಥಿತಿ ಸ್ಫೋಟಕವಾಗಿ ಬದಲಾಗುತ್ತೆ. ಕೆಲಸದ ಸ್ಥಳದಲ್ಲಿ ಅವರ ಮೇಲೆ ನಡೆಯುವ ಅಗೋಚರ ದಬ್ಬಾಳಿಕೆಯು, ಬೀದಿಗಳಲ್ಲಿ ಹಿಂಸಾಚಾರದ ರೂಪದಲ್ಲಿ ಹೊರಹೊಮ್ಮುತ್ತದೆ. ಸರ್ಕಾರ ಒಂದು ಕಡೆ ಕಾರ್ಮಿಕರ ಪ್ರತಿಭಟನೆಯನ್ನು ಪೋಲಿಸರು ನಿರ್ವಹಿಸಬೇಕಾದ ಕಾನೂನು ಸಮಸ್ಯೆಯಾಗಿ ನೋಡುತ್ತಿದೆ. ಬಲಪ್ರಯೋಗಿಸಿ ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ಇನ್ನೊಂದು ಕಡೆ ರಾಜ್ಯದ ಕಾರ್ಮಿಕರ ಕನಿಷ್ಠ ವೇತನವನ್ನು ಒಂದಿಷ್ಟು ಹೆಚ್ಚಿಸುವ  ಮೂಲಕ (ಇದು ಕಾರ್ಮಿಕರ ಬೇಡಿಕೆಗಿಂತ ಬಹಳ ಕಡಿಮೆಯಿದೆ) ಮತ್ತು ಕೆಲಸದ ಪರಿಸ್ಥಿತಿಗಳ ಪರಿಶೀಲನೆಯ ಭರವಸೆ ನೀಡುವ ಮೂಲಕ ಕಾರ್ಮಿಕರ ಸಿಟ್ಟನ್ನು ಶಮನಗೊಳಿಸಲು ಪ್ರಯತ್ನಿಸುತ್ತಿದೆ. ಹಾಗೆಯೇ ಈ ಪ್ರತಿಭಟನೆಗಳನ್ನು ರಾಜ್ಯ ಸರ್ಕಾರದ ಘನತೆಗೆ ಮಸಿ ಬಳಿಯಲು "ಹೊರಗಿನವರು" ನಡೆಸುತ್ತಿರುವ ಪಿತೂರಿ ಎಂದು ಚಿತ್ರಿಸುವ ಕೆಲಸವನ್ನೂ ಮಾಡುತ್ತಿದೆ. ಇವೆಲ್ಲಾ ಮೂಲ ಸಮಸ್ಯೆಯನ್ನು ಪರಿಹರಿಸೋದಿಲ್ಲ. ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ ಹಣದುಬ್ಬರ ಶೇಕಡ 26.6ರಷ್ಟು ಹೆಚ್ಚಿರುವಾಗ ಶೇಕಡ 21ರಷ್ಟು ವೇತನವನ್ನು ಪರಿಷ್ಕರಿಸುವುದರಿಂದ ಕಾರ್ಮಿಕರ ಬದುಕು ಸುಧಾರಿಸೋದಿಲ್ಲ. ಅವರ ಕೊಳ್ಳುವ ಶಕ್ತಿ ಬೆಳೆಯೋದೂ ಇಲ್ಲ. ಸರ್ಕಾರ ಕನಿಷ್ಠ ವೇತನವನ್ನು ವ್ಯವಸ್ಥಿತವಾಗಿ ಹೆಚ್ಚಿಸುವುದಕ್ಕೆ ಯೋಜನೆಗಳನ್ನು ರೂಪಿಸಬೇಕು.

ಕನಿಷ್ಠ ವೇತನವನ್ನು ಹೆಚ್ಚಿಸಿದರೆ ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ತೊಂದರೆಯಾಗುತ್ತದೆ ಅನ್ನುವ ತಕರಾರರನ್ನು ಎತ್ತಲಾಗುತ್ತಿದೆ. ಆತಂಕ ನಿಜವಾದರೂ ಜನರ ವೇತನದ ಏರಿಕೆಯನ್ನು ತಡೆಯುವುದಕ್ಕೆ ಅದನ್ನು ಕಾರಣಮಾಡುವುದು ಸರಿಯಲ್ಲ. ಬದಲಿಗೆ ಸಣ್ಣ ಉದ್ಯಮಕ್ಕೆ ನೆರವು ನೀಡುವುದು ಉತ್ತಮ ಕ್ರಮ. ಉದಾಹರಣೆಗೆ ಅವುಗಳಿಗೆ ತೆರಿಗೆ ರಿಯಾಯಿತಿ ನೀಡಬಹುದು. ವೇತನದ ಒಂದು ಪಾಲನ್ನು ಸರ್ಕಾರ ಸಹಾಯಧನವನ್ನಾಗಿ ನೀಡಬಹುದು. ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕೆ ಪ್ರೋತ್ಸಾಹಧನ ನೀಡಬಹುದು. ಹೀಗೆ ಹಲವು ಸಲಹೆಗಳನ್ನು ಹಲವರು



ನೀಡಿದ್ದಾರೆ. ಇವು ಒಳ್ಳೆಯವು. ಕಾರ್ಮಿಕರ ಬದುಕು ಸುಧಾರಿಸುತ್ತದೆ. ಉದ್ದಿಮೆಗಳು ಬೆಳೆಯುತ್ತವೆ. ದೇಶದ ಆರ್ಥಿಕ ಸ್ಥಿತಿಯ ಸುಧಾರಣೆಗೂ ಅನುಕೂಲವಾಗುತ್ತೆ.

ಹಾಗೆಯೇ ವಲಸೆ ಅಪರಾಧವಲ್ಲ. ತಮ್ಮ ರಾಜ್ಯಗಳಲ್ಲಿ ಉದ್ಯೋಗ ಇಲ್ಲದ್ದರಿಂದ ಕಾರ್ಮಿಕರು ಉದ್ಯೋಗ ಇರುವ ಕಡೆಗೆ ವಲಸೆ ಹೋಗ್ತಾರೆ. ಅದನ್ನು ತಪ್ಪು ಅಂತ ಭಾವಿಸೋ ಬದಲು ವಲಸೆ ಬಂದವರಿಗೆ ಸೌಲಭ್ಯ ಕಲ್ಪಿಸೋದು ಒಳ್ಳೆಯದು. ಅವರಿಗೂ ಕನಿಷ್ಠ ವೇತನ ಸಿಗುವ ಹಾಗೆ, ಅವರಿಗೆ ಸಾಮಾಜಿಕ ಕಲ್ಯಾಣ ಯೋಜನೆಗಳ ಪ್ರಯೋಜನ ದಕ್ಕುವ ಹಾಗೆ ಮಾಡೋದು, ಅವರ ಕುಂದುಕೊರತೆಗಳನ್ನು ನಿವಾರಿಸೋದಕ್ಕೆ ವ್ಯವಸ್ಥೆ ಮಾಡುವುದು ಇವೆಲ್ಲಾ ದೇಶದ ಬೆಳವಣಿಗೆಗೆ ಅನುಕೂಲವಾಗುತ್ತದೆ.

ಜನಸಾಮಾನ್ಯರು ಹಾಗೂ ಕಾರ್ಮಿಕರಿಗೆ ಸಂಬಂಧಿಸಿದಂತೆ  ಸಂಸ್ಥೆಗಳ ನಿಲುವು ಬದಲಾಗುತ್ತಾ ಬರುತ್ತಿದೆ. ಒಂದು ಕಾಲದಲ್ಲಿ ಈ ರೀತಿ ಗುತ್ತಿಗೆ ಮೂಲಕ ನೇಮಕಾತಿ ಮಾಡುವುದು ತಪ್ಪು ಅನ್ನೋದು ಸಾಮಾನ್ಯವಾದ ನಿಲುವಾಗಿತ್ತು. 1987ರಲ್ಲಿ ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರಾದ ಚಿನ್ನಪ್ಪ ರೆಡ್ಡಿಯವರು ತೀರ್ಪು ನೀಡುತ್ತಾ "ಸರ್ಕಾರಿ ಸಂಸ್ಥೆಗಳು ಸೇರಿದಂತೆ ದೊಡ್ಡ ದೊಡ್ಡ ಕಡೆಗಳಲ್ಲಿ ಈ ಕಾಂಟ್ರಾಕ್ಟ್ ಕೆಲಸದ ಪದ್ಧತಿ ಯಾಕೆ ಇಷ್ಟೊಂದು ಹೆಚ್ಚಾಗಿದೆ" ಅಂತ ಅವರು ಅಚ್ಚರಿ ವ್ಯಕ್ತಪಡಿಸಿದ್ದರು. ಅಂದಿನ ಕಾಲದಲ್ಲಿ ಸುಪ್ರೀಂ ಕೋರ್ಟ್ ಕೂಡ 'ಈ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ಯಾವತ್ತೂ ಪ್ರೋತ್ಸಾಹಿಸಬಾರದು' ಅಂತ ಸ್ಪಷ್ಟವಾಗಿ ಹೇಳಿತ್ತು. ಅದು ಖಾಸಗೀಕರಣಕ್ಕೆ ತೀವ್ರ ವಿರೋಧವಿದ್ದ ಕಾಲ. ಆದರೆ ಈಗ ಸರ್ಕಾರದ ನೀತಿ ಬದಲಾಗಿದೆ. ನಾವು ಉದಾರವಾದಿ ಆರ್ಥಿಕ ನೀತಿಯನ್ನು ಒಪ್ಪಿಕೊಂಡಿದ್ದೇವೆ. ಕಾಂಟ್ರಾಕ್ಟ್ ಕೆಲಸಕ್ಕೆ ಒಂದು ರೀತಿ ಗೌರವ ಬಂದುಬಿಟ್ಟಿದೆ. ಅದನ್ನು ಮಾಮೂಲಿ ಅಂತ ಭಾವಿಸತೊಡಗಿದ್ದೇವೆ. ಈಗ ನ್ಯಾಯಾಂಗಕ್ಕೂ ಅದು ತಪ್ಪು ಅಂತ ಅನಿಸುತ್ತಿಲ್ಲ. ಸುಪ್ರೀಂ ಕೋರ್ಟ್ ಕೂಡ ಅದನ್ನು ಬೆಂಬಲಿಸುತ್ತಿದೆ. ಆದರೆ ಹೀಗೆ ನಾವು ಗುತ್ತಿಗೆಯೂ ಸೇರಿದಂತೆ ಕಾರ್ಮಿಕ ವಿರೋಧಿ ಕ್ರಮಗಳನ್ನು ಒಪ್ಪಿಕೊಳ್ತಾ ಬಂದ್ರೆ, ಲಕ್ಷಾಂತರ ಕಾರ್ಮಿಕರ ಬದುಕು ಇನ್ನಷ್ಟು ಕಷ್ಟದಲ್ಲಿ ಸಿಲುಕಿಕೊಳ್ಳೊದ್ರಲ್ಲಿ ಅನುಮಾನವೇ ಇಲ್ಲ.

ಕೃಪೆ: ಹೊಸತು

# ಸಾರ್ವಜನಿಕ ಸೇವೆ ಪರಿಣಾಮಕಾರಿಯಾಗಬೇಕು





ಭಾರತ ಆರ್ಥಿಕವಾಗಿ ಅತಂತ ಬಲಾಢ್ಯ ರಾಷ್ಟ್ರವಾಗಲಿದೆ ಎಂದು ಒಂದು ಕಡೆ ಸಂಭ್ರಮಿಸುತ್ತಿದ್ದೇವೆ. ಹಾಗೆಯೇ ಇನ್ನೊಂದು ಕಡೆ ನಮ್ಮ ಆರ್ಥಿಕತೆಯಲ್ಲಿ ಹಲವು ಗಂಭೀರವಾದ ಸಮಸ್ಯೆಗಳಿವೆ ಅನ್ನುವ ಆತಂಕವೂ ಅಷ್ಟೇ ತೀವ್ರವಾಗಿ ವ್ಯಕ್ತವಾಗುತ್ತಿದೆ. ನಮ್ಮ ದೇಶದ ಆರ್ಥಿಕತೆಯ ಬಗ್ಗೆ ಅಪಾರ ಕಾಳಜಿಯುಳ್ಳ ಹಲವು ಅರ್ಥಶಾಸ್ತ್ರಜ್ಞರು ಈ ಬಗ್ಗೆ ಗಂಭೀರವಾಗಿ ಅಧ್ಯಯನವನ್ನು ಮಾಡಿದ್ದಾರೆ. ಸಲಹೆಗಳನ್ನೂ ನೀಡುತ್ತಿದ್ದಾರೆ. ಕಾರ್ತಿಕ್ ಮುರಳಿಧರನ್ ಇಪ್ಪತ್ತೈದು ವರ್ಷಗಳ ಸುಧೀರ್ಘ ಸಂಶೋಧನೆ ನಡೆಸಿ 'ಅಕ್ಸಿಲರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್' ಎಂಬ ಬೃಹತ್ ಕೃತಿಯನ್ನೇ ರಚಿಸಿದ್ದಾರೆ.

ಸ್ವಾತಂತ್ರ್ಯ ಬಂದಾಗ ಭಾರತ ತೀರಾ ಕೆಟ್ಟ ಸ್ಥಿತಿಯಲ್ಲಿತ್ತು. ಈ ದೇಶ ಒಟ್ಟಿಗೆ ಉಳಿಯುತ್ತದಾ ಅನ್ನುವ ಅನುಮಾನ ಹಲವರಲ್ಲಿತ್ತು. ಆದರೆ ಇಂಡಿಯಾ ಉಳಿದಿದೆ, ನಿರೀಕ್ಷೆಗೆ ಮೀರಿದ ಅಭಿವೃದ್ಧಿಯನ್ನೂ ಸಾಧಿಸಿದೆ. ಬಡತನ, ಹಸಿವು ಇವೆಲ್ಲಾ ಖಂಡಿತಾ ಕಡಿಮೆಯಾಗಿದೆ. ಆಗ ಶೇಕಡ 70ರಷ್ಟಿದ್ದ ದಾರಿದ್ರ್ಯ ಈಗ ಸುಮಾರು 20%ಗೆ ಇಳಿದಿದೆ. ಆಡಳಿತದಲ್ಲೂ ಸಾಕಷ್ಟು ಸುಧಾರಣೆಗಳಾಗಿವೆ. ಜಗತ್ತಿನಲ್ಲೇ ಬೃಹತ್ ಎನ್ನುವ ಚುನಾವಣೆಗಳನ್ನು ಯಶಸ್ವಿಯಾಗಿ ಮಾಡುತ್ತಿದ್ದೇವೆ. ಕುಂಭಮೇಳದಂತಹ ದೊಡ್ಡ ಮೇಳಗಳನ್ನು ಆಚರಿಸುತ್ತಿದ್ದೇವೆ. ಆದರೆ ನಮ್ಮ ಯಶಸ್ಸು ಆಗೊಮ್ಮೆ ಈಗೊಮ್ಮೆ ನಡೆಯುವ ಇಂತಹ ಬೃಹತ್ ಕಾರ್ಯಕ್ರಮಗಳಿಗೆ ಸೀಮಿತವಾಗಿದೆ.  ಜನರಿಗೆ ದಿನನಿತ್ಯ ಒದಗಿಸಬೇಕಾದ ಶಿಕ್ಷಣ, ಆರೋಗ್ಯ, ಕಾನೂನು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವುದರಲ್ಲಿ ವಿಫಲವಾಗಿದ್ದೇವೆ. ಶಿಕ್ಷಣವನ್ನೇ ನೋಡಿ. ಸಾಕಷ್ಟು ಹಣ ಖರ್ಚು ಮಾಡುತ್ತಿದ್ದೇವೆ. ಬಹುತೇಕ ಮಕ್ಕಳು ಶಾಲೆಗೂ ಹೋಗುತ್ತಿದ್ದಾರೆ. ಆದರೆ ಶೇಕಡ 50ಕ್ಕೂ ಹೆಚ್ಚು ಮಕ್ಕಳು ಓದುವುದಕ್ಕೇ ಕಷ್ಟ ಪಡುತ್ತಾರೆ. ಆರೋಗ್ಯ, ಪರಿಸರ, ಸುರಕ್ಷತೆ ಇತ್ಯಾದಿಗಳ ವಿಷಯಗಳಲ್ಲೂ ಹೀಗೆ ಆಗುತ್ತಿದೆ.

ಹಣ ಸರ್ಕಾರದ ವೈಫಲ್ಯಕ್ಕೆ ಕಾರಣವಲ್ಲ. ಸರ್ಕಾರಕ್ಕೆ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕೆ ಬೇಕಾದ ಸಾಮರ್ಥ್ಯದ ಕೊರತೆಯಿದೆ. ನಾವು ಇವತ್ತಿಗೂ 1950ರಲ್ಲಿ ಚಾಲೂ ಮಾಡಿದ ವಾಹನದಲ್ಲೇ ಕುಳಿತು ಔತ್ತಮ್ಯದ ಬದುಕನ್ನು ನಿರೀಕ್ಷಿಸುತ್ತಾ ಸಾಗುತ್ತಿದ್ದೇವೆ. ವಾಹನದ ಕಾರ್ಯಕ್ಷಮತೆ ಕಡಿಮೆಯಾಗಿದೆ. ನೀವು ಇಂಧನದ ಮೇಲೆ ಎಷ್ಟೇ ಹಣ ಚೆಲ್ಲಿ, ಎಷ್ಟೇ ಆಕ್ಸಿಲೇಟರ್ ಕೊಡಿ ವಾಹನದ ಕಾರ್ಯಕ್ಷಮತೆ ಹೆಚ್ಚಿಸದೇ ಹೋದರೆ ನಿರೀಕ್ಷಿತ ಪರಿಣಾಮ ಸಿಗುವುದಿಲ್ಲ. ಕಾರನ್ನು ಅಪಗ್ರೇಡ್ ಮಾಡಬೇಕು.

ಯಾಕೆ ಹೀಗಾಯಿತು? ಬಹುತೇಕ ರಾಷ್ಟ್ರಗಳಲ್ಲಿ ಪ್ರಜಾಸತ್ತೆ ಬರುವ ವೇಳೆಗೆ ಸಾಕಷ್ಟು ಆರ್ಥಿಕ ಅಭಿವೃದ್ಧಿಯೂ ಆಗಿರುತ್ತಿತ್ತು. ಆದರೆ ನಾವು ಬೆಳವಣಿಗೆಗೆ ಕಾಯಲಿಲ್ಲ. ಸ್ವಾತಂತ್ರ ಸಿಕ್ಕಕೂಡಲೇ ಪ್ರಜಾಸತ್ತೆಯನ್ನು, ಸಾರ್ವತ್ರಿಕ ಮತದಾನವನ್ನು ಜಾರಿಗೆ ತಂದೆವು. ಜನಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ನಾವು ಪಡಿತರ ಪದ್ಧತಿಯಲ್ಲಿ ಆಹಾರ ವಿತರಣೆ ಮಾಡುವುದಕ್ಕೆ ಪ್ರಾರಂಭಿಸಿದಾಗ ಭಾರತದ ತಲಾ ವರಮಾನ ಕೇವಲ 1200 ಡಾಲರ್ ಇತ್ತು. ಅಮೇರಿಕೆಯಲ್ಲಿ ಆಹಾರದ ಸೌಲಭ್ಯ ಕಲ್ಪಿಸಿದಾಗ ಅಲ್ಲಿಯ ತಲಾವರಮಾನ ಇದರ 15 ಪಟ್ಟು ಇತ್ತು. ಇದು ಖಂಡಿತಾ ದೊಡ್ಡ ಸಾಧನೆ. ಆದರೆ ಕ್ರಮೇಣ  ಮತದಾರರ ನಿರೀಕ್ಷೆಯೂ ಹೆಚ್ಚಾಯಿತು. ಹೆಚ್ಚೆಚ್ಚು ಜನಕಲ್ಯಾಣ ಕಾರ್ಯಕ್ರಮಗಳನ್ನು ನಿರೀಕ್ಷಿಸತೊಡಗಿದರು.

ಆದರೆ ಅದಕ್ಕೆ ಬಂಡವಾಳ ಬೇಕು. ನಮ್ಮ ಜಿಡಿಪಿಗೆ ಹೋಲಿಸಿದರೆ ನಮ್ಮಲ್ಲಿ ಸಂಗ್ರಹವಾಗುತ್ತಿರುವ ತೆರಿಗೆ ಕಡಿಮೆಯೆ. ಕಲ್ಯಾಣ ಕಾರ್ಯಕ್ರಮಗಳಿಗೆ ಮತ್ತು ಸಬ್ಸಿಡಿಗಳಿಗೆ ಖರ್ಚು ಮಾಡಿದ ಮೇಲೆ, ಸಾರ್ವಜನಿಕ ಸರಕುಗಳ ಉತ್ಪಾದನೆಗೆ, ಮೂಲಭೂತ ಸೌಕರ್ಯವನ್ನು ಕಲ್ಪಿಸುವುದಕ್ಕೆ ಇತ್ಯಾದಿಗಳಿಗೆ ಬಂಡವಾಳವನ್ನು ಒಟ್ಟು ಮಾಡುವುದು ಕಷ್ಟವಾಗುತ್ತಿತ್ತು. ಎಲ್ಲರಿಗೂ ಅವಶ್ಯಕ ಸೌಲಭ್ಯಗಳನ್ನು ಒದಗಿಸುವುದು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕರ್ತವ್ಯ ನಿಜ. ಆದರೆ ನಮ್ಮಲ್ಲಿ ಅದನ್ನು ಪರಿಣಾಮಕಾರಿಯಾಗಿ ಒದಗಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರದ ಸಾಮರ್ಥ್ಯ ಅಷ್ಟು ಬೆಳೆದಿಲ್ಲ. ಇದೊಂದು ವಿಷವೃತ್ತ. ಸಂಪನ್ಮೂಲದ ಕೊರತೆ ಸರ್ಕಾರದ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಸರ್ಕಾರ ದುರ್ಬಲವಾದಷ್ಟೂ ಕಾರ್ಯಕ್ರಮಗಳು



ಪರಿಣಾಮಕಾರಿಯಾಗುವುದಿಲ್ಲ.

ಸರ್ಕಾರದ ಕಾರ್ಯಕ್ಷಮತೆಯ ಸಮಸ್ಯೆಯಿಂದ ಸರ್ಕಾರದ ಯೋಜನೆಗಳು ಪರಿಣಾಮಕಾರಿಯಾಗುತ್ತಿಲ್ಲ. ಶಾಲೆಗಳಲ್ಲಿ ಪರಿಣಾಮಕಾರಿ ಕಲಿಕೆ ಸಾಧ್ಯವಾಗುತ್ತಿಲ್ಲ. ಆಸ್ಪತ್ರೆಗಳಲ್ಲಿ ಪರಿಣಾಮಕಾರಿ ಸೇವೆ ದೊರಕುತ್ತಿಲ್ಲ ಇತ್ಯಾದಿ. ನಮ್ಮ ದೇಶದ ಎಲೈಟುಗಳು ಹಾಗೂ ಮಧ್ಯಮ ವರ್ಗದವರು ಸಾರ್ವಜನಿಕ ಸೇವೆಗಳನ್ನು ಬಳಸಿಕೊಳ್ಳುವುದನ್ನು ಬಿಟ್ಟಿದ್ದಾರೆ. ಶಿಕ್ಷಣ, ಆರೋಗ್ಯ, ಸಾರಿಗೆ, ಕೊನೆಗೆ ಸುರಕ್ಷತೆ ಹೀಗೆ ಪ್ರತಿಯೊಂದಕ್ಕೂ ಖಾಸಗಿ ಸೇವೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಸಾರ್ವಜನಿಕ ಸೇವೆಯ ಸುಧಾರಣೆಯಾಗಬೇಕೆಂದು ಒತ್ತಡ ಹೇರುವವರು ಯಾರೂ ಇಲ್ಲವಾಗಿದ್ದಾರೆ. ಸಾರ್ವಜನಿಕ ಸೇವೆ ಸುಧಾರಿಸಿದರೆ ಖಾಸಗಿ ಸೇವೆಯ ಮೇಲೆ ಒತ್ತಡ ಹೆಚ್ಚುತ್ತದೆ. ಅದು ಇನ್ನೂ ಸುಧಾರಿಸುತ್ತದೆ. ಇದು ಬೆನ್ನು ಹತ್ತಿದ ಕರಡಿಯಿಂದ ತಪ್ಪಿಸಿಕೊಳ್ಳಲು ಓಡುತ್ತಿರುವ ಇಬ್ಬರು ಮನುಷ್ಯರಂತೆ. ಸದಾ ಒಬ್ಬರು ಇನ್ನೊಬ್ಬರನ್ನು ಹಿಂದೆ ಹಾಕಿ ಮುಂದೆ ಓಡುತ್ತಿರಬೇಕು. ಹಿಂದೆ ಬಿದ್ದವರು ಕರಡಿಗೆ ಸಿಕ್ಕಿಬಿದ್ದು ಸಾಯುತ್ತಾರೆ. ಸಾರ್ವಜನಿಕ ಸೇವೆ ಸುಧಾರಿಸಿದರೆ ತಮಗೂ ಒಳ್ಳೆಯದು ಅಂತ ಎಲೈಟುಗಳಿಗೂ ಅರಿವಾಗಬೇಕು. ಮನೆಯೊಳಗೆ ಏರ್ ಫಿಲ್ಟರ್ ಹಾಕಿಕೊಳ್ಳಬಹುದು. ಮನೆಯಾಚೆ ಬಂದರೆ ಅವರೂ ಮಾಲಿನ್ಯವನ್ನು ಎದುರಿಸಬೇಕು.

ಚುನಾವಣೆಯಲ್ಲಿ ಗೆಲ್ಲಬೇಕಾದರೆ ಸರ್ಕಾರ ಒಳ್ಳೆ ಕೆಲಸ ಮಾಡಬೇಕು. ಎಲ್ಲರ ಹಿತವನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗದೇ ಹೋದಾಗ ಗೆಲ್ಲುವುದಕ್ಕೆ ಬೇಕಾದ ಮತದ ಕಡೆ ಗಮನ ಹೋಗುತ್ತದೆ. ನಮ್ಮಲ್ಲಿ ಹೆಚ್ಚು ಮತ ಪಡೆದವರು ಚುನಾವಣೆಯಲ್ಲಿ ಗೆಲ್ಲುತ್ತಾರೆ. 50% ಮತದಾನವಾಗುತ್ತದೆ ಅಂದುಕೊಂಡರೆ, ಅದರಲ್ಲಿ ಗೆದ್ದವನಿಗೆ 40% ಮತ ಬಂದಿದ್ದರೆ ಒಟ್ಟಾರೆ ಮತಗಳಲ್ಲಿ ಗೆದ್ದವನಿಗೆ ಸಿಕ್ಕಿರುವುದು ಕೇವಲ 20% ಮತ. ಅಂದರೆ ಒಟ್ಟು ಮತದಾರರಲ್ಲಿ ಶೇಕಡ 20ರಿಂದ 30 ಮತ ಪಡೆದವರು ಚುನಾವಣೆಯಲ್ಲಿ ಗೆಲ್ಲಬಹುದು. ಹಾಗಾಗಿ ಅಭ್ಯರ್ಥಿಗೆ ಇಡೀ ಮತದಾರರನ್ನು ತೃಪ್ತಿಪಡಿಸುವ ಅವಶ್ಯಕತೆ ಇಲ್ಲ. ಕೇವಲ 30% ಮತದಾರರ ಬೆಂಬಲ ಸಿಕ್ಕರೆ ಸಾಕು. ಹಾಗಾಗಿಯೇ ತಮ್ಮ ಪಕ್ಷಾ ಸಮರ್ಥಕರನ್ನು ಒಲೈಸುವ, ಉಳಿಸಿಕೊಳ್ಳುವ ಓಟ್‌ಬ್ಯಾಂಕ್ ರಾಜಕೀಯ ವ್ಯಾಪಕವಾಗಿದೆ. ಇದಕ್ಕೆ ಜಾತಿ, ಧರ್ಮ, ಭಾಷೆ ಏನು ಬೇಕಾದರೂ ಆಧಾರವಾಗಿರಬಹುದು. ಹಾಗಾಗಿ ಸರ್ಕಾರ ತನ್ನಲ್ಲಿರುವ ಮಿತವಾದ ಸಂಪನ್ಮೂಲವನ್ನು ತನ್ನ ಬೆಂಬಲಿಗರಿಗೆ ನೇರವಾಗಿ ವರ್ಗಾಯಿಸಿ ಅವರ ಮತಗಳನ್ನು ಗಟ್ಟಿ ಮಾಡಿಕೊಳ್ಳುವ ಕಡೆ ಗಮನಕೊಡುತ್ತದೆ. ಜನರಿಗೂ ತಮ್ಮ ಹಿತಾಸಕ್ತಿಯನ್ನು ಕಾಪಾಡುವವರೇ ಬೇಕು. ಕಾರ್ಯಕ್ರಮಗಳು ಕಣ್ಣಿಗೆ ಕಾಣುವಂತಿರಬೇಕು. ಶಾಲೆ ಕಟ್ಟಡದ ನಿರ್ಮಾಣ, ಮಕ್ಕಳ ಕಲಿಕೆಗಿಂತ ಮುಖ್ಯವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಸರ್ಕಾರದ ಸಾಮರ್ಥ್ಯ ಇನ್ನಷ್ಟು ಕುಗ್ಗುತ್ತದೆ. ಸರ್ಕಾರಗಳು ದುರ್ಬಲವಾದಷ್ಟೂ ಮತಬ್ಯಾಂಕಿನ ರಾಜಕೀಯ ಹೆಚ್ಚುತ್ತದೆ. ಇದು ಮತ್ತೊಂದು ವಿಷವೃತ್ತ.

ಸರ್ಕಾರದ ಸಾಮರ್ಥ್ಯ ಹೆಚ್ಚಬೇಕಾದರೆ ನಿಜವಾದ ಬೆಳವಣಿಗೆಗೆ ಪೂರಕವಾಗುವ ಮತ್ತು ಎಲ್ಲಾ ಭಾರತೀಯರಿಗೂ ದಕ್ಕುವ ಸಾರ್ವಜನಿಕ ಸೇವೆಯನ್ನು ಒದಗಿಸುವ ದಾರಿಗೆ ಮರಳಬೇಕು. ಮತಬ್ಯಾಂಕಿನ ರಾಜಕೀಯದಿಂದ ಹೊರಬರಬೇಕು. ಪ್ರಜಾಸತ್ತೆಯನ್ನು ಬಲಗೊಳಿಸಬೇಕು. ಪ್ರಜಾಸತ್ತೆ ಬೆಳವಣಿಗೆಯನ್ನು ಪೋಷಿಸುತ್ತದೆ. ಚೀನಾದಲ್ಲೂ ಡೆಂಗ್ ಕ್ಸಿಯೊಪಿಂಗ್ ಆರ್ಥಿಕತೆಯನ್ನು ವಿಕೇಂದ್ರೀಕರಣಗೊಳಿಸಿದ ನಂತರ ಆರ್ಥಿಕ ಸುಧಾರಣೆ ಸಾಧ್ಯವಾಯಿತು. ಸರ್ಕಾರಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ತರುವುದಕ್ಕೆ ಸಾಧ್ಯವಾಗದೇ ಹೋದರೆ ಜನ ಪ್ರಜಾಸತ್ತೆಯಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಾರೆ. ಅದು ಸಾಧ್ಯವಾಗಬೇಕಾದರೆ ಸರ್ಕಾರ ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡಬೇಕು.

**ಅಧಿಕಾರಶಾಹಿಯೂ ಪರಿಣಾಮಕಾರಿಯಾಗಬೇಕು**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಸರ್ಕಾರ ಶಾಸನಗಳನ್ನು ರೂಪಿಸುತ್ತವೆ. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಅಧಿಕಾರಶಾಹಿ. ಅಧಿಕಾರಶಾಹಿ ಎಲ್ಲಾ ಮಟ್ಟದಲ್ಲೂ ದಕ್ಷವಾಗಿದ್ದರೆ ಮಾತ್ರ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬಹುದು. ನಮ್ಮಲ್ಲಿ ಅಧಿಕಾರಶಾಹಿ ಚುನಾವಣೆ, ಜನಗಣತಿ ಇತ್ಯಾದಿ 'ಮಿಷನ್ ಮೋಡ್' ಕೆಲಸಗಳನ್ನು ಯಶಸ್ವಿಯಾಗಿಯೇ ನಿರ್ವಹಿಸುತ್ತದೆ. ಆದರೆ ಶಿಕ್ಷಣ, ಆರೋಗ್ಯ ಮತ್ತು ಸಾರ್ವಜನಿಕ ನ್ಯಾಯ ಇತ್ಯಾದಿ ಮೂಲಭೂತ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವುದಕ್ಕೆ ಅದಕ್ಕೆ ಸಾಧ್ಯವಾಗುತ್ತಿಲ್ಲ. ಅದರ ಮೇಲಿನ ಹೊರೆ ದಿನೇ ದಿನೇ ಹೆಚ್ಚುತ್ತಿದೆ. ಅದಕ್ಕೆ ತಕ್ಕಂತೆ ಸಾಮರ್ಥ್ಯ ಹೆಚ್ಚುತ್ತಿಲ್ಲ.

ನಮ್ಮಲ್ಲಿ ಅಧಿಕಾರಶಾಹಿ ಬೃಹತ್ತಾಗಿ ಕಾಣುತ್ತದೆ. ಆದರೆ ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ನೌಕರರ ಸಂಖ್ಯೆ ಕಡಿಮೆ. ಭಾರತದಲ್ಲಿ ಪ್ರತಿ ಸಾವಿರ ಜನರಿಗೆ ಕೇವಲ 16 ಜನ ಸಾರ್ವಜನಿಕ ನೌಕರರಿದ್ದಾರೆ. ಚೀನಾದಲ್ಲಿ ಅವರ ಸಂಖ್ಯೆ 57 ಇದೆ. ಅಮೇರಿಕೆಯಲ್ಲಿ ಸಾರ್ವಜನಿಕ ನೌಕರರ ಸಂಖ್ಯೆ 77. ಬಹುತೇಕ ಇಲಾಖೆಗಳಲ್ಲಿ ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ಜೊತೆಗೆ ನೌಕರರ ಬದ್ಧತೆಯ ಕೊರತೆ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಶೇಕಡ 25ರಷ್ಟು ಅಧ್ಯಾಪಕರು, ಶೇಕಡ 40ರಷ್ಟು ವೈದ್ಯರು ಕೆಲಸಕ್ಕೆ ಹಾಜರಾಗುವುದಿಲ್ಲ. ರಾಜಕಾರಣಿಗಳು ತಮ್ಮ ಸಂಕುಚಿತ ಉದ್ದೇಶಗಳಿಗಾಗಿ ಅಧಿಕಾರಶಾಹಿಯನ್ನು ಬಳಸಿಕೊಳ್ಳುತ್ತಾರೆ. ಯಾವಾಗಲೂ ತಮ್ಮ ನಿಯಂತ್ರಣದಲ್ಲಿರಬೇಕೆಂದು ಬಯಸುತ್ತಾರೆ. ದಕ್ಷ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸುತ್ತಾರೆ. ಇವೆಲ್ಲಾ ಅವರ ಉತ್ಸಾಹವನ್ನು ಕುಗ್ಗಿಸುತ್ತದೆ. ಹಾಗಾಗಿ ಅವರು ಯಾವುದೇ ರಿಸ್ಕ್ ತೆಗೆದುಕೊಳ್ಳದೆ ಸುಮ್ಮನೆ ಇದ್ದು ಹೋಗುವುದಕ್ಕೆ ಬಯಸುತ್ತಾರೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ರಿಸ್ಕ್ ತೆಗೆದುಕೊಳ್ಳಬೇಕಾಗುತ್ತದೆ. ಸ್ವಯಂಪ್ರೇರಿತವಾಗಿ, ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಅಂತಹ ವಾತಾವರಣ ನಿರ್ಮಾಣವಾದರೆ ಅಧಿಕಾರಶಾಹಿಯೂ ಹೆಚ್ಚು ಉತ್ಪಾದಕವಾಗುತ್ತದೆ.

**ಹಣ ಖರ್ಚು ಮಾಡಿದರೆ ಸಾಲದು, ಜನರಿಗೆ ಒಳ್ಳೆಯದಾಗಬೇಕು**

ಭಾರತ ಹೆಚ್ಚು ವೇಗವಾಗಿ ಅಭಿವೃದ್ಧಿಯಾಗಬೇಕು. ಅದಕ್ಕಾಗಿ ಸರ್ಕಾರ ಬಂಡವಾಳ ಹೂಡಬೇಕು. ಆದರೆ ವೆಚ್ಚವನ್ನು ಹೆಚ್ಚಿಸಿದರೆ ಬೆಳವಣಿಗೆ ಆಗಿಬಿಡುವುದಿಲ್ಲ. ವೆಚ್ಚ ಮಾಡುವ ಪ್ರತಿ ರೂಪಾಯಿ ಪರಿಣಾಮಕಾರಿಯಾಗಿ ಬಳಕೆಯಾಬೇಕು. ಯೋಜನೆಗೆ ಎಷ್ಟು ಹಣ ಖರ್ಚು ಮಾಡಿದೆವು ಎನ್ನುವುದನ್ನು ಸರ್ಕಾರಗಳು ಯೋಚಿಸುತ್ತವೆ. ಎಷ್ಟು ಶಾಲೆಗಳನ್ನು ಕಟ್ಟಿದೆವು ಅನ್ನುವುದನ್ನು ಲೆಕ್ಕಹಾಕುತ್ತವೆ. ಆದರೆ ಮಕ್ಕಳು ಎಷ್ಟು ಕಲಿತರು ಅನ್ನುವುದನ್ನು ಯೋಚಿಸುವುದಿಲ್ಲ. ಮಾಡುವ ಖರ್ಚಿನಿಂದ ಜನರಿಗೆ ಎಷ್ಟರ ಮಟ್ಟಿಗೆ ಪ್ರಯೋಜನವಾಯಿತು ಅನ್ನುವುದನ್ನು ತಿಳಿದುಕೊಳ್ಳಬೇಕು. ಅದಕ್ಕಾಗಿ ಪರಿಣಾಮವನ್ನು ಆಧರಿಸಿದ ಬಜೆಟ್, ಅವಶ್ಯಕ ಮಾಹಿತಿಗಳ ಸಂಗ್ರಹ, ಸಿಬ್ಬಂದಿಗಳ ಸೂಕ್ತ ನಿರ್ವಹಣೆ, ಸಕಾಲಕ್ಕೆ ಹಣ ಬಿಡುಗಡೆ, ಯೋಜನೆಗಳ ಮೌಲ್ಯಮಾಪನ, ರಾಜ್ಯಗಳಿಗೆ ಸ್ವಾಯತ್ತತೆ, ಆಡಳಿತ ಸಾಮರ್ಥ್ಯದ ಬಲವರ್ಧನೆ ಇವೆಲ್ಲಾ ಆಗಬೇಕು. ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಬೇಕು. ನಿಖರವಾದ ದತ್ತಾಂಶ ಇದ್ದಾಗ ಸರ್ಕಾರಕ್ಕೆ ನೀತಿಗಳನ್ನು ರೂಪಿಸುವುದಕ್ಕೆ ಮತ್ತು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಯಾವುದೇ ಹೊಸ ಯೋಜನೆಯನ್ನು ಜಾರಿಗೆ ತರುವ ಮೊದಲು, ಅದನ್ನು ಸಣ್ಣ ಮಟ್ಟದಲ್ಲಿ ಪ್ರಯೋಗಿಸಿ ನೋಡಬೇಕು. ಅದರ ಆಧಾರದ ಮೇಲೆ ದೊಡ್ಡ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಬೇಕು. ಯೋಜನೆಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಸಾರ್ವಜನಿಕರಿಗೆ ಮುಕ್ತವಾಗಿ ಲಭ್ಯವಿರಬೇಕು. ಆಗ ಅವರು ಸರ್ಕಾರವನ್ನು ಪ್ರಶ್ನಿಸಬಹುದು. ಆಗ ಸರ್ಕಾರದ ಜವಾಬ್ದಾರಿ ಹೆಚ್ಚುತ್ತದೆ. ಪ್ರಜಾಪ್ರಭುತ್ವ ಬಲಗೊಳ್ಳುತ್ತದೆ.

**ತೆರಿಗೆ ಸಂಗ್ರಹವೂ ಪರಿಣಾಮಕಾರಿಯಾಗಬೇಕು**

ಅಭಿವೃದ್ಧಿಯ ವೇಗ ಹೆಚ್ಚಬೇಕಾದರೆ ಉತ್ತಮ ಮೂಲಸೌಕರ್ಯ, ಸಾರ್ವಜನಿಕ ಸೇವೆ, ಸೌಲಭ್ಯ ಇವೆಲ್ಲಾ ಬೇಕಾಗುತ್ತವೆ. ತಕ್ಕ ಆದಾಯವಿಲ್ಲದೆ ಹೋದರೆ ಇದು ಸಾಧ್ಯವಾಗುವುದಿಲ್ಲ. ತೆರಿಗೆ ಸಂಗ್ರಹಣೆ ಪರಿಣಾಮಕಾರಿಯಾಗಿ ಆಗಬೇಕು. ತೆರಿಗೆ ಸಂಗ್ರಹಿಸುವ ಹಕ್ಕು ಮತ್ತು ಅಧಿಕಾರ ಇರುವುದು ಸರ್ಕಾರಗಳಿಗೆ ಮಾತ್ರ. ತೆರಿಗೆ ಇಲಾಖೆಯಲ್ಲಿರುವ ಸಮಸ್ಯೆಗಳನ್ನು ನೀಗಿಸಿಕೊಂಡು, ಯಾವುದೇ ಹಂತದಲ್ಲೂ ಸೋರಿಕೆಯಾಗದಂತೆ ಗರಿಷ್ಠ ತೆರಿಗೆ ಸಂಗ್ರಹವಾಗಬೇಕು. ಅಲ್ಲೂ ಸಿಬ್ಬಂದಿ ಕೊರತೆ, ಮಾಹಿತಿ ಕೊರತೆ, ಭ್ರಷ್ಟಾಚಾರ ಇವೆಲ್ಲಾ ಧಾರಾಳವಾಗಿದೆ. ಹಾಗಾಗಿ ವಿಪರೀತ ಸೋರಿಕೆ ಇದೆ. ಎಷ್ಟೋ ತೆರಿಗೆ ಸಂಗ್ರಹವಾಗದೆ ಉಳಿದಿದೆ. ಮೌಲ್ಯಮಾಪನದಲ್ಲೂ ಅಕ್ರಮಗಳು ನಡೆಯುತ್ತಿವೆ. ಇವೆಲ್ಲಾ ನಿಂತರೆ ಸಂಗ್ರಹ ಸುಧಾರಿಸುತ್ತದೆ. ಹಾಗೆಯೇ ಮದ್ಯಪಾನ ನಿಷೇಧ ಒಳ್ಳೆಯ ಕ್ರಮವೇನಲ್ಲ. ಅದರಿಂದ ಸರ್ಕಾರದ ಆದಾಯ ಕಡಿಮೆಯಾಗುತ್ತದೆ. ಕಳ್ಳಭಟ್ಟಿಯಿಂದ ಸಾವುನೋವು ಹೆಚ್ಚುತ್ತದೆ. ಬದಲಿಗೆ ಮದ್ಯಪಾನವನ್ನೇ ಕ್ರಮಬದ್ಧಗೊಳಿಸುವುದು ಒಳ್ಳೆಯದು. ಬರುವ ಹಣವನ್ನು ಮಹಿಳೆಯರ ಕಲ್ಯಾಣಕ್ಕೆ ಬಳಸಬಹುದು. ಜೊತೆಗೆ ಶ್ರೀಮಂತ ರೈತರ ಮೇಲೆ ತೆರಿಗೆ ಹಾಕುವುದು ಕೂಡ ಸೂಕ್ತ. ಜೊತೆಗೆ ಹಣ ಪೋಲು ಮಾಡುವುದು

ನಿಂತು ಸಾರ್ವಜನಿಕ ಅನುಕೂಲಕ್ಕೆ, ಅಭಿವೃದ್ಧಿಗೆ ಬಳಕೆಯಾಗತೊಡಗಿದರೆ ಜನರಿಗೂ ಸರ್ಕಾರದ ಮೇಲೆ ನಂಬಿಕೆ ಮೂಡಿ, ಪ್ರಾಮಾಣಿಕವಾಗಿ ತೆರಿಗೆ ಕಟ್ಟುತ್ತಾರೆ. ಭಾರತದ ಅಭಿವೃದ್ಧಿಯೂ ವೇಗ ಪಡೆದುಕೊಳ್ಳುತ್ತದೆ.

**ಅಭಿವೃದ್ಧಿಯಾಗಬೇಕಾದರೆ ವಿಕೇಂದ್ರೀಕರಣ ತೀವ್ರವಾಗಬೇಕು**

ನಾವು ಒಪ್ಪಿಕೊಂಡಿರುವ ಒಕ್ಕೂಟ ವ್ಯವಸ್ಥೆ ಅಭಿವೃದ್ಧಿಗೆ ಪೂರಕವಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸರ್ಕಾರಗಳು ಮುಖ್ಯವಾಗಿ ಕಾನೂನು ರಚನೆ, ನೀತಿ–ನಿಯಮಗಳ ರೂಪಿಸೋದು, ಯೋಜನೆಗಳ ವಿನ್ಯಾಸ ಮಾಡೋದು ಇವೆಲ್ಲವನ್ನೂ ಮಾಡುತ್ತವೆ. ಈ ನೀತಿ ಮತ್ತು ಯೋಜನೆಗಳನ್ನು 'ಸ್ಥಳೀಯ' ಸರ್ಕಾರಗಳು ಜಾರಿಗೊಳಿಸುತ್ತವೆ. ಇದು ಒಕ್ಕೂಟ ವ್ಯವಸ್ಥೆಯ ದೊಡ್ಡ ಅನುಕೂಲ. ಒಕ್ಕೂಟ ವ್ಯವಸ್ಥೆಗಳಿಂದಾಗಿ ನಮಗೆ ದೊಡ್ಡ ದೇಶಗಳಿಗಿರುವ ಲಾಭವೂ ಇದೆ. ಹಾಗೆಯೇ ಸಣ್ಣ ದೇಶಗಳಿಗಿರುವ ಅನುಕೂಲವೂ ಇದೆ.

ದೇಶಗಳು ದೊಡ್ಡದಿದ್ದರೆ ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ರಾಷ್ಟ್ರೀಯ ಭದ್ರತೆಯನ್ನು ಕಾಪಾಡಿಕೊಳ್ಳಬಹುದು. ವಿಶಾಲವಾದ ಮಾರುಕಟ್ಟೆಯಿಂದ ಆರ್ಥಿಕತೆಯ ವ್ಯಾಪಕ ಬೆಳವಣಿಗೆಗೂ ಅನುಕೂಲವಾಗುತ್ತದೆ. ಹಾಗೆಯೇ ನೈಸರ್ಗಿಕ ವಿಕೋಪಗಳನ್ನು ಹೆಚ್ಚು ಸುಲಭವಾಗಿ ನಿರ್ವಹಿಸಬಹುದು. ಹಾಗೆಯೇ ಸಣ್ಣ ದೇಶಗಳು ಹೆಚ್ಚು ಸಕ್ರಿಯವಾಗಿರುತ್ತವೆ. ನಾಯಕರಿಗೆ ಜನರೊಂದಿಗೆ ಸ್ಪಂದಿಸುವುದು ಸುಲಭವಾಗುತ್ತದೆ. ಸಾಮಾನ್ಯವಾಗಿ ಸಣ್ಣ ದೇಶಗಳಲ್ಲಿ ಆರ್ಥಿಕ ಬೆಳವಣಿಗೆ ಸುಲಭ. ವಿಶ್ವದ 10 ಅತಿ ಶ್ರೀಮಂತ ದೇಶಗಳ ಪೈಕಿ 9 ದೇಶಗಳ ಜನಸಂಖ್ಯೆ 1 ಕೋಟಿಗಿಂತ ಕಡಿಮೆಯಿದೆ.

ಆದರೆ ಒಕ್ಕೂಟ ವ್ಯವಸ್ಥೆ ಪರಿಣಾಮಕಾರಿಯಾಗಬೇಕಾದರೆ ವಿವಿಧ ಸ್ತರಗಳ ನಡುವೆ ಜವಾಬ್ದಾರಿಗಳು, ಸಂಪನ್ಮೂಲಗಳ ಹಂಚಿಕೆ ಇತ್ಯಾದಿಗಳ ಬಗ್ಗೆ ಸ್ಪಷ್ಟತೆಯಿರಬೇಕು. ಅವುಗಳ ನಡುವೆ ಪರಸ್ಪರ ಸಮನ್ವಯ ಸಾಧ್ಯವಾಗಬೇಕು. ಅಧಿಕಾರ ಹಾಗೂ ಜವಾಬ್ದಾರಿ ಹೆಚ್ಚೆಚ್ಚು ವಿಕೇಂದ್ರೀಕರಣಗೊಳ್ಳಬೇಕು.

ಭಾರತದಲ್ಲಿ ಆಡಳಿತವು ಅತಿಯಾಗಿ ಕೇಂದ್ರೀಕೃತವಾಗಿದೆ. ಹೆಚ್ಚಿನ ಅಧಿಕಾರವು ಕೇಂದ್ರ ಸರ್ಕಾರದ ಕೈಯಲ್ಲಿದೆ. ತೆರಿಗೆ ಸಂಗ್ರಹವನ್ನು ಬಹುತೇಕ ಕೇಂದ್ರವೇ ಮಾಡುತ್ತದೆ. ಜೊತೆಗೆ ಸೆಸ್ ಮತ್ತು ಸರ್ಚಾರ್ಜ್‌ಗಳ ಮೂಲಕವೂ ದೊಡ್ಡ ಮೊತ್ತವನ್ನು ಸಂಗ್ರಹಿಸಿ ತನ್ನ ಬಳಿಯೇ ಇಟ್ಟುಕೊಳ್ಳುತ್ತದೆ. ಕೇಂದ್ರ ಪುರಸ್ಕೃತ ಯೋಜನೆಗಳು ರಾಜ್ಯಗಳ ಸ್ವಾತಂತ್ರ್ಯವನ್ನು ಇನ್ನಷ್ಟು ಕಸಿದುಕೊಳ್ಳುತ್ತವೆ. ಸ್ಥಳೀಯ ಸರ್ಕಾರಗಳ ಸ್ಥಿತಿ ಇನ್ನೂ ಕೆಟ್ಟದಾಗಿದೆ.

ಭಾರತ ಅತಿ ಹೆಚ್ಚು ಜನಸಂಖ್ಯೆ ಇರುವ ದೇಶ. ಒಟ್ಟು ಜನಸಂಖ್ಯೆ 140 ಕೋಟಿ ದಾಟಿದೆ. ಆಫ್ರಿಕಾ ಖಂಡದ 54 ದೇಶಗಳ ಒಟ್ಟು ಜನಸಂಖ್ಯೆಗಿಂತ ಇದು ಹೆಚ್ಚಿದೆ. ಕೇಂದ್ರೀಕೃತ ವ್ಯವಸ್ಥೆ ಇಲ್ಲಿ ಪರಿಣಾಮಕಾರಿಯಾಗಿರುವುದಕ್ಕೆ ಸಾಧ್ಯವಿಲ್ಲ. ರಾಜ್ಯಗಳು ಸಣ್ಣದಾದಷ್ಟು ಆಡಳಿತ ಮತ್ತು ಅಭಿವೃದ್ಧಿ ಉತ್ತಮವಾಗಿರುತ್ತದೆ. ಸಣ್ಣ ರಾಜ್ಯಗಳಲ್ಲಿ ರಾಜಧಾನಿಯು ಜನರಿಗೆ ಹತ್ತಿರವಿರುತ್ತದೆ, ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಯೋಜನೆಗಳನ್ನು ರೂಪಿಸಬಹುದು. ಸರ್ಕಾರ ಸಣ್ಣ ರಾಜ್ಯಗಳನ್ನು ರೂಪಿಸುವ ಬಗ್ಗೆಯೂ ಚಿಂತಿಸಬೇಕು.

**ಖಾಸಗಿ ಒಳ್ಳೆಯದೋ ಸರ್ಕಾರಿ ವ್ಯವಸ್ಥೆ ಇರಲೋ**

ಅಭಿವೃದ್ಧಿ ಅಂದಕೂಡಲೆ ಖಾಸಗಿ ವರ್ಸಸ್ ಸರ್ಕಾರಿ ಚರ್ಚೆ ಶುರುವಾಗುತ್ತದೆ. ಅಮರ್ತ್ಯ ಸೇನ್ ಸರ್ಕಾರಿ ವ್ಯವಸ್ಥೆಯನ್ನು ಬಲಪಡಿಸಬೇಕೆನ್ನುತ್ತಾರೆ. ಅರವಿಂದ್ ಪನಗಾರಿಯಾ ಅವರಿಗೆ ಸರ್ಕಾರಿ ವ್ಯವಸ್ಥೆಯ ಕಾರ್ಯಕ್ಷಮತೆಯ ಬಗ್ಗೆ ಅನುಮಾನ. ಅವರು ಎಲ್ಲವನ್ನೂ ಖಾಸಗಿಯವರಿಗೆ ಒಪ್ಪಿಸುವುದರ ಬಗ್ಗೆ ಉತ್ಸುಕರಾಗಿದ್ದಾರೆ. ಕಾರ್ತಿಕ್ ಯಾವಾಗಲೂ ಮಧ್ಯ ಮಾರ್ಗದವರು. ಅವರು ಸರ್ಕಾರ ಮತ್ತು ಮಾರುಕಟ್ಟೆ ಪರಸ್ಪರ ಪೂರಕವಾಗಿ ಕೆಲಸ ಮಾಡಬೇಕು. ಖಾಸಗಿ ವ್ಯವಸ್ಥೆಯ ಜೊತೆಗೆ, ಸರ್ಕಾರಿ ವ್ಯವಸ್ಥೆಯನ್ನು ಬಲಪಡಿಸುವುದು ಅತ್ಯಗತ್ಯ. ಸರ್ಕಾರಿ ವ್ಯವಸ್ಥೆ ಉತ್ತಮಗೊಂಡರೆ, ಖಾಸಗಿಯವರ ಮೇಲೆ ಒತ್ತಡ ಬರುತ್ತದೆ. ಅಲ್ಲೂ ಸೇವೆ ಇನ್ನಷ್ಟು ಸುಧಾರಿಸುತ್ತದೆ ಅನ್ನುತ್ತಾರೆ. ಸರ್ಕಾರ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ 'ಉತ್ತಮ ಗುಣಮಟ್ಟದ ಸರ್ಕಾರಿ ಸೇವೆ' ಸಿಗುವಂತೆ ನೋಡಿಕೊಳ್ಳಬೇಕು. ಅತ್ಯುತ್ತಮ ಶಾಲೆ ಮತ್ತು ಆಸ್ಪತ್ರೆಗಳನ್ನು ಸರ್ಕಾರ ಕಟ್ಟಿ ಬೆಳೆಸಬೇಕು. ಹಾಗೆಯೇ ಸರ್ಕಾರಿ ಸೇವೆಯಲ್ಲಿ ತೃಪ್ತಿಯಿಲ್ಲದವರಿಗೆ 'ವೋಚರ್'ಗಳನ್ನು ನೀಡಿ, ಖಾಸಗಿ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನೂ ನೀಡಬೇಕು. ಇದರಿಂದ ಬಡವರಿಗೂ ಸ್ವಾತಂತ್ರ್ಯ ಸಿಗುತ್ತದೆ ಮತ್ತು ಗುಣಮಟ್ಟ ಕಾಯ್ದುಕೊಳ್ಳುವ ಒತ್ತಡ ಸರ್ಕಾರಿ ವ್ಯವಸ್ಥೆಯಲ್ಲಿಯೂ ಹೆಚ್ಚುತ್ತದೆ.

ಸರ್ಕಾರಿ ವ್ಯವಸ್ಥೆಗಳ ಕಾರ್ಯಕ್ಷಮತೆ ಹೆಚ್ಚಿದಷ್ಟೂ ಹೆಚ್ಚಿನ ಅಭಿವೃದ್ಧಿ ಸಾಧ್ಯವಾಗುತ್ತದೆ. ಅಭಿವೃದ್ಧಿಯಾದೊಡನೆ ಮಾನವ ಅಭಿವೃದ್ಧಿ ಸಾಧ್ಯವಾಗಿಬಿಡುವುದೇ? ಇದು ಕೂಡ ವಿವಾದಾಸ್ಪದ ವಿಷಯ. ಬೆಳವಣಿಗೆ ಮೊದಲೋ ಅಭಿವೃದ್ಧಿ ಮೊದಲೋ ಅನ್ನುವುದರ ಬಗ್ಗೆ ಅಮರ್ತ್ಯ ಸೇನ್ ಮತ್ತು ಜಗದೀಶ್ ಭಗವತಿಯವರ ನಡುವಿನ ವಿವಾದ ಹಳೆಯದು. ಆರ್ಥಿಕ ಅಭಿವೃದ್ಧಿಯಾಗದೆ ಮಾನವ ಅಭಿವೃದ್ಧಿ ಸಾಧ್ಯವಿಲ್ಲ ಅನ್ನುವುದು ಜಗದೀಶ್ ಭಗವತಿ ಅವರ ನಂಬಿಕೆ. 1980ರಲ್ಲಿ ಭಾರತ ಮತ್ತು ಚೀನಾದ ಜಿಡಿಪಿ ಒಂದೇ ಮಟ್ಟದಲ್ಲಿ ಇತ್ತು. ಆದರೆ ಕ್ರಮೇಣ ಚೀನಾದ ಜಿಡಿಪಿ ವೇಗವಾಗಿ ಬೆಳೆಯುತ್ತಾ ಹೋದಂತೆ ಅಲ್ಲಿ ಮಾನವ ಅಭಿವೃದ್ಧಿ ವೇಗವಾಗಿ ಬೆಳೆಯುವುದಕ್ಕೆ ಸಾಧ್ಯವಾಯಿತು ಅನ್ನುವುದು ಅವರ ವಾದ. ಅವರ ದೃಷ್ಟಿಯಲ್ಲಿ ಸರ್ಕಾರವು ಮೊದಲು ಮೂಲಸೌಕರ್ಯ (ರಸ್ತೆ, ವಿದ್ಯುತ್), ಕಾನೂನು ಸುವ್ಯವಸ್ಥೆ ಮತ್ತು ಖಾಸಗಿ ಹೂಡಿಕೆಗೆ ಮಹತ್ವ ನೀಡಬೇಕು. ಜಿಡಿಪಿ ಬೆಳೆದು ಜನರ ಕೈಗೆ ಹಣ ಸಿಕ್ಕೊಡನೆ, ಉತ್ತಮ ಶಿಕ್ಷಣ ಮತ್ತು ಆರೋಗ್ಯ ಇವೆಲ್ಲಾ ಸಾಧ್ಯವಾಗುತ್ತದೆ.

ಅಮರ್ತ್ಯ ಸೇನ್ ಮತ್ತು ಜೀನ್ ಡ್ರೇಜ್ ವಾದ ಇದಕ್ಕೆ ವಿರುದ್ಧವಾಗಿದೆ. ಅವರು ಹೇಳುವುದು ಮಾನವನ ಅಭಿವೃದ್ಧಿಗಾಗಿ ದೇಶ ಶ್ರೀಮಂತವಾಗುವ ತನಕ ಕಾಯಬೇಕಿಲ್ಲ. ವಿಯೆಟ್ನಾಂ, ಶ್ರೀಲಂಕಾ ಇಂತಹ ದೇಶಗಳಲ್ಲಿ, ಅಷ್ಟೇ ಏಕೆ, ನಮ್ಮ ಕೇರಳದಲ್ಲಿ ಆದಾಯ ಕಡಿಮೆ ಇತ್ತು. ಆದರೂ ಅವರೆಲ್ಲ ಶಿಕ್ಷಣ ಮತ್ತು ಆರೋಗ್ಯಕ್ಕೆ ಮಹತ್ವ ನೀಡಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಅಮೇರಿಕದ ಜಿಡಿಪಿ 15 ಪಟ್ಟು ಹೆಚ್ಚಿದ್ದರೂ, ಆಯುರ್ನಿರೀಕ್ಷೆಯ ವಿಚಾರದಲ್ಲಿ ಕೇರಳ ಮತ್ತು ಶ್ರೀಲಂಕಾ ಅಮೇರಿಕಕ್ಕೆ ಸರಿಸಮಾನವಾಗಿವೆ! ಉತ್ತಮ ಆರೋಗ್ಯ ಮತ್ತು ಶಿಕ್ಷಣ ಪಡೆದ ಪ್ರಜೆಗಳು ಹೆಚ್ಚು ಉತ್ಪಾದನಾಶೀಲರಾಗಿರುತ್ತಾರೆ. ದಕ್ಷಿಣ ಕೊರಿಯಾ, ಸಿಂಗಪುರ, ಚೀನಾ ದೇಶಗಳು ಮೊದಲು ಶಿಕ್ಷಣ ಮತ್ತು ಆರೋಗ್ಯದ ಮೇಲೆ ಹೂಡಿಕೆ ಮಾಡಿದ್ದರಿಂದಲೇ ಅವು ಆರ್ಥಿಕವಾಗಿ ವೇಗವಾಗಿ ಬೆಳೆದವು. ಅಂದರೆ, ಮಾನವ ಅಭಿವೃದ್ಧಿಗೆ ಒತ್ತು ನೀಡುವುದು ಆರ್ಥಿಕತೆಗೂ ಒಳ್ಳೆಯದು ಅನ್ನುವುದು ಸೇನ್ ಅವರ ವಾದ.

ಕಾರ್ತಿಕ್ ಅವರದ್ದು ಮಧ್ಯಮ ಮಾರ್ಗ. ನಮಗೆ ಇವೆರಡೂ ಮುಖ್ಯ. ನಾವು ರಸ್ತೆಗೆ ಹಣ ಹಾಕುತ್ತೇವೋ ಅಥವಾ ಶಾಲೆಗೆ ಹಾಕುತ್ತೇವೋ ಅನ್ನುವುದು ಮುಖ್ಯವಲ್ಲ. ಎಷ್ಟು 'ಪರಿಣಾಮಕಾರಿಯಾಗಿ' ಖರ್ಚು ಮಾಡುತ್ತೇವೆ ಅನ್ನುವುದು ಮುಖ್ಯ. ಇರುವ ಆದಾಯದಲ್ಲೇ ಅತ್ಯುತ್ತಮ ಅಭಿವೃದ್ಧಿ ಸಾಧಿಸುವುದು ಹೇಗೆ, ಎಂಬುದನ್ನು ನಾವು ಗಮನಿಸಬೇಕು. ಕಾರ್ತಿಕ್ ಅವರ ವಾದ ಸರಳ. ನಾವು ಶಿಕ್ಷಣ, ಆರೋಗ್ಯ ಇವುಗಳ ಮೇಲೆ ಮಾಡುತ್ತಿರುವ ಖರ್ಚನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಿದರೆ ಕಲಿಕೆಯ ಪ್ರಕ್ರಿಯೆಯನ್ನು ಸುಧಾರಿಸಬಹುದು. ಜನರಿಗೆ ಒಳ್ಳೆಯ ಆರೋಗ್ಯ ಸೌಲಭ್ಯವನ್ನು ಕೊಡಬಹುದು.

ಕೊನೆಯದಾಗಿ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು 1950ರಲ್ಲಿ ನೀಡಿದ ಎಚ್ಚರಿಕೆಯ ಮಾತುಗಳನ್ನು ನೆನಪಿಸಿಕೊಳ್ಳಬೇಕು. ನಾವು ರಾಜಕೀಯವಾಗಿ 'ಒಬ್ಬ ವ್ಯಕ್ತಿಗೆ ಒಂದು ಮತ, ಒಂದು ಮೌಲ್ಯ' ಎಂಬ ಸಮಾನತೆಯ ಬದುಕಿಗೆ ಪ್ರವೇಶಿಸುತ್ತಿದ್ದರೂ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನತೆಯ ಬದುಕನ್ನು ಬದುಕುತ್ತಿದ್ದೇವೆ. ಈ ವೈರುಧ್ಯವನ್ನು ಶೀಘ್ರವಾಗಿ ನಿವಾರಿಸಿಕೊಳ್ಳದಿದ್ದರೆ, ಅಸಮಾನತೆಯಿಂದ ನರಳುತ್ತಿರುವ ಜನರೇ ಈ ರಾಜಕೀಯ ಪ್ರಜಾಸತ್ತೆಯ ಭವ್ಯ ರಚನೆಯನ್ನು ಛಿದ್ರಗೊಳಿಸುತ್ತಾರೆ. ಈ ಅಸಮಾನತೆಯನ್ನು ಹೋಗಲಾಡಿಸಲು ನಮಗೆ ಬೇಕಿರುವುದು ಬಜೆಟ್ ಗಾತ್ರವನ್ನು ದೊಡ್ಡದು ಮಾಡುವುದಲ್ಲ, ಬದಲಿಗೆ ವೆಚ್ಚ ಮಾಡುವ ಪ್ರತಿ ರೂಪಾಯಿಯೂ ಜನರ ಜೀವನವನ್ನು ನಿಜವಾಗಿ ಸುಧಾರಿಸುವಂತೆ ಮಾಡುವ ಬಲಿಷ್ಠ ಮತ್ತು ಸಮರ್ಥ ಸಾರ್ವಜನಿಕ ಅಧಿಕಾರಶಾಹಿ ಯಂತ್ರ. ಆ ಹಳೆಯ 1950ರ ಕಾರನ್ನು ಅಪ್‌ಗ್ರೇಡ್ ಮಾಡಿದಾಗ ಮಾತ್ರ 'ವಿಕಸಿತ ಭಾರತ'ದ ಕನಸು ನನಸಾಗಲು ಸಾಧ್ಯ.

ಭಾರತೀಯ ಅಭಿವೃದ್ಧಿಗೆ ಸಂಬಂಧಿಸಿದ ಚಿಂತನೆಯ ಹಲವು ಮಗ್ಗುಲುಗಳನ್ನು ತಿಳಿಯುವುದಕ್ಕೆ ಇದೊಂದು ಉಪಯುಕ್ತ ಕೃತಿ. ಆಸಕ್ತರು ಗಮನಿಸಬೇಕಾದ ಪುಸ್ತಕ.


# ಅಮರ್ತ್ಯ ಸೇನ್- ಬದುಕು ಹಾಗು ಆಲೋಚನೆಗಳು-೬

ಅಮರ್ತ್ಯ ಸೇನ್ ನಮ್ಮ ನಡುವಿನ ಅಪರೂಪದ ಅರ್ಥಶಾಸ್ತ್ರಜ್ಞ, ತತ್ತ್ವಶಾಸ್ತ್ರಜ್ಞ, ಮತ್ತು ಚಿಂತಕ. ಅವರ ಅಧ್ಯಯನದ ಹರವು ತೀರಾ ವಿಶಾಲ. ಸೇನ್ ಅವರ ಅಧ್ಯಯನ ಒಂದು ವಿಷಯಕ್ಕೆ ಸೀಮಿತವಾಗಿಲ್ಲ. ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಸಮಾಜವು ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳುತ್ತದೆ ಎಂದು ಚಿಂತಿಸಲು ಸಾಮಾಜಿಕ ಆಯ್ಕೆಯ ಸಿದ್ಧಾಂತ, ಜನರ ಏಳಿಗೆಯನ್ನು ಅಳೆಯುವ ಕಲ್ಯಾಣ ಅರ್ಥಶಾಸ್ತ್ರ, ಹಸಿವು ಹಾಗು ಬಡತನಕ್ಕೆ ಆಹಾರದ ಕೊರತೆ ಕಾರಣವಲ್ಲ, ಜನರ ಆಯ್ಕೆ ಹಾಗೂ ಹಕ್ಕುಗಳ ಕೊರತೆ ಕಾರಣ ಎನ್ನುವ ಕ್ಷಾಮ ಮತ್ತು ಬಡತನವನ್ನು ಕುರಿತ ಚಿಂತನೆ, ಒಬ್ಬ ವ್ಯಕ್ತಿಗೆ ಏನು ಮಾಡಲು ಸಾಧ್ಯ ಮತ್ತು ಅವನು ಏನಾಗಲು ಬಯಸುತ್ತಾನೆ ಎಂಬ ಸಾಮರ್ಥ್ಯವೇ ನಿಜವಾದ ಅಭಿವೃದ್ಧಿ ಎನ್ನುವ ಸಾಮರ್ಥ್ಯದ ದೃಷ್ಟಿಕೋನ ಹೀಗೆ ಹಲವು ಕ್ಷೇತ್ರಗಳಲ್ಲಿ ಮೌಲಿಕ ಸಂಶೋಧನೆ ಮಾಡಿದ್ದಾರೆ.

ವೈಯಕ್ತಿಕ ಮೌಲ್ಯಗಳನ್ನು ಸಮಾಜದ ಒಟ್ಟಾರೆ ನಿರ್ಧಾರಗಳಾಗಿ ಹೇಗೆ ಬದಲಿಸಬಹುದು ಎಂಬುದನ್ನು ಅವರು ವಿವರಿಸಿದರು. ವ್ಯಕ್ತಿಗಳ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬಾರದಂತೆ ಸಮಾಜವು ಹೇಗೆ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು ಎಂಬ ನಿಯಮಗಳನ್ನು ರೂಪಿಸಿದರು. ಬಡತನ ಮತ್ತು ಕ್ಷಾಮವನ್ನು ಅಳೆಯುವ ಹೊಸ ದಾರಿಗಳನ್ನು ತೋರಿಸಿಕೊಟ್ಟರು. ಈ ಕಾರಣಕ್ಕೆ ಅಮರ್ತ್ಯ ಸೇನ್ ಅವರಿಗೆ 1998ರಲ್ಲಿ ಅರ್ಥಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿ ನೀಡಲಾಯಿತು.
ಅವರ ಬಗ್ಗೆ ಕನ್ನಡದಲ್ಲಿರುವ ಬರಹಗಳು ತುಂಬಾ ಕಡಿಮೆ. ಅವರ ಬದುಕು ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವ ದೃಷ್ಟಿಯಿಂದ ಪ್ರಾರಂಭಿಸಿರುವ ಸರಣಿಯ ಐದನೆಯ ಭಾಗ ಇದು. ಇದರಲ್ಲಿ ಅವರ ಬರಗಾಲವನ್ನು ಕುರಿತ ಅಧ್ಯಯನವನ್ನು  ಪರಿಚಯಿಸಲಾಗಿದೆ.



# ಬರಗಾಲ ಮತ್ತು ಬಡತನ




ಬರಗಾಲ ಕುರಿತ ಅಮರ್ತ್ಯ ಸೇನ್ ಅವರ ಅಧ್ಯಯನ ಬರಗಾಲದ ಬಗ್ಗೆ ಇಲ್ಲಿಯವರೆಗೂ ಇದ್ದ ಗ್ರಹಿಕೆಯನ್ನೇ ಬದಲಿಸಿದೆ. ಬರಗಾಲಕ್ಕೆ ನಿಜವಾದ ಕಾರಣಗಳೇನು ಮತ್ತು ಅದನ್ನು ಹೇಗೆ ತಡೆಯಬಹುದು ಎಂಬುದನ್ನು ಅರ್ಥಮಾಡಿಕೊಳ್ಳಲು ಇವರು ಜಗತ್ತಿನಾದ್ಯಂತ ಸಂಭವಿಸಿದ ಹಲವು ಪ್ರಮುಖ ಬರಗಾಲಗಳನ್ನು ಪರಿಶೀಲಿಸಿದ್ದಾರೆ. ಪ್ರತಿಯೊಂದು ಬರಗಾಲದಲ್ಲೂ ಜನ ಪಡುವ ಕಷ್ಟ ಒಂದೇ ಬಗೆಯಿರುತ್ತದೆ. ಆದರೆ ಪ್ರತಿಯೊಂದು ಬರಗಾಲಕ್ಕೂ ಕಾರಣಗಳು ಮಾತ್ರ ಬೇರೆಯಾಗಿರುತ್ತವೆ. ಹಾಗಾಗಿ ಎಲ್ಲ ಕ್ಷಾಮಗಳಿಗೂ ಒಂದೇ ರೀತಿಯ ಪರಿಹಾರ ಸಾಧ್ಯವಿಲ್ಲ.

ವಿಶ್ವದ ಹಲವು ಕಡೆಗಳಲ್ಲಿ ಕ್ಷಾಮದಿಂದ ಕೋಟಿಗಟ್ಟಲೆ ಜನ ಸಾಯುತ್ತಾರೆ. ಕೋಟಿಗಟ್ಟಲೆ ಜನರ ಬದುಕು ನಾಶವಾಗುತ್ತಿದೆ. ಈ ಕ್ಷಾಮಕ್ಕೂ ಅರ್ಥಶಾಸ್ತ್ರಕ್ಕೂ ತುಂಬಾ ಹತ್ತಿರದ ಸಂಬಂಧವಿದೆ. ಆದರೆ ಸಾಮಾನ್ಯವಾಗಿ ಕ್ಷಾಮದ ವಿಶ್ಲೇಷಣೆಯ ಕೆಲಸವನ್ನು ಪರ್ತಕರ್ತರಿಗೆ, ಕೃಷಿತಜ್ಞರಿಗೆ, ಸಾಂಕ್ರಾಮಿಕರೋಗ ತಜ್ಞರಿಗೆ, ಆಡಳಿತಗಾರರಿಗೆ ಮತ್ತು ಇತ್ತೀಚೆಗೆ ಹುಟ್ಟಿಕೊಂಡಿರುವ ವಿಪತ್ತು ನಿರ್ವಹಣಾ ಪರಿಣತರಿಗೆ ಬಿಟ್ಟುಬಿಡಲಾಗಿದೆ. ಇವರೆಲ್ಲರೂ ತಮ್ಮ ಆಸಕ್ತಿಯ ವಲಯಗಳಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಕ್ಷಾಮಕ್ಕೆ ಸಂಬಂಧಿಸಿದಂತೆ ಉಪಯುಕ್ತ ದತ್ತಾಂಶಗಳನ್ನೂ ಮಾಹಿತಿಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಬೇಕಾದರೆ ಅರ್ಥಶಾಸ್ತ್ರಜ್ಞರು ಅವುಗಳನ್ನೆಲ್ಲಾ ಬಳಸಿಕೊಳ್ಳಬಹುದು. 19ನೇ ಶತಮಾನದಲ್ಲಿ ಕ್ಷಾಮಗಳ ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದ ವಸಾಹಾತು ಅಧಿಕಾರಿಗಳು ಮಾಡಿರುವ ವಿವರವಾದ ಅಧ್ಯಯನಗಳೂ ಇವೆ. ಅವರಲ್ಲಿ ಕೆಲವರಂತೂ ಅತ್ಯುತ್ತಮ ವರದಿಗಳನ್ನು ಸಿದ್ಧಪಡಿಸಿದ್ದಾರೆ. ವಿಪರ್ಯಾಸವೆಂದರೆ, ಎಷ್ಟೋ ಕ್ಷಾಮಗಳಿಗೆ ಅವರೇ ಕಾರಣಕರ್ತರು!

ಅರ್ಥಶಾಸ್ತ್ರಜ್ಞರು ವಿಶೇಷವಾಗಿ ಕ್ಷಾಮಗಳ ಬಗ್ಗೆ ಅಧ್ಯಯನ ಮಾಡಿಲ್ಲ. ಆಡಳಿತಗಾರರು ತಮ್ಮ ಕ್ಷಾಮ ನಿರ್ವಹಣೆಯ ಸಮಯದಲ್ಲಿ ಕೆಲವು ಆರ್ಥಿಕ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಅರ್ಥಮಾಡಿಕೊಂಡು ಬಳಸಿಕೊಂಡಿದ್ದರು. ಐರ್ಲೆಂಡ್, ಭಾರತ ಮತ್ತು ಚೀನಾದಲ್ಲಿ ಸಂಭವಿಸಿದ ಕ್ಷಾಮಗಳ ಸಂದರ್ಭದಲ್ಲಿ ಅರ್ಥಶಾಸ್ತ್ರಜ್ಞ ಆಡಮ್ ಸ್ಮಿತ್‌ನ ಆಲೋಚನೆಗಳಿಂದ ತೊಂದರೆಯಾಗಿದ್ದೇ ಹೆಚ್ಚು. ಇನ್ನು ರಾಬರ್ಟ್ ಮಾಲ್ಥಸ್ ಸರ್ಕಾರದ ನೀತಿಗಳನ್ನು ಅತ್ಯಂತ ಜಾಣ್ಮೆಯಿಂದ ಸಮರ್ಥಿಸಿಕೊಂಡಿದ್ದ. ಆದರೆ ಶ್ರೀಸಾಮಾನ್ಯನ ದೃಷ್ಟಿಕೋನದಿಂದ ನೋಡಿದಾಗ ಸರ್ಕಾರಿ ನೀತಿಗಳು ಅತ್ಯಂತ ಅವಿವೇಕದ ನೀತಿಗಳಾಗಿದ್ದವು.

1912ರಲ್ಲಿ ಗುಜರಾತಿನಲ್ಲಿ ಕ್ಷಾಮ ಪ್ರಾರಂಭವಾಗಿತ್ತು. ಆಗ ಮಾರುಕಟ್ಟೆಯ ವಹಿವಾಟಿನಲ್ಲಿ ಸರ್ಕಾರ ಮಧ್ಯಪ್ರವೇಶಿಸಬೇಕೆಂಬ ಸಲಹೆಯನ್ನು ಬಾಂಬೆಯ ಗವರ್ನರ್ ತಿರಸ್ಕರಿಸಿದ. ತನ್ನ ನಿಲುವಿನ ಸಮರ್ಥನೆಗೆ ಆಡಂ ಸ್ಮಿತ್‌ನ ಅಭಿಪ್ರಾಯಗಳನ್ನು ಬಳಸಿಕೊಂಡಿದ್ದ. ಆದರೆ ವಾರೆನ್ ಹೇಸ್ಟಿಂಗ್ಸ್ ಸರ್ಕಾರದ ಮಧ್ಯಪ್ರವೇಶದ ಪರವಾಗಿದ್ದ. ಆತ 1783ರ ಕ್ಷಾಮದಲ್ಲಿ ಸರ್ಕಾರದ ವ್ಯವಸ್ಥೆಯನ್ನು ಬಳಸಿಕೊಂಡು, ಬಂಗಾಳಕ್ಕೆ ಆಹಾರ ಸರಬರಾಜು ಮಾಡಿದ. ಅದಕ್ಕಾಗಿ ಆತನನ್ನು ತೀವ್ರವಾಗಿ ಟೀಕಿಸಲಾಗಿತ್ತು. ಹೇಸ್ಟಿಂಗ್ಸ್ ಆಡಂ ಸ್ಮಿತ್‌ನನ್ನು ಅರ್ಥಮಾಡಿಕೊಂಡಿಲ್ಲ ಎಂದು ಟೀಕಿಸಲಾಯಿತು. ಹಾಗೆಯೇ ಭಾರತೀಯ ನ್ಯಾಯಧೀಶರೊಬ್ಬರು ಧಾನ್ಯಗಳಿಗೆ ಗರಿಷ್ಠ ಬೆಲೆಯನ್ನು ಗೊತ್ತುಮಾಡಿದಾಗಲೂ ಅವರಿಗೆ ಮಾಲ್ಥಸ್‌ನ ಭಾಷಣ ಅರ್ಥವಾಗಿಲ್ಲ ಎಂದು ವ್ಯಂಗ್ಯ ಮಾಡಲಾಗಿತ್ತು.

ಸಾಮಾನ್ಯವಾಗಿ ಆಹಾರದ ಲಭ್ಯತೆಯ ಕೊರತೆ ಕ್ಷಾಮಕ್ಕೆ ಕಾರಣ ಎಂದು ಆಗಿನ ಬಹುತೇಕ ಅಧ್ಯಯನಗಳು ಹೇಳುತ್ತಿದ್ದವು. ಇದನ್ನು ಸೇನ್ 'ಆಹಾರ ಲಭ್ಯತೆಯಲ್ಲಿ ಇಳಿತ (ಫ್ಯಾಡ್ ಸಿದ್ಧಾಂತ) ಸಿದ್ಧಾಂತ' ಎನ್ನುತ್ತಾರೆ. ಮಾಲ್ಥಸ್ ಸೇರಿದಂತೆ ಹೆಚ್ಚಿನ ಅರ್ಥಶಾಸ್ತ್ರಜ್ಞರು ಇದನ್ನೇ ಹೇಳುತ್ತಿದ್ದರು. ಅರ್ಥಶಾಸ್ತ್ರಜ್ಞರಲ್ಲದವರೂ ಇದನ್ನೇ ಹೇಳುತ್ತಿದ್ದರು. ಜನ ಹಸಿವಿನಿಂದ ಸಾಯುತ್ತಿದ್ದಾರೆ ಎಂದರೆ 'ಆಹಾರ ಲಭ್ಯತೆಯ ಕೊರತೆ' ಇದೆ ಎಂದು ಭಾವಿಸುವುದು ಸಹಜ. ಆದರೆ ಇದೊಂದು ಉದ್ದೇಶಪೂರ್ವಕ ನೀತಿಯೂ ಆಗಿತ್ತು. ಅದನ್ನು ಬಳಸಿಕೊಂಡು ಜನರಿಗೆ ಆಹಾರ ದಕ್ಕದಂತೆ ಮಾಡಲಾಗಿತ್ತು.

ಬರ್ನಾರ್ಡ್ ಷಾ ಅವರ 'ಮ್ಯಾನ್ ಅಂಡ್ ಸೂಪರ್ ಮ್ಯಾನ್ ನಾಟಕದಲ್ಲಿ ಒಂದು ಸನ್ನಿವೇಶ ಬರುತ್ತದೆ. ಆದರಲ್ಲಿ ಮೆಲೋನ್ ಎನ್ನುವ ಒಬ್ಬ ಐರಿಷ್ ಅಮೇರಿಕನ್ ತನ್ನ ಇಂಗ್ಲಿಷ್ ಸೊಸೆಗೆ ಕ್ಷಾಮ ಮತ್ತು ಹಸಿವಿನ ನಡುವಿನ ವ್ಯತ್ಯಾಸವನ್ನು ವಿವರಿಸುತ್ತಾನೆ.

ಮೆಲೋನ್: ನನ್ನ ತಂದೆ 1847ರ ಮಹಾ ಬರಗಾಲದಲ್ಲಿ ಹೊಟ್ಟೆಗಿಲ್ಲದೆ ಸತ್ತುಹೋದರು.

ವಯೋಲೆಟ್: ಕ್ಷಾಮದಲ್ಲಿ?

ಮೆಲೋನ್: ಇಲ್ಲ ಹೊಟ್ಟೆಗಿಲ್ಲದೆ. ಒಂದು ದೇಶದಲ್ಲಿ ತುಂಬಾ ಆಹಾರವಿದ್ದು, ಅವರು ಅದನ್ನು ರಫ್ತುಮಾಡುತ್ತಿದ್ದಾರೆ ಅಂದರೆ ಅಲ್ಲಿ ಕ್ಷಾಮವಿರಲು ಸಾಧ್ಯವಿಲ್ಲ.

ಮೆಲೋನನ ಈ ವಿವರಣೆ ಎತ್ತುವ ಮೂರು ಮುಖ್ಯವಾದ ಪ್ರಶ್ನೆಗಳನ್ನು ಸೇನ್ ಚರ್ಚಿಸುತ್ತಾರೆ. ಮೊದಲನೆಯದಾಗಿ ಪ್ರತಿಯೊಬ್ಬರಿಗೂ ಸಿಗಬೇಕಾದ ಆಹಾರದ ಪ್ರಮಾಣದಲ್ಲಿ ಕುಸಿತವಾಗದಿದ್ದಾಗಲೂ ಕ್ಷಾಮ ಸಂಭವಿಸಲು ಸಾಧ್ಯವೇ? ಇದು ಆಹಾರದ ಲಭ್ಯತೆಯ ಇಳಿಕೆ ಅಥವಾ 'ಫ್ಯಾಡ್ ದೃಷ್ಟಿಕೋನದ ಔಚಿತ್ಯಕ್ಕೆ ಸಂಬಂಧಿಸಿದ ಪ್ರಶ್ನೆ. ಕ್ಷಾಮದ ಸಮಯದಲ್ಲಿ ಐರ್ಲೆಂಡಿನಲ್ಲೇ ಆಹಾರದ ಅವಶ್ಯಕತೆ ಇದ್ದಾಗಲೂ ಅಲ್ಲಿಂದ ಆಹಾರವನ್ನು ರಫ್ತು ಮಾಡಲಾಗುತ್ತಿತ್ತು ಎಂದು ಮೆಲೋನ್ ಹೇಳುತ್ತಾನೆ. ಸೇನ್ ಇದನ್ನು 'ಫುಡ್ ಕೌಂಟರ್ ಮೂವ್‌ಮೆಂಟ್' ಎಂದು ಕರೆಯುತ್ತಾರೆ. ಕೊನೆಯದಾಗಿ ಕ್ಷಾಮ ಮತ್ತು ಹೊಟ್ಟೆಗಿಲ್ಲದಿರುವುದು ಎರಡೂ ಬೇರೆ ಅನ್ನುವ ವಿಚಾರ. ಕ್ಷಾಮ ಎನ್ನುವುದು ಒಂದು ಪ್ರಾಕೃತಿಕ ಘಟನೆಯ ಪರಿಣಾಮ ಮತ್ತು ಅದರಲ್ಲಿ ನಿಜವಾಗಿಯೂ ಆಹಾರದ ಕೊರತೆಯಿರುತ್ತದೆ. ಆದರೆ ಹೊಟ್ಟೆಗಿಲ್ಲದಿರುವುದು ಎಂದರೆ, ಜನರನ್ನು ಸಾಯುವಂತೆ ಅಥವಾ

ವಲಸೆ ಹೋಗುವಂತೆ ಮಾಡುವುದಕ್ಕಾಗಿ ಉದ್ದೇಶಪೂರ್ವಕವಾಗಿ ಕೈಗೊಂಡಿರುವ ಕ್ರಮದ ಪರಿಣಾಮ.

ಇತ್ತೀಚೆಗೆ ಹಲವು ಕ್ಷಾಮಗಳನ್ನು ಫ್ಯಾಡ್ ದೃಷ್ಟಿಕೋನದಿಂದ ವ್ಯಾಖ್ಯಾನಿಸಿದ್ದಾರೆ. ಆಹಾರದ ಲಭ್ಯತೆಯಲ್ಲಿ ತೀವ್ರ ಇಳಿಕೆಯಾಗಿದ್ದರಿಂದ ಕ್ಷಾಮಗಳು ಸಂಭವಿಸಿವೆ ಎಂದು ವಾದಿಸಲಾಗಿದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಇದು ಸತ್ಯವಲ್ಲ ಎನ್ನುವುದು ತಿಳಿಯುತ್ತದೆ. ಇದನ್ನು ಅರ್ಥಮಾಡಿಕೊಳ್ಳಲು ಸೇನ್ ಇತ್ತೀಚಿನ ನಾಲ್ಕು ಕ್ಷಾಮಗಳನ್ನು ಪರಿಶೀಲಿಸಿದ್ದಾರೆ.

ಫ್ಯಾಡ್ ಸಿದ್ಧಾಂತ ಸರಿಯಿಲ್ಲ ಅನ್ನುವುದಕ್ಕೆ ಪುರಾವೆಗಳೇನೂ ಬೇಕಾಗಿಲ್ಲ. ಬರಗಾಲ ಅಂದರೆ ಕೆಲವರಿಗೆ ಸಾಕಷ್ಟು ಆಹಾರ ಸಿಗದೇ ಇರುವ ಪರಿಸ್ಥಿತಿ ಅಷ್ಟೇ. ಆ ದೇಶದಲ್ಲಿ ಆಹಾರವೇ ಸಿಗುತ್ತಿಲ್ಲ ಅಂತಲ್ಲ. ಆಹಾರದ ಕೊರತೆ ಹಸಿವಿಗೆ ಒಂದು ಕಾರಣವಿದ್ದಿರಬಹುದೇ ಹೊರತು ಅದೇ ಏಕೈಕ ಕಾರಣವಲ್ಲ. ನಿಜ ಹೇಳಬೇಕೆಂದರೆ, ದೇಶದಲ್ಲಿ ಆಹಾರದ ಕೊರತೆಯಿದ್ದಾಗ ಬರಗಾಲ ಇರಲೇಬೇಕೆಂದಿಲ್ಲ. ಬರಗಾಲ ಅನ್ನುವುದು ಕೇವಲ ದವಸ–ಧಾನ್ಯಗಳ ದಾಸ್ತಾನಿಗೆ ಸಂಬಂಧಿಸಿದ ವಿಷಯವಲ್ಲ. ಅದು ಮನುಷ್ಯ ಮತ್ತು ಸರಕಿನ ನಡುವಿನ ಸಂಬಂಧವನ್ನು ಕುರಿತ ಪ್ರಶ್ನೆ. ಬರಗಾಲವನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಸಂಬಂಧವನ್ನು ಆಳವಾಗಿ ಅರ್ಥಮಾಡಿಕೊಳ್ಳಬೇಕು. ಇದಕ್ಕೆ ಫ್ಯಾಡ್ ಸಿದ್ಧಾಂತ ಉಪಯುಕ್ತವಲ್ಲ.

ಎರಡನೆಯದಾಗಿ ಫ್ಯಾಡ್ ಸಿದ್ಧಾಂತ ಸರಿಯಾಗಿರಬೇಕಾಗಿಲ್ಲ ಅನ್ನುವುದು ಕ್ಷಾಮದ ಕಾರಣಗಳನ್ನು ಕುರಿತು ಆಳವಾಗಿ ಯೋಚಿಸುವವರಿಗೆಲ್ಲಾ ತುಂಬಾ ಹಿಂದೆಯೇ ಅರ್ಥವಾಗಿತ್ತು. ಡೇವಿಡ್ ರಿಕಾರ್ಡೊ ಪಾರ್ಲಿಮೆಂಟಿನಲ್ಲಿ 1822ರಲ್ಲಿ ಮಾತನಾಡುತ್ತಾ ಫ್ಯಾಡ್ ಸಿದ್ಧಾಂತವನ್ನು ನಿರಾಕರಿಸಿದ್ದರು. "ಸಂಸತ್ತಿನ ಗೌರವಾನ್ವಿತ ಸದಸ್ಯರ ಪ್ರಕಾರ ಐರ್ಲೆಂಡ್‌ನಲ್ಲಿ ಜನರು ಆಹಾರವಿಲ್ಲದೆ ಸಾಯುತ್ತಿದ್ದಾರೆ. ಇನ್ನೊಂದೆಡೆ ಅಲ್ಲಿನ ರೈತರು ಅತಿ ಉತ್ಪಾದನೆಯ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಅಂದರೆ ಒಂದೆಡೆ ಹಸಿವು, ಇನ್ನೊಂದೆಡೆ ಅತಿಯಾದ ಆಹಾರ. ಸಂಸತ್ ಸದಸ್ಯರಿಗೆ ಇದು ವಿರೋಧಾಭಾಸವಾಗಿ ತೋರುತ್ತದೆ. ನನಗೆ ಹಾಗೆ ತೋರುವುದಿಲ್ಲ. ಜನರ ಕೂಲಿಯು ಮುಖ್ಯವಾಗಿ ಆಲೂಗಡ್ಡೆಯ ಬೆಲೆಯನ್ನು ಆಧರಿಸಿ ನಿರ್ಧಾರವಾಗುವ ದೇಶಗಳಲ್ಲಿ, ಅಲೂಗೆಡ್ಡೆ ಬೆಳೆ ನಾಶವಾದಾಗ ಜನರು ಸಂಕಷ್ಟಕ್ಕೆ ಸಿಲುಕುತ್ತಾರೆ. ಕೂಲಿ ವಿಪರೀತ ಕಡಿಮೆಯಾಗುತ್ತದೆ. ದುಬಾರಿಯಾದ ಧಾನ್ಯಗಳನ್ನು ಕೊಳ್ಳಲಾಗುವುದಿಲ್ಲ. ಇದರಲ್ಲಿ ಯಾವುದೇ ವಿರೋಧಾಭಾಸವಿಲ್ಲ," ಎಂದವರು ವಾದಿಸಿದ್ದರು. ಅಂದರೆ ಆಹಾರದ ಉತ್ಪಾದನೆಯ ಇಳಿತ ಬರಗಾಲಕ್ಕೆ ಕಾರಣವಾಗಬೇಕಾಗಿಲ್ಲ.

ಫ್ಯಾಡ್‌ನ ಕಲ್ಪನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲೂ ಸಾಧ್ಯವಿಲ್ಲ. ಬರಗಾಲದ ಕೆಲವು ಸಂದರ್ಭಗಳಲ್ಲಿ ಆಹಾರದ ಲಭ್ಯತೆ ಗಣನೀಯವಾಗಿ ಕುಸಿದಿರುವ ನಿದರ್ಶನಗಳೂ ಇವೆ. 1840ರ ಐರ್ಲೆಂಡ್‌ನ ಮಹಾ ಬರಗಾಲದ ಸಮಯದಲ್ಲಿ ಹೀಗಾಗಿತ್ತು. ಆಲೂಗಡ್ಡೆ ಬೆಳೆ ನಾಶವಾಗಿದ್ದರಿಂದ ಅಲ್ಲಿ ಆಹಾರದ ಕೊರತೆಯಿತ್ತು. ಆದರೂ ಐರ್ಲೆಂಡ್‌ನಿಂದ ಆಹಾರವನ್ನು ರಫ್ತು ಮಾಡಲಾಗುತ್ತಿತ್ತು ಅನ್ನುವುದು ಬೇರೆಯ ಸಂಗತಿ. ಸರಕುಗಳನ್ನು ರಫ್ತು ಮಾಡಲಾಗುತ್ತಿತ್ತು ಅಂದ ಕೂಡಲೆ ಅಲ್ಲಿ ಸಾಕಷ್ಟು ಉತ್ಪಾದನೆಯಾಗುತ್ತಿತ್ತು ಎಂದು ಹೇಳುವುದಕ್ಕಾಗುವುದಿಲ್ಲ. ಆಹಾರದ ಕೊರತೆಯಿತ್ತು ಮತ್ತು ಅದೇ ಸಮಯದಲ್ಲಿ ಬರಗಾಲವೂ ಸಂಭವಿಸಿತು ಅಂದ ಮಾತ್ರಕ್ಕೆ ಬರಗಾಲಕ್ಕೆ ಅದೇ ಕಾರಣ ಎಂದೂ ಹೇಳಲಾಗುವುದಿಲ್ಲ. ಬರಗಾಲಕ್ಕೆ ನಿಜವಾದ ಕಾರಣಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಸೇನ್ ಜಗತ್ತಿನ ಎರಡು ಭಾಗಗಳಿಂದ ನಾಲ್ಕು ಕ್ಷಾಮಗಳನ್ನು ಪರಿಶೀಲಿಸುತ್ತಾರೆ.

ಅವುಗಳು 1943ರ ಬಂಗಾಲದ ಮಹಾ ಬರಗಾಲ, ಇಥಿಯೋಪಿಯಾದ 1973ರ ವೊಲ್ಲೊ ಬರಗಾಲ, ಮತ್ತು 1974ರ ಹರೇರ್ಗೆ ಬರಗಾಲ, ಕೊನೆಯದಾಗಿ 1974ರ ಬಾಂಗ್ಲಾದೇಶದಲ್ಲಿನ ಬರಗಾಲ.

ಬಂಗಾಲದ ಮಹಾ ಬರಗಾಲ ಈ ಶತಮಾನದ ಅತ್ಯಂತ ದೊಡ್ಡ ಬರಗಾಲ ಅದರಲ್ಲಿ ಸುಮಾರು 30ಲಕ್ಷ ಜನ ಪ್ರಾಣ ಕಳೆದುಕೊಂಡಿದ್ದರು. ಇಲ್ಲಿ ಫ್ಯಾಡ್ ಸಿದ್ಧಾಂತ ಅನ್ವಯಿಸುವುದಿಲ್ಲ ಎನ್ನುವುದು ಸ್ಪಷ್ಟ. 1943ರಲ್ಲಿ ಅಂದರೆ ಬರಗಾಲ ಇದ್ದ ವರ್ಷ ಆಹಾರದ ಉತ್ಪಾದನೆ 1942ಕ್ಕಿಂತ ಕಡಿಮೆಯಿತ್ತೆನ್ನುವುದು ನಿಜ. ಆದರೆ ಅದು 1941ಕ್ಕಿಂತ ನಿಸ್ಸಂದೇಹವಾಗಿ ಸಾಕಷ್ಟು ಹೆಚ್ಚಿಗೆ ಇತ್ತು. ಆದರೆ 1941ರಲ್ಲಿ ಬರಗಾಲದ ಸೂಚನೆಯೂ ಇರಲಿಲ್ಲ. 1941ಕ್ಕೆ ಹೋಲಿಸಿದರೆ 1943ರಲ್ಲಿ ಒಟ್ಟು ಆಹಾರದ ಲಭ್ಯತೆ ಹಾಗೂ ತಲಾ ಆಹಾರದ ಲಭ್ಯತೆ ಎರಡೂ ಹೆಚ್ಚಿತ್ತು. ಆದರೂ ಜನ ಸಂಕಷ್ಟಕ್ಕೆ ಸಿಕ್ಕರು. ಹಾಗಾಗಿ ಬರಗಾಲಕ್ಕೆ ಕಾರಣವನ್ನು ಫ್ಯಾಡ್ ಸಿದ್ಧಾಂತದಿಂದಾಚೆಗೆ ಹುಡುಕಬೇಕು.

1973ರ ಇಥಿಯೋಪಿಯಾದ ವೊಲ್ಲೊ ಪ್ರಾಂತ್ಯದ ಪರಿಸ್ಥಿತಿ ಹೆಚ್ಚು ಜಟಿಲ. ಬರಗಾಲ ತೀರಾ ಭೀಕರವಾಗಿತ್ತು. ವೊಲ್ಲೊ ಪ್ರಾಂತ್ಯದಲ್ಲಿ ಆಹಾರದ ಉತ್ಪಾದನೆ ಸಾಕಷ್ಟು ಕುಸಿದಿತ್ತು. ಆದರೆ ಒಟ್ಟಾರೆ ಇಥಿಯೋಪಿಯಾದಲ್ಲಿ ಪರಿಸ್ಥಿತಿ ಅಷ್ಟೊಂದು ಕೆಟ್ಟದಾಗಿರಲಿಲ್ಲ. ತಲಾ ಕ್ಯಾಲೊರಿ ಲಭ್ಯತೆ ಸಾಕಷ್ಟೇ ಇತ್ತು. ಹಾಗಾಗಿ ವಿಶ್ಲೇಷಣೆಗೆ ಇಥಿಯೋಪಿಯೋವನ್ನು ಆರಿಸಿಕೊಳ್ಳಬೇಕೊ ಅಥವಾ ವೊಲ್ಲೋ ಪ್ರಾಂತ್ಯವನ್ನು ಆರಿಸಿಕೊಳ್ಳಬೇಕೊ? ಅನ್ನುವ ಪ್ರಶ್ನೆ ಹುಟ್ಟಿಕೊಳ್ಳುತ್ತದೆ.

ಮರುವರ್ಷ 1974ರಲ್ಲಿ ಹರೇರ್ಗೆಯಲ್ಲಿ ಬರಗಾಲ ಬಂದಾಗ, ಇಥಿಯೋಪಿಯಾದಲ್ಲಿ ಮತ್ತು ಹರೇರ್ಗೆ ಎರಡೂ ಕಡೆ ಆಹಾರದ ಉತ್ಪಾದನೆ ಕಡಿಮೆಯಾಗಿತ್ತು. ಹಾಗಾಗಿ ಕ್ಷಾಮಬರಗಾಲಕ್ಕೆ ಆಹಾರದ ಲಭ್ಯತೆಯ ಕೊರತೆ ಕಾರಣವೆನ್ನುವ ಫ್ಯಾಡ್ ಸಿದ್ಧಾಂತವನ್ನು ತಳ್ಳಿಹಾಕುವುದಕ್ಕೆ ಸಾಧ್ಯವಿರಲಿಲ್ಲ.

1974ರಲ್ಲಿ ಬಾಂಗ್ಲಾದೇಶದಲ್ಲಿ ಆಹಾರದ ಉತ್ಪಾದನೆ ಯಾವುದೇ ವರ್ಷಕ್ಕಿಂತ ಹೆಚ್ಚಿತ್ತು. ಆದರೂ ಬರ ತೀವ್ರವಾಗಿ ಕಾಡಿತ್ತು. ಹಾಗಾಗಿ ಎರಡು ಪ್ರಕರಣಗಳಲ್ಲಿ ಫ್ಯಾಡ್ ಸಿದ್ಧಾಂತವನ್ನು ಸುಳ್ಳೆಂದು ಸಲೀಸಾಗಿ ತಳ್ಳಿ ಹಾಕಬಹುದಾದರೂ, ಒಟ್ಟಾರೆಯಾಗಿ ಒಂದು ನಿರ್ಧಾರಕ್ಕೆ ಬರುವುದಕ್ಕೆ ಇನ್ನೂ ಆಳವಾದ ವಿಶ್ಲೇಷಣೆ ಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಸೇನ್ ಪರ್ಯಾಯವಾಗಿ ಹಕ್ಕು ಆಧಾರಿತ ಸಿದ್ಧಾಂತವನ್ನು (ಎನ್‌ಟೈಟಲ್‌ಮೆಂಟ್ ಅಪ್ರೋಚ್) ಮುಂದಿಡುತ್ತಾರೆ. ಈ ಸಿದ್ಧಾಂತದ ಪ್ರಕಾರ, ಹಸಿವು ಅಥವಾ ಉಪವಾಸಕ್ಕೆ ಆಹಾರದ ಕೊರತೆ ಕಾರಣವಲ್ಲ. ಬದಲಿಗೆ, ಜನಸಮುದಾಯದ ಕೆಲವು ಜನ ಅವಶ್ಯಕ ಆಹಾರವನ್ನು ಪಡೆದುಕೊಳ್ಳುವ ಹಕ್ಕಿನಿಂದ ವಂಚಿತರಾಗಿರುತ್ತಾರೆ. ಅಥವಾ ಅವರಿಗೆ ಆ ಶಕ್ತಿ ಇರುವುದಿಲ್ಲ. ಹಾಗಾಗಿ ಹಸಿವಿನಿಂದ ನರಳುತ್ತಿರುತ್ತಾರೆ. ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿಯ ಹಕ್ಕು ಅಲ್ಲಿಯ ಕಾನೂನು ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಭಾವಗಳು ಇವನ್ನೆಲ್ಲಾ ಅವಲಂಬಿಸಿರುತ್ತದೆ.

ಒಬ್ಬ ವ್ಯಕ್ತಿಯ ಬಳಿ ಆರಂಭದಲ್ಲಿ ಇರುವ ಸ್ವಂತ ಆಸ್ತಿ, ಜಮೀನು ಅಥವಾ ಕೌಶಲ್ಯವನ್ನು 'ಎಂಡೋಮೆಂಟ್' ಅಥವಾ ಮೂಲಸಂಪತ್ತು ಎನ್ನಲಾಗುತ್ತದೆ. ಆ ವ್ಯಕ್ತಿ ತನ್ನಲ್ಲಿರುವ ಈ ಆಸ್ತಿಯನ್ನು ಬಳಸಿ ಅಥವಾ ಮಾರಿ ಮಾರುಕಟ್ಟೆಯಲ್ಲಿ ಏನೆಲ್ಲಾ ಖರೀದಿಸಬಹುದು ಎಂಬ ಸಾಮರ್ಥ್ಯವನ್ನು 'ಎಕ್ಸ್‌ಚೇಂಜ್ ಎಂಟೈಟಲ್‌ಮೆಂಟ್' (ವಿನಿಮಯದ ಹಕ್ಕು) ಎನ್ನಲಾಗುತ್ತದೆ. ನಮಗೆ ಆಹಾರ ಸಿಗುತ್ತದೋ ಇಲ್ಲವೋ ಎಂಬುದು ಮುಖ್ಯವಾಗಿ ನಮ್ಮ ಬಳಿ ಯಾವ ಆಸ್ತಿ ಇದೆ ಮತ್ತು ಅದರ ವಿನಿಮಯದಿಂದ ನಾವು ಏನನ್ನು ಪಡೆದುಕೊಳ್ಳಬಹುದು ಎಂಬುದರಿಂದ ನಿರ್ಧಾರವಾಗುತ್ತದೆ. ಒಬ್ಬ ರೈತ ಸಾಲ ತೀರಿಸಲು ತನ್ನ ಜಮೀನನ್ನೇ ಮಾರಿ, ಮುಂದೆ ಆದಾಯವಿಲ್ಲದೆ ಹಸಿವಿನಿಂದ ನರಳಬೇಕಾಗಿ ಬಂದರೆ ಅದು ಮೂಲ ಸಂಪತ್ತನ್ನು ಕಳೆದುಕೊಂಡಿದ್ದರಿಂದ ಆದಂತಹ ನಷ್ಟ. ಅದೇ ರೀತಿ, ಬರಗಾಲದ ಸಮಯದಲ್ಲಿ ಹಳ್ಳಿಗಳಲ್ಲಿ ಜನರು ಹಣವಿಲ್ಲದೆ ಕ್ಷೌರ ಮಾಡಿಸಿಕೊಳ್ಳುವುದನ್ನು ನಿಲ್ಲಿಸಿದಾಗ, ಕೆಲಸವಿಲ್ಲದೆ ಒಬ್ಬ ಕ್ಷೌರಿಕ ಹಸಿವಿನಿಂದ ಬಳಲುವಂತಾದರೆ ಅದು ವಿನಿಮಯದ ಹಕ್ಕಿನ ಕುಸಿತ. ಏಕೆಂದರೆ ಇಲ್ಲಿ ಅವನ ಬಳಿ ಕೌಶಲ್ಯವಿದ್ದರೂ, ಮಾರುಕಟ್ಟೆಯಲ್ಲಿ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ.

ಒಂದು ಆರ್ಥಿಕ ವ್ಯವಸ್ಥೆಯೊಳಗೆ ಹಕ್ಕಿಗೆ ಸಂಬಂಧಿಸಿದಂತೆ ಆಗುವ ಬದಲಾವಣೆಯ ಸ್ವರೂಪವನ್ನು ಪರಿಶೀಲಿಸಿದರೆ ಬರಗಾಲದ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಬಹುದು. ಒಬ್ಬ ವ್ಯಕ್ತಿ ಎರಡು ಕಾರಣಗಳಿಗಾಗಿ ಆಹಾರದಿಂದ ವಂಚಿತನಾಗಬಹುದು. ಒಂದು, ತನ್ನ ಹಕ್ಕನ್ನು ಚಲಾಯಿಸಿ ಆಹಾರವನ್ನು ಪಡೆದುಕೊಳ್ಳುವ ಸಾಮರ್ಥ್ಯ ಅವನಿಗಿಲ್ಲದೆ ಇರಬಹುದು. ಅಥವಾ ಹಕ್ಕನ್ನು ಉಪಯೋಗಿಸುವುದಕ್ಕೆ ಅವನಿಗೆ ಒಲವು ಇಲ್ಲದೇ ಇರಬಹುದು. ಹಕ್ಕು ಆಧಾರಿತ ಸಿದ್ಧಾಂತ ಹೆಚ್ಚಾಗಿ ಸಾಮರ್ಥ್ಯಕ್ಕೆ ಆದ್ಯತೆ ನೀಡುತ್ತದೆ.

ಇದು ಮೇಲ್ನೋಟಕ್ಕೆ ಕ್ಷುಲ್ಲಕವಾಗಿ ತೋರಬಹುದು. ಆದರೆ ಬರಗಾಲಗಳನ್ನು ಕುರಿತ ಬಹುತೇಕ ವಿಶ್ಲೇಷಣೆಗಳು ಜನ ತಮಗೆ ಪರಿಚಿತವಲ್ಲದ ಆಹಾರವನ್ನು ತಿನ್ನಲು ಇಷ್ಟಪಡದೇ ಇರುವುದನ್ನು ಹಸಿವಿಗೆ ಕಾರಣ ಎನ್ನುತ್ತವೆ. ಐರ್ಲೆಂಡಿನಲ್ಲಿ 1940ರ ಮಹಾ ಬರಗಾಲದ ಸಮಯದಲ್ಲಿ

ಅಲ್ಲಿಯ ಜನ ಆಲೂಗೆಡ್ಡೆ ಸಿಗದೇಹೋದಾಗ ಮೆಕ್ಕೆಜೋಳ ತಿನ್ನಲು ತಯಾರಿರಲಿಲ್ಲ ಎಂದು ಅವರನ್ನು ಜರಿಯಲಾಗಿತ್ತು. ಆದರೆ ಇದು ನಿಜವಲ್ಲ. ಜನ ಹಸಿವು ಹೆಚ್ಚಾದಾಗ ಬೇರೆ ದಾರಿಯಿಲ್ಲದೆ ಅದೇ ಹಿಟ್ಟನ್ನು ಮುಗಿಬಿದ್ದು ತಿಂದರು. ತೀವ್ರ ಹಸಿವಿನಲ್ಲಿರುವ ಜನ ಯಾವುದೇ ಆಹಾರ ಕೊಟ್ಟರೂ ಬಳಸುತ್ತಾರೆ.

1943ರ ಬಂಗಾಲದ ಮಹಾ ಬರಗಾಲಕ್ಕೆ ಸಂಬಂಧಿಸಿದಂತೆಯೂ ಕವಿ ಡಾಮ್ ಮೊರೈಸ್ ಇಂತಹುದೇ ಆರೋಪ ಮಾಡಿದ್ದ. ಅನ್ನ ತಿನ್ನುವುದಕ್ಕೆ ಒಗ್ಗಿಹೋಗಿದ್ದ ಬಂಗಾಲದ ಜನ ಬ್ರಿಟಿಷರು ಕೊಟ್ಟ ಗೋಧಿಯನ್ನು ತಿನ್ನಲು ತಯಾರಿರಲಿಲ್ಲ. ಗೋಧಿ ಮಾರುತ್ತಿದ್ದ ಅಂಗಡಿಗಳು ಮತ್ತು ತಳ್ಳುಗಾಡಿಗಳ ಮುಂದೆ ಅವರು ಅಕ್ಷರಶಃ ಹಸಿವಿನಿಂದ ಸತ್ತರು ಎಂದು ಬರೆಯುತ್ತಾನೆ. ಆದರೆ ತನಿಖಾ ವರದಿಗಳ ಪ್ರಕಾರ ಉಚಿತವಾಗಿ ಹಂಚುತ್ತಿದ್ದ ಆಹಾರವನ್ನು ಪಡೆಯಲು ಜನ ಸಾಲುಗಟ್ಟಿ ನಿಲ್ಲುತ್ತಿದ್ದರು. ಆದರೆ ಆಹಾರವನ್ನು ಖರೀದಿಸುವ ಶಕ್ತಿ ಇಲ್ಲದಿದ್ದ ಕಾರಣ ಅಂಗಡಿಗಳ ಮುಂದೆ ಸಾಯುತ್ತಿದ್ದರೇ ಹೊರತು ಅದಕ್ಕೆ ಅವರ ಹಟವಾಗಲಿ, ಆಯ್ಕೆಯಾಗಲಿ ಕಾರಣವಲ್ಲ. ಹಕ್ಕು ಆಧಾರಿತ ಸಿದ್ಧಾಂತದ ಪ್ರಕಾರ ದೇಶದಲ್ಲಿರುವ ಆರ್ಥಿಕ, ರಾಜಕೀಯ ಮತ್ತು ಕಾನೂನು ವ್ಯವಸ್ಥೆಗಳ ಚೌಕಟ್ಟಿನ ಒಳಗೆ, ಜನರಿಗೆ ಆಹಾರ ಸಿಗದಂತೆ ಮಾಡಿ, ಬರಗಾಲವನ್ನು ಸೃಷ್ಟಿಸಲಾಗುತ್ತದೆ. ಐರ್ಲೆಂಡ್ ಬರಗಾಲದ ಸಮಯದಲ್ಲಿ ಜನರು ಹಸಿವಿನಿಂದ ಸಾಯುತ್ತಿದ್ದರು. ಹಾಗಿದ್ದಾಗ್ಯೂ, ಅಲ್ಲಿ ಬೆಳೆದ ಧಾನ್ಯ ಮತ್ತು ಮಾಂಸವನ್ನು ಶ್ರೀಮಂತ ಜಮೀನ್ದಾರರು ಕಾನೂನುಬದ್ಧವಾಗಿಯೇ ಬೇರೆ ದೇಶಗಳಿಗೆ ರಫ್ತು ಮಾಡುತ್ತಿದ್ದರು. ಬಡವರಿಗೆ ಅದನ್ನು ಕೊಳ್ಳಲು ಹಣವಿರಲಿಲ್ಲ, ಶ್ರೀಮಂತರಿಂದ ಕಸಿದುಕೊಳ್ಳಲು ಕಾನೂನಿನಲ್ಲಿ ಅವಕಾಶವಿರಲಿಲ್ಲ. ಅಂದರೆ, ವ್ಯವಸ್ಥೆಯು ಅತ್ಯಂತ ಶಾಂತಿಯುತವಾಗಿ, ಕಾನೂನಿನ ಪ್ರಕಾರವೇ ನಡೆಯುತ್ತಿದ್ದರೂ ಬಡವರು ಹಸಿವಿನಿಂದ ಸಾಯುವ ಸ್ಥಿತಿ ನಿರ್ಮಾಣವಾಗಿತ್ತು. 1943ರ ಬಂಗಾಳದ ಬರಗಾಲದಲ್ಲಿ, ಆಹಾರದಿಂದ ತುಂಬಿದ್ದ ಅಂಗಡಿಗಳ ಮುಂಭಾಗದಲ್ಲೇ ಬಡ ಜನರು ಹಸಿವಿನಿಂದ ಸಾಯುತ್ತಿದ್ದರು. ಅಲ್ಲಿಯ ಕಾನೂನು ವ್ಯವಸ್ಥೆಯು, ಆ ಆಹಾರದ ಮೇಲೆ ಹಕ್ಕಿದ್ದ ಮಾಲಿಕರ ಆಸ್ತಿಯನ್ನು ರಕ್ಷಿಸಲು ಅಲ್ಲಿ ಕಾವಲು ನಿಂತಿತ್ತು.

ಮೂರನೆಯದಾಗಿ, ಹಕ್ಕು ಆಧಾರಿತ ಸಿದ್ಧಾಂತದ ಪ್ರಕಾರ ದೇಶದಲ್ಲಿ ಲಭ್ಯವಿರುವ ಒಟ್ಟು ಆಹಾರದ ಪ್ರಮಾಣಕ್ಕೂ ಬರಕ್ಕೂ ಯಾವಾಗಲೂ ನೇರ ಸಂಬಂಧವಿರಲೇಬೇಕಾಗಿಲ್ಲ. "ಜನಸಂಖ್ಯೆ ತೀರಾ ಹೆಚ್ಚಾಗಿದೆ, ಆಹಾರ ತೀರಾ ಕಡಿಮೆಯಾಗಿದೆ ಹಾಗಾಗಿ ಹಸಿವಿದೆ" ಎಂಬ ಸರಳೀಕೃತ ವಿಶ್ಲೇಷಣೆಯನ್ನು ಅದು ತಿರಸ್ಕರಿಸುತ್ತದೆ. ಡೇವಿಡ್ ರಿಕಾರ್ಡೋ ಅವರ "ಆಲೂಗಡ್ಡೆ ಕೂಲಿಯ ಸಿದ್ಧಾಂತ' ಬಹುಮಟ್ಟಿಗೆ ಹಕ್ಕು ಆಧಾರಿತ ಸಿದ್ಧಾಂತಕ್ಕೆ ಪೂರಕವಾಗಿದೆ.

ಹಿಂದೆ ಗಮನಿಸಿದಂತೆ ಆಹಾರದ ಹಕ್ಕು ನಿಮಗೆ ಎರಡು ಕಾರಣಕ್ಕೆ ತಪ್ಪಿಹೋಗಬಹುದು. ಒಂದು ನಿಮ್ಮ ಬಳಿ ಆರಂಭದಲ್ಲಿ ಇದ್ದ ಆಸ್ತಿಯನ್ನು ಕಳೆದುಕೊಂಡು ಆಹಾರದ ಮೇಲಿನ ಹಕ್ಕನ್ನು ಚಲಾಯಿಸುವುದಕ್ಕೆ ನಿಮಗೆ ಸಾಧ್ಯವಾಗದೆ ಇರಬಹುದು. ಇಲ್ಲ ನಿಮ್ಮ ಆಸ್ತಿಗೆ ಈಗ ಹಿಂದಿನ ವಿನಿಮಯ ಶಕ್ತಿ ಇಲ್ಲದೇ ಇರಬಹುದು.

ಸೇನ್ ಮುಂದುವರಿದು ಇನ್ನೆರಡು ವಿಫಲತೆಗಳನ್ನು ಸೂಚಿಸುತ್ತಾರೆ. ಒಂದು 'ನೇರ ಹಕ್ಕಿನ ವಿಫಲತೆ' ಮತ್ತೊಂದು 'ವ್ಯಾಪಾರ ಆಧಾರಿತ ಹಕ್ಕಿನ ವಿಫಲತೆ'.

ತಾವೇ ಆಹಾರವನ್ನು ಬೆಳೆದುಕೊಳ್ಳುತ್ತಿರುವ ರೈತರಿಗೆ ಬೆಳೆ ನಾಶವಾದರೆ ನೇರವಾಗಿ ಆಹಾರದ ಮೇಲಿನ ಹಕ್ಕು ತಪ್ಪಿಹೋಗುತ್ತದೆ (ನೇರ ಹಕ್ಕಿನ ವಿಫಲತೆ). ಇದಕ್ಕೆ ತದ್ವಿರುದ್ಧವಾಗಿ, ಸಮಾಜದಲ್ಲಿ ಹೆಚ್ಚಿನವರು ಬೇರೆಯವರಿಂದ ಆಹಾರವನ್ನು ಕೊಳ್ಳುತ್ತಾರೆ. ಬೇರೆಯವರಿಂದ ಕೊಳ್ಳುವುದಕ್ಕೆ ಸಾಧ್ಯವಾಗದೇ ಹೋದಾಗ ಹಸಿವಿಗೆ 'ವ್ಯಾಪಾರ ಆಧಾರಿತ ಹಕ್ಕಿನ ವಿಫಲತೆ' ಕಾರಣವಾಗಿರುತ್ತದೆ. ವ್ಯಾಪಾರ ಆಧಾರಿತ ಹಕ್ಕಿನ ವಿಫಲತೆ ಹಲವು ಕಾರಣಕ್ಕೆ ಆಗಬಹುದು. ದೇಶದಲ್ಲಿ ಆಹಾರದ ಲಭ್ಯತೆ ಕಡಿಮೆಯಾಗಿ ಅದು ವ್ಯಾಪಾರದ ಸಂಬಂಧಗಳ ಮೇಲೆ ಪ್ರಭಾವ ಬೀರುವುದು ಕೇವಲ ಒಂದು ಕಾರಣ. ಅವರು ತಮ್ಮ ಮೂಲ ಆಸ್ತಿಯನ್ನು ಕಳೆದುಕೊಂಡಿರಬಹುದು. ಅವರ ನೀಡುತ್ತಿದ್ದ ನಿರ್ದಿಷ್ಟ ಸೇವೆಗಳಿಗೆ ಅಥವಾ ಕೆಲಸಗಳಿಗೆ ಬೇಡಿಕೆ ಇಲ್ಲದಂತಾಗುವುದು, ಅಥವಾ ಆಹಾರ ಧಾನ್ಯಗಳಿಗೆ ಬೇಡಿಕೆ ವಿಪರೀತವಾಗಿ ಬೆಲೆಗಳು ಗಗನಕ್ಕೇರಿರಬಹುದು. ಅಥವಾ ಯಾವುದೋ ಕಾರಣಕ್ಕೆ ಮಾರುಕಟ್ಟೆಯಲ್ಲಿ ವ್ಯಾಪಾರವೇ ಸಾಧ್ಯವಾಗದೇ ಇರಬಹುದು. ಹೀಗೆ ಹಲವು ಕಾರಣಗಳಿಗಾಗಿ ಕೆಲವು ನಿರ್ದಿಷ್ಟ ಗುಂಪಿನ ಜನರಿಗೆ ಆಹಾರ ದೊರಕದೇ ಹೋಗಬಹುದು. ಇದೇ ಅಂತಿಮವಾಗಿ ಹಸಿವು ಮತ್ತು ಬರಕ್ಕೆ ಕಾರಣವಾಗಬಹುದು.

'ನೇರ ಹಕ್ಕಿನ ವಿಫಲತೆ' ಮೇಲ್ನೋಟಕ್ಕೆ 'ಆಹಾರ ಲಭ್ಯತೆಯ ಕೊರತೆ' ಸಿದ್ಧಾಂತದ ಹಾಗೆಯೇ ತೋರಬಹುದು. ಆದರೆ ಅವೆರಡೂ ಬೇರೆ. ಪ್ರಾದೇಶಿಕ ಪ್ರಾಕೃತಿಕ ವಿಕೋಪದಿಂದಾಗಿ ರೈತನ ಜಮೀನಿನಲ್ಲಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ ಎಂದು ಭಾವಿಸಿಕೊಳ್ಳಿ. ಆಗ ದೇಶದ ಒಟ್ಟಾರೆ ಮಾರುಕಟ್ಟೆಯಲ್ಲಿ ಆಹಾರದ ಸರಬರಾಜು ಉತ್ತಮವಾಗಿದ್ದರೂ ರೈತ ಹಸಿವಿನಿಂದ ನರಳಬೇಕಾಗುತ್ತದೆ. ಅವನ ಆಹಾರದ ಹಕ್ಕು ನಿರ್ಧಾರವಾಗುವುದು ಅವನ ಸ್ವಂತ 'ಹಕ್ಕು ಅಥವಾ ಆರ್ಥಿಕ ಶಕ್ತಿಯಿಂದ. ಜಮೀನಿನಲ್ಲಿ ಬೆಳೆ ನಾಶವಾದಾಗ ಅವನು ಕೇವಲ ತಾನು ಬಳಸುವ ಆಹಾರವನ್ನಷ್ಟೇ ಕಳೆದುಕೊಳ್ಳುತ್ತಿಲ್ಲ, ಮಾರುಕಟ್ಟೆಯಲ್ಲಿ ಬೇರೆ ವಸ್ತುಗಳನ್ನು ಖರೀದಿಸುವ ಶಕ್ತಿ ಅಥವಾ ಹಕ್ಕನ್ನೂ ಕಳೆದುಕೊಳ್ಳುತ್ತಿರುತ್ತಾನೆ. ಅಂದರೆ ಬೆಳೆಗಳು ನಾಶವಾದಾಗ 'ಆಹಾರ ಲಭ್ಯತೆಯ ಕುಸಿತ'ದ ಜೊತೆಗೆ 'ನೇರ ಹಕ್ಕಿನ ವಿಫಲತೆ'ಯೂ ಆಗುತ್ತದೆ. ಬೆಳೆ ನಾಶವಾಗಿರುವ ಪ್ರದೇಶಗಳಿಗೆ ಕೇವಲ ಆಹಾರವನ್ನು ಸಾಗಿಸಿದರೆ ಸಾಲದು, ಅವರಿಗೆ ಮಾರುಕಟ್ಟೆಯಲ್ಲಿ ಆಹಾರವನ್ನು ಕೊಳ್ಳುವ 'ವ್ಯಾಪಾರ ಆಧಾರಿತ 'ಹಕ್ಕು' ಅಥವಾ ಆರ್ಥಿಕ ಶಕ್ತಿಯನ್ನೂ ಒದಗಿಸಿಕೊಡಬೇಕು. ವಾಸ್ತವದಲ್ಲಿ ಅಲ್ಲಿ ಆಗಿರುವುದು ಆಹಾರದ ಲಭ್ಯತೆಯ ಕೊರತೆಗಿಂತ ಮೂಲಭೂತವಾಗಿ 'ನೇರ ಹಕ್ಕಿನ ವಿಫಲತೆ'. ತನ್ನ ಬೆಳೆಯನ್ನು ನೆಚ್ಚಿಕೊಂಡಿದ್ದ ರೈತನ 'ನೇರ ಆಹಾರದ ಹಕ್ಕು' ವಿಫಲವಾಗಿದೆ.

ಜನರಿಗೆ ಆಹಾರವನ್ನು ಕೊಳ್ಳುವ ಶಕ್ತಿಯೇ ಇಲ್ಲದೇ ಹೋದಾಗ, ಮಾರುಕಟ್ಟೆಯಲ್ಲಿ ಒಟ್ಟು ಆಹಾರದ ಲಭ್ಯತೆ ಕಡಿಮೆಯಿದ್ದರೂ ಅಂಗಡಿಗಳಲ್ಲಿ ಆಹಾರ ಪದಾರ್ಥಗಳು ಯಥೇಚ್ಛವಾಗಿ ಲಭ್ಯವಿರಬಹುದು. 1846ರ ಕೊನೆಯಲ್ಲಿ ಐರ್ಲೆಂಡ್‌ನಲ್ಲಿ ಬರದಿಂದ ಜನ ಹಸಿದು ಸಾಯುತ್ತಿದ್ದರೂ "ಶನಿವಾರದ ಸಂತೆಗಳಲ್ಲಿ ಮಾಂಸ, ಬ್ರೆಡ್, ಮೀನು ಹೀಗೆ ಪ್ರತಿಯೊಂದು ಆಹಾರ ಪದಾರ್ಥವೂ ಹೇರಳವಾಗಿ ಸಿಗುತ್ತಿತ್ತು." ಬಹುತೇಕ ಬರದ ಸಮಯದಲ್ಲಿ ಇಂತಹ ಪರಿಸ್ಥಿತಿಗಳು ತುಂಬಾ ಸಾಮಾನ್ಯ. ಹಸಿವಿನಿಂದ ಜನರನ್ನು ರಕ್ಷಿಸಲು ಕೇವಲ ಆಹಾರದ ಲಭ್ಯತೆಯನ್ನು ಹೆಚ್ಚಿಸಿದರೆ ಸಾಲುವುದಿಲ್ಲ. ಆಹಾರವನ್ನು ಕೊಳ್ಳಲು ಜನರಿಗಿರುವ ಶಕ್ತಿ ಅಥವಾ ಹಕ್ಕನ್ನು ಹೆಚ್ಚಿಸಬೇಕು.

ಇಥಿಯೋಪಿಯಾದ ವೊಲ್ಲೊ ಪ್ರಾಂತ್ಯದಲ್ಲಿನ 1973ರ ಬರದ ಸಮಯದಲ್ಲಿ ಒಟ್ಟಾರೆಯಾಗಿ ಇಥಿಯೋಪಿಯದಲ್ಲಿ ಆಹಾರದ ಲಭ್ಯತೆಯಲ್ಲಿ ಕುಸಿತವಿರಲಿಲ್ಲ. ಆದರೆ ವೊಲ್ಲೊದಲ್ಲಿ ಆಹಾರದ ಉತ್ಪಾದನೆ ಕಡಿಮೆಯಾಗಿತ್ತು. ವೊಲ್ಲೊ ರೈತರ ಪಾಲಿಗೆ ಇದು ನೇರ ಆಹಾರ ಹಕ್ಕಿನ ವಿಫಲತೆಯಾಗಿತ್ತು. ಅವರಿಗೆ ಕೊಳ್ಳುವುದಕ್ಕೆ ಸಾಧ್ಯವಾಗಿರಲಿಲ್ಲ. ವೋಲೊದಲ್ಲಿ ಸಾರಿಗೆ ವ್ಯವಸ್ಥೆ ಚೆನ್ನಾಗಿರಲಿಲ್ಲ. ಆದ್ದರಿಂದ ಬೇರೆಡೆಗಳಿಂದ ವೊಲ್ಲೊ ಪ್ರಾಂತ್ಯಕ್ಕೆ ಆಹಾರವನ್ನು ಸಾಗಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಜನರಿಗೆ ಆಹಾರದ ಸಮಸ್ಯೆಯಾಯಿತು ಅನ್ನುವ ವಾದವಿದೆ. ಆದರೆ ಸೇನ್ ಗುರುತಿಸುವಂತೆ ವೊಲ್ಲೊದ ಹೃದಯಭಾಗದಿಂದ ಎರಡು ಹೆದ್ದಾರಿಗಳು ಹಾದುಹೋಗುತ್ತಿದ್ದವು. ಅದರ ಮೂಲಕ ಆಹಾರ ಪದಾರ್ಥಗಳನ್ನು ಸಾಗಿಸಬಹುದಿತ್ತು. ಜೊತೆಗೆ ತೀವ್ರ ಬರಪೀಡಿತ ಪ್ರದೇಶಗಳು ಆ ಹೆದ್ದಾರಿಯ ಆಸುಪಾಸಿನಲ್ಲೇ ಇದ್ದವು. ಹಾಗಾಗಿ "ರಸ್ತೆಗಳು ಸರಿಯಾಗಿರಲಿಲ್ಲ" ಅನ್ನುವುದು ಕಾರಣವಲ್ಲ.

ಎರಡನೆಯದಾಗಿ, ಐರ್ಲೆಂಡ್‌ನಲ್ಲಿ ಆದಂತೆಯೇ ಬರದ ಸಮಯದಲ್ಲಿ ವೊಲ್ಲೊದಿಂದಲೂ ಉಳಿದ ನಗರಗಳಿಗೆ ಆಹಾರ ಧಾನ್ಯಗಳನ್ನು ಸಾಗಿಸಲಾಗುತ್ತಿತ್ತು. ಹಾಗಾಗಿ ವೊಲ್ಲೊ ಪ್ರಾಂತ್ಯದಲ್ಲಿ ಸಮಸ್ಯೆ 'ಆಹಾರದ ಲಭ್ಯತೆ'ಯ ಕೊರತೆಗಿಂತ ಹೆಚ್ಚಾಗಿ ಜನ ಕೊಳ್ಳುವ ಶಕ್ತಿಯನ್ನು ಅಥವಾ ಆಹಾರದ ಮೇಲಿನ ಹಕ್ಕನ್ನು ಕಳೆದುಕೊಂಡಿದ್ದು.

ಮೂರನೆಯದಾಗಿ, ವೊಲ್ಲೊ ಪ್ರಾಂತ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ಬರದ ಸಮಯದಲ್ಲೂ ಆಹಾರ ಧಾನ್ಯಗಳ ಬೆಲೆ ಹಿಂದಿನ ವರ್ಷಗಳಿಗಿಂತ ಅಷ್ಟೇನೂ ಹೆಚ್ಚಾಗಿರಲಿಲ್ಲ. ಆದರೂ ಅಲ್ಲಿ ಭೀಕರ ಬರಗಾಲ ಉಂಟಾಗಿತ್ತು.

ಇವೆಲ್ಲವನ್ನೂ ಒಟ್ಟಾಗಿ ಗಮನಿಸಿದಾಗ ಜನರಿಗೆ ಆಹಾರ ಸಿಗದೇ ಹೋಗಿದ್ದಕ್ಕೆ ಸಾರಿಗೆ ವ್ಯವಸ್ಥೆ ಕಾರಣವಲ್ಲ. ಆಹಾರದ ಬೆಲೆಯಲ್ಲಿ ಏರಿಕೆಯಾಗದೆ ಇದ್ದಾಗಲೂ ಜನರಿಗೆ ಆಹಾರವನ್ನು ಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ನಿಜವಾದ ಕಾರಣ ಆಹಾರವನ್ನು ಕೊಳ್ಳಲು ಜನರಲ್ಲಿ ಶಕ್ತಿ ಇರಲಿಲ್ಲ. ಗೇಣಿದಾರರು ಮತ್ತು ಭೂಮಾಲಿಕರಿಬ್ಬರ ಮೇಲೆಯೂ ಇದರ ಪರಿಣಾಮವಾಯಿತು. ರೈತರನ್ನು ನಂಬಿದ್ದ ಕೃಷಿ ಕಾರ್ಮಿಕರು ಮತ್ತು ಅವರನ್ನು ಆಶ್ರಯಿಸಿದವರು



ಇವರೆಲ್ಲರಿಗೂ ಹೊಡೆತ ಬಿತ್ತು. ಅಷ್ಟೇ ಅಲ್ಲದೆ ಇವರ್‍ಯಾರೂ ಪಟ್ಟಣದಲ್ಲಿ ಸರಕುಗಳನ್ನು ಹಾಗೂ ಸೇವೆಗಳನ್ನು ಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಹಾಗಾಗಿ ಪಟ್ಟಣಗಳಲ್ಲೂ ಬೇಡಿಕೆ ಕುಸಿಯಿತು. ಆರ್ಥಿಕತೆಯ ವೇಗ ಮಂದವಾಗತೊಡಗಿತು. ವೊಲೊ ಪ್ರಾಂತ್ಯ ಕಂಡಂತಹ ಬರವನ್ನು 'ಮಂದಗತಿಯ ಬರ' ಎಂದು ಸೇನ್ ಕರೆಯುತ್ತಾರೆ. ಐರ್ಲೆಂಡಿನ ಬರವೂ ಇಂತಹುದೆ.

ಇದಕ್ಕೆ ತದ್ವಿರುದ್ಧವಾಗಿ, 1943ರ ಬಂಗಾಳದ ಮಹಾ ಬರಗಾಲ ಒಂದು 'ಉಬ್ಬರಗತಿಯ ಬರ' [boom famine]. ಅಲ್ಲಿ ಎಲ್ಲಿಯೂ ಆಹಾರದ ಉತ್ಪಾದನೆಯಲ್ಲಿ ಕುಸಿತವಾಗಿರಲಿಲ್ಲ. ಸಾಕಷ್ಟು ಆಹಾರ ಪದಾರ್ಥ ಸಿಗುತ್ತಿತ್ತು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಯುದ್ಧಕ್ಕೆ ಸಂಬಂಧಿಸಿದಂತೆ ವಿಪರೀತ ವೆಚ್ಚ ಮಾಡಲಾಗಿತ್ತು. ಹಣದ ಹೂಡಿಕೆಯಿಂದ ಆರ್ಥಿಕತೆ ವೇಗವಾಗಿ ಬೆಳೆಯುತ್ತಿತ್ತು. ಎಲ್ಲಾ ವಸ್ತುಗಳ, ಅದರಲ್ಲೂ ವಿಶೇಷವಾಗಿ ಆಹಾರ ಪದಾರ್ಥಗಳ ಬೆಲೆ ವಿಪರೀತವಾಗಿ ಏರಿತ್ತು. ಆದರೆ ಕೃಷಿ ಕಾರ್ಮಿಕರ ಆದಾಯ ಹೆಚ್ಚಾಗಿರಲಿಲ್ಲ. ಹಾಗಾಗಿ ಹೆಚ್ಚು ಬೆಲೆ ತೆತ್ತು ಆಹಾರವನ್ನು ಕೊಳ್ಳಲಾಗದೆ ಅವರು ಸತ್ತುಹೋದರು. ಜೊತೆಗೆ ವ್ಯಾಪಾರಿಗಳು ಆಹಾರದ ಪದಾರ್ಥಗಳನ್ನು ಬಚ್ಚಿಟ್ಟು, ಕೃತಕ ಅಭಾವ ಸೃಷ್ಟಿಸಿದರು. ಸಮಸ್ಯೆ ಮತ್ತಷ್ಟು ಉಲ್ಬಣಿಸಿತು. ಗ್ರಾಮೀಣ ಕಾರ್ಮಿಕರ, ವಿಶೇಷವಾಗಿ ಕೃಷಿ ಕಾರ್ಮಿಕರ 'ವಿನಿಮಯ ಹಕ್ಕಿನ ಮೌಲ್ಯಗಳು' ತೀವ್ರವಾಗಿ ಕುಸಿದವು. ಜನ ಸಾಯತೊಡಗಿದರು. ಕೊಳ್ಳುವ ಶಕ್ತಿ ಇದ್ದವರಿಗೆ ಅಂತಹ ಸಮಸ್ಯೆಯಾಗಲಿಲ್ಲ.

1974ರ ಬಾಂಗ್ಲಾದೇಶದ ಬರದಲ್ಲಿ 'ಉಬ್ಬರಗತಿ' ಮತ್ತು 'ಮಂದಗತಿ' ಎರಡೂ ಬಗೆಯ ಬರದ ಲಕ್ಷಣಗಳಿದ್ದವು. ದೇಶದಲ್ಲಿದ್ದ ಒಟ್ಟಾರೆ ಹಣದುಬ್ಬರದ ಪರಿಸ್ಥಿತಿಯಿಂದಾಗಿ ಅಕ್ಕಿಯ ಬೆಲೆ ಏರಿತ್ತು. ಆದರೆ, 1974ರ ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಉಂಟಾದ ಭೀಕರ ಪ್ರವಾಹಗಳಿಂದ ಕೃಷಿ ಕಾರ್ಮಿಕರಿಗೆ ಬೇಡಿಕೆ ತೀವ್ರವಾಗಿ ಕಡಿಮೆಯಾಗಿತ್ತು. ಇದರಿಂದ ನಿರುದ್ಯೋಗ ವ್ಯಾಪಕವಾಗಿತ್ತು. ಅಕ್ಕಿಯ ಬೆಲೆ ಏರುತ್ತಿದ್ದ ವೇಗಕ್ಕೆ ಹೋಲಿಸಿದರೆ ಕಾರ್ಮಿಕರ ಕೂಲಿ ತುಂಬಾ ಕಡಿಮೆ ಇತ್ತು. ಪ್ರವಾಹದಿಂದ ಒಟ್ಟಾರೆ ಆಹಾರ ಉತ್ಪಾದನೆ ಕಡಿಮೆಯಾಗಿತ್ತು. ಆದರೆ ಆ ಹೊತ್ತಿಗೆ ಬರಗಾಲ ಬಹುಪಾಲು ಮುಗಿದುಹೋಗಿತ್ತು! ಅಂದರೆ, ಆಹಾರದ ಲಭ್ಯತೆಯಲ್ಲಿ ಕಡಿತವಾಗಿದ್ದು ತಡವಾಗಿ ಆದಂತಹ ಘಟನೆ.

ಆದರೆ ಪ್ರವಾಹದಿಂದಾಗಿ ಹಲವರು ಉದ್ಯೋಗ ಕಳೆದುಕೊಂಡರು. ಅಕ್ಕಿ ಕೊಳ್ಳುವ ಶಕ್ತಿ ದಿಢೀರನೆ ಕುಸಿಯಿತು. ಮತ್ತೆ ಗ್ರಾಮೀಣ ಕಾರ್ಮಿಕರು ತೀವ್ರ ತೊಂದರೆಗೊಳಗಾದರು. 1943ರ ಬಂಗಾಳದ ಬರಕ್ಕೆ ಹೋಲಿಸಿದರೆ 1974ರ ಬಾಂಗ್ಲಾದೇಶದ ಬರದಲ್ಲಿ ರೈತರು ಮತ್ತು ಗೇಣಿದಾರರು ಹೆಚ್ಚಿನ ಸಂಕಷ್ಟವನ್ನು ಅನುಭವಿಸಿದರು. ಪ್ರವಾಹದಿಂದ ಅತಿ ಹೆಚ್ಚು ಆಸ್ತಿಪಾಸ್ತಿ ನಷ್ಟ ಅನುಭವಿಸಿದವರೂ ಅವರೆ.

1974ರಲ್ಲಿ ಇಥಿಯೋಪಿಯದ ಹರೇರ್ಗೆಯಲ್ಲಿ ಸಂಭವಿಸಿದ ಬರಗಾಲದಲ್ಲಿ ಪಶುಪಾಲಕರು (ಕುರಿ, ಮೇಕೆ, ದನ ಮೇಯಿಸುವವರು) ಅದರಲ್ಲೂ ಮುಖ್ಯವಾಗಿ ಓಗಾಡೆನ್ ಸೋಮಾಲಿ ಮತ್ತು ಇಸ್ಸಾ ಸೋಮಾಲಿ ಸಮುದಾಯದವರು ತುಂಬಾ ಕಷ್ಟಪಟ್ಟರು. ಬರಗಾಲದಿಂದ ಅವರ ಬಳಿಯಿದ್ದ ದನಕರುಗಳು ಸಾಲುಸಾಲಾಗಿ ಸತ್ತವು. ಜನರಿಗೆ ಆಸ್ತಿಯೇ ಇಲ್ಲದಂತಾಯಿತು. ಜೊತೆಗೆ ಮಾರುಕಟ್ಟೆಯಲ್ಲಿ ಪ್ರಾಣಿಗಳ ಬೆಲೆ ತುಂಬಾ ಕಡಿಮೆಯಾಯಿತು ಮತ್ತು ಆಹಾರ ಧಾನ್ಯಗಳ ಬೆಲೆ ತುಂಬಾ ಹೆಚ್ಚಾಯಿತು. ಸಾಮಾನ್ಯವಾಗಿ ಈ ಪಶುಪಾಲಕರು ತಮ್ಮ ಪ್ರಾಣಿಗಳನ್ನು ಮಾರಿ, ಬಂದ ಹಣದಲ್ಲಿ ಕಡಿಮೆ ಬೆಲೆಯ ಧಾನ್ಯಗಳನ್ನು ಕೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಆದರೆ ಈಗ ಅವರ ಬಳಿ ಪ್ರಾಣಿಗಳೂ ಇರಲಿಲ್ಲ, ಇದ್ದ ಪ್ರಾಣಿಗಳಿಗೆ ಬೆಲೆಯೂ ಸಿಗುತ್ತಿರಲಿಲ್ಲ. ಪಶುಪಾಲಕರಿಗೆ ಕೊಳ್ಳುವ ಶಕ್ತಿ ಕಡಿಮೆಯಾಯಿತು.

ಇತ್ತೀಚೆಗೆ 'ಜಾಗತಿಕ ಆಹಾರ ಬಿಕ್ಕಟ್ಟು' ಎಂಬ ವಿಷಯದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಈಗ ಜಗತ್ತಿನಲ್ಲಿ ಎಲ್ಲರ ಗಮನ ಸಾಕಷ್ಟು ಆಹಾರ ಉತ್ಪಾದನೆ ಹೆಚ್ಚಿಸುವುದರ ಮೂಲಕ ಮತ್ತು ಅಂತರರಾಷ್ಟ್ರೀಯ ವ್ಯಾಪಾರದ ಮೂಲಕ ಆಹಾರವನ್ನು ಒದಗಿಸಬಹುದೇ ಅನ್ನುವುದರ ಬಗ್ಗೆ ಚಿಂತನೆ ನಡೆಯುತ್ತಿದೆ. ಒಂದು ವೇಳೆ ಯಾವುದಾದರೂ ದೇಶದಲ್ಲಿ ಬೆಳೆ ನಾಶದಿಂದ ಆಹಾರದ ಕೊರತೆ ಉಂಟಾದರೆ, ಆ ದೇಶಕ್ಕೆ ಆಹಾರ ಸಿಗುವಂತೆ ಗ್ಯಾರಂಟಿ ನೀಡಲು 'ಅಂತರರಾಷ್ಟ್ರೀಯ ವಿಮಾ ಪದ್ಧತಿ'ಯನ್ನು ತರಬೇಕು ಎಂಬ ಪ್ರಸ್ತಾಪಗಳು ಕೇಳಿಬರುತ್ತಿವೆ.

ಈ ಚರ್ಚೆಗಳೆಲ್ಲವೂ ಸಾಕಷ್ಟು ಅರ್ಥಪೂರ್ಣ. ಆಹಾರದ ಕೊರತೆಯಾದರೆ ಜನರು ಹಸಿವಿನಿಂದ ಸಾಯುತ್ತಾರೆ ಎನ್ನುವುದು ನಿಜ. ಆದರೆ, ಕೇವಲ 'ಆಹಾರದ ಲಭ್ಯತೆ'ಯ ಬಗ್ಗೆ ಮಾತ್ರ ಯೋಚಿಸುತ್ತಾ, ಉಳಿದ ಮುಖ್ಯ ವಿಷಯಗಳನ್ನು ಮರೆತುಬಿಡುವುದು ಕಳವಳಕಾರಿ ಸಂಗತಿ. ನಾವು 'ಆಹಾರದ ಹಕ್ಕಿನ' ದೃಷ್ಟಿಕೋನದಿಂದ ನೋಡುವುದಾದರೆ, ಜನರ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಕಾನೂನು ವ್ಯವಸ್ಥೆಗಳ ಕಡೆಗೆ ಗಮನ ಹರಿಸಬೇಕಾಗುತ್ತದೆ. ಈ ಎಲ್ಲಾ ವ್ಯವಸ್ಥೆಗಳು ಜನರ ಆಹಾರದ ಹಕ್ಕನ್ನು ಪ್ರಭಾವಿಸುತ್ತವೆ. ಆಹಾರದ ಸರಬರಾಜು ಬರಗಾಲದ ಕಥನದ ಕೇವಲ ಒಂದು ಭಾಗ ಮಾತ್ರ. ಜಗತ್ತಿನಲ್ಲಿ ಹಲವು ದೊಡ್ಡ ದೊಡ್ಡ ಬರಗಾಲಗಳು ದೇಶದಲ್ಲಿ ಆಹಾರ ಸರಬರಾಜು ತುಂಬಾ ಉತ್ತಮವಾಗಿದ್ದಾಗಲೇ ಸಂಭವಿಸಿವೆ. ಅಷ್ಟೇ ಅಲ್ಲ, ಬರಗಾಲದ ಸಮಯದಲ್ಲಿ ಆ ದೇಶದಲ್ಲಿ ಹಿಂದೆಂದಿಗಿಂತ ಅತಿ ಹೆಚ್ಚು ಆಹಾರ ಉತ್ಪಾದನೆಯೂ ಆಗಿದೆ. ಹಾಗಾಗಿ ಆಹಾರದ ಹಕ್ಕಿನ ಸಿದ್ಧಾಂತದ ದೃಷ್ಟಿಯಿಂದ ನೋಡುವುದಾದರೆ ಸಾಮಾಜಿಕ ಭದ್ರತೆ ಅಂದರೆ ಬಡವರಿಗೆ ಸಿಗುವ ಸರ್ಕಾರಿ ನೆರವು, ಉದ್ಯೋಗ ಖಾತರಿ, ಜನರ ಕೂಲಿ ಮತ್ತು ಆಹಾರದ ಬೆಲೆಯ ನಡುವಿನ ವ್ಯತ್ಯಾಸ ಮತ್ತು ಜನರ ಆರ್ಥಿಕ ಜೀವನವನ್ನು ನಿಯಂತ್ರಿಸುವ ಒಟ್ಟಾರೆ ಹಕ್ಕುಗಳ ಬಗ್ಗೆ ಗಮನ ಹರಿಸಬೇಕು.

ಜನರಿಗೆ ದೀರ್ಘಕಾಲದವರೆಗೆ ಪೌಷ್ಟಿಕ ಆಹಾರ ಸಿಗುವಂತೆ ಮಾಡಲು, ಬರಗಾಲ ಬರದಂತೆ ತಡೆಯಲು, ಬರ ಸಂಭವಿಸಿದಾಗ ಪರಿಹಾರ ನೀಡಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆಹಾರದ ಕೊರತೆಯ ಮೇಲಾಗುವ ವಿಭಿನ್ನ ಪ್ರಭಾವಗಳನ್ನು ನಾವು ಗಮನಿಸಬೇಕಾಗುತ್ತದೆ. ಕೇವಲ 'ದೇಶದಲ್ಲಿರುವ ಒಟ್ಟು ಆಹಾರ ಮತ್ತು ಅಲ್ಲಿನ ಜನಸಂಖ್ಯೆ'ಯ ಲೆಕ್ಕಾಚಾರ ಮಾಡುತ್ತಾ ಕೂತರೆ ನಿಜವಾದ ಸಮಸ್ಯೆ ಕಾಣುವುದೇ ಇಲ್ಲ. ಶತಮಾನಗಳಿಂದ ಇಂತಹ ತಪ್ಪು ಲೆಕ್ಕಾಚಾರಗಳೇ ಸರ್ಕಾರದ ನೀತಿಗಳನ್ನು ಹಾದಿ ತಪ್ಪಿಸುತ್ತಿರುವುದು. ಬಂಗಾಳದಲ್ಲಿ ದೊಡ್ಡ ಬರಗಾಲ ಬರುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಅಷ್ಟೇ ಅಲ್ಲ, ಬರಗಾಲ ಬಂದಾಗಲೂ ಅದನ್ನು ಗುರುತಿಸಲು ಸಾಧ್ಯವಾಗಿರಲಿಲ್ಲ! ಇದಕ್ಕೆ ಮುಖ್ಯ ಕಾರಣ, ಅಂದಿನ ಸರ್ಕಾರ ಕೇವಲ ತಲಾ ಆಹಾರ ಲಭ್ಯತೆಯ ಲೆಕ್ಕಾಚಾರದಲ್ಲೇ ಮುಳುಗಿಹೋಗಿತ್ತು.

ಬರಗಾಲ ಸಂಭವಿಸಿದಾಗ ಸರ್ಕಾರ ಮಧ್ಯಪ್ರವೇಶ ಮಾಡಬೇಕಾ ಅಥವಾ

ಮುಕ್ತ ಮಾರುಕಟ್ಟೆಗೆ ಅವಕಾಶ ಮಾಡಿಕೊಡಬೇಕಾ ಅನ್ನುವುದು ಮುಗಿಯದ ಚರ್ಚೆ. ಕೇವಲ 'ಆಹಾರದ ಲಭ್ಯತೆ'ಯನ್ನೇ ಬರಗಾಲದ ಪರಿಹಾರವಾಗಿ ನೋಡಿದಾಗ, ಮುಕ್ತ ಮಾರುಕಟ್ಟೆ ಇದ್ದರೆ, ವ್ಯಾಪಾರಿಗಳು ಆಹಾರದ ಕೊರತೆ ಇರುವ ಜಾಗಗಳಿಗೆ ತಮ್ಮಷ್ಟಕ್ಕೇ ಧಾನ್ಯಗಳನ್ನು ಸಾಗಿಸುತ್ತಾರೆ, ಹಾಗಾಗಿ ಸರ್ಕಾರವು ಸುಮ್ಮನೆ ಖಾಸಗಿ ವ್ಯಾಪಾರಿಗಳಿಗೆ ಎಲ್ಲವನ್ನೂ ಬಿಟ್ಟುಬಿಡುವುದು ಒಳ್ಳೆಯದು ಅನ್ನುವ ಅಭಿಪ್ರಾಯ ಮೂಡುತ್ತದೆ. 1943ರಲ್ಲಿ ಬಂಗಾಳದಲ್ಲಿ ಸಂಭವಿಸಿದಂತಹ 'ಆರ್ಥಿಕ ಉಬ್ಬರದ ಬರಗಾಲ'ದ ಸಂದರ್ಭದಲ್ಲಿ ಇಂತಹ ನೀತಿಗೆ ಅರ್ಥವಿದೆ. ಆಗ ಸರ್ಕಾರ ಬೇರೆ ರಾಜ್ಯಗಳಿಂದ ಬಂಗಾಳಕ್ಕೆ ಆಹಾರ ತರುವುದಕ್ಕೆ ನಿರ್ಬಂಧಗಳನ್ನು ಹೇರಿತ್ತು. ಹಾಗಾಗಿ ಅಲ್ಲಿ ಆಹಾರ ಪದಾರ್ಥಗಳ ಕೊರತೆಯ ಸಮಸ್ಯೆ ಹೆಚ್ಚು ತೀವ್ರವಾಯಿತು. ಮುಕ್ತ ಮಾರುಕಟ್ಟೆಗೆ ಅವಕಾಶವಿದ್ದಿದ್ದರೆ, ಬೇರೆ ರಾಜ್ಯಗಳಿಂದ ಅಲ್ಲಿಗೆ ಅಕ್ಕಿ ಬರಲು ಸಾಧ್ಯವಾಗುತ್ತಿತ್ತು. ಜನರ ಕಷ್ಟ ಸ್ವಲ್ಪ ಕಡಿಮೆಯಾಗುತ್ತಿತ್ತು. ಆದರೆ ದುರದೃಷ್ಟವಶಾತ್ ಮುಕ್ತ ಮಾರುಕಟ್ಟೆ ನೀತಿಗೆ ಸದಾ ಆತುಕೊಂಡಿದ್ದ ಬ್ರಿಟಿಷ್ ಸರ್ಕಾರ ಆ ಸಮಯದಲ್ಲಿ ಅದನ್ನು ಕೈಬಿಟ್ಟಿತ್ತು. ಖಾಸಗಿ ವ್ಯಾಪಾರವನ್ನು ಬಂದ್ ಮಾಡಿತು. ಅಗ ಅವರು ಆಡಂ ಸ್ಮಿತ್ ಹೇಳಿದ್ದ ಮುಕ್ತ ಮಾರುಕಟ್ಟೆಯ ಪಾಠವನ್ನು ನಿಜವಾಗಿ ಪಾಲಿಸಬೇಕಿತ್ತು. ಅದು ಬೇಡವಾಗಿದ್ದ ಸಮಯದಲ್ಲಿ ಮುಕ್ತ ಮಾರುಕಟ್ಟೆ ನೀತಿಯನ್ನು ಬಳಸಿ, ಲಕ್ಷಾಂತರ ಜನರನ್ನು ಸಾಯಿಸಿದ್ದರು. ಈಗ ಮುಕ್ತ ಮಾರುಕಟ್ಟೆ ಬೇಕಾಗಿದ್ದ ಸಂದರ್ಭದಲ್ಲಿ ಮುಕ್ತ ಮಾರುಕಟ್ಟೆಯ ನೀತಿಯನ್ನು ಕೈಬಿಟ್ಟು ತೊಂದರೆ ಮಾಡಿದರು. ಆಹಾರದ ಮುಕ್ತ ಹರಿವಿಗೆ ಅವಕಾಶ ಮಾಡಿಕೊಟ್ಟಿದ್ದರೆ ಬಂಗಾಳದ ಕಾರ್ಮಿಕರಿಗೆ ಆಹಾರ ಸಿಕ್ಕಿಬಿಡುತ್ತಿತ್ತು ಅನ್ನುವ ಖಾತರಿಯೇನಿರಲಿಲ್ಲ. ಆದರೆ ಅದರಿಂದ ಬೆಲೆ ಏರಿಕೆ ನಿಯಂತ್ರಣದಲ್ಲಿರುತ್ತಿತ್ತು.

ತೀವ್ರ ಆರ್ಥಿಕ ಕುಸಿತದಿಂದ ಬರಗಾಲ ಸಂಭವಿಸಿದ್ದರೆ ಸಾಮಾನ್ಯವಾಗಿ ಆಹಾರವು ಬರಗಾಲ ಪೀಡಿತ ಪ್ರದೇಶಕ್ಕೆ ಬರುವ ಬದಲು, ಅಲ್ಲಿಂದ ಹೊರಗೆ ಹೋಗುವ ಸಾಧ್ಯತೆಗಳೇ ಹೆಚ್ಚು! ಇದು ಇತಿಹಾಸದಲ್ಲಿ ತುಂಬಾ ಸಲ ನಡೆದಿದೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ ಆಹಾರದ ಪೂರೈಕೆ ಕಡಿಮೆಯೇ ಇದ್ದರೂ, ಹಸಿವಿನಿಂದ ಜನ ಸಾಯುತ್ತಿದ್ದರೂ ಅವರಿಗೆ ಆಹಾರ ಕೊಳ್ಳಲು ಆಗುವುದಿಲ್ಲ. ಕೊಳ್ಳುವ ಶಕ್ತಿ ಅವರಿಗಿರುವುದಿಲ್ಲ. ಇದಕ್ಕೆ ಇತಿಹಾಸದಲ್ಲಿ ಕೆಲವು ಉದಾಹರಣೆಗಳಿವೆ. ಇಥಿಯೋಪಿಯದ ವೊಲ್ಲೊ ಪ್ರಾಂತ್ಯದಲ್ಲಿ ಬರಗಾಲದ ಸಮಯದಲ್ಲಿ ಆಹಾರ ಹೊರಗಿನಿಂದ ಬರಲಿಲ್ಲ. ಬದಲಿಗೆ ವೊಲ್ಲೊದಿಂದ ಆಹಾರ ಹೊರಗೆ ಹೋಯಿತು. 1974ರ ಬಾಂಗ್ಲಾದೇಶದ ಕ್ಷಾಮದಲ್ಲಿಯೂ, ಅಲ್ಲಿಂದ ಧಾನ್ಯ ಭಾರತಕ್ಕೆ ಸಾಗಣೆಯಾಗುತ್ತಿತ್ತು. ಚೀನಾದ ಹುನಾನ್ ಪ್ರಾಂತ್ಯದಲ್ಲಿ ತೀವ್ರ ಆರ್ಥಿಕ ಕುಸಿತದಿಂದ ಬರಗಾಲ ಸಂಭವಿಸಿದಾಗ, ಅಲ್ಲಿಂದ ಅಕ್ಕಿ ರಫ್ತು ಮಾಡುವುದನ್ನು ನಿಲ್ಲಿಸಲು ಬ್ರಿಟಿಷರು ನಿರಾಕರಿಸಿದರು. ಇದರಿಂದ ಕೋಪಗೊಂಡ ಜನ 1906ರಲ್ಲಿ ದಂಗೆಯೆದ್ದರು. ನಂತರ 1910ರಲ್ಲಿ ಪ್ರಸಿದ್ಧ 'ಚಾಂಗ್ಶಾ ಅಕ್ಕಿ ಗಲಭೆ' ನಡೆಯಿತು. ಐರ್ಲೆಂಡಿನಲ್ಲಿ ಭೀಕರ ಮಹಾ ಬರಗಾಲದಲ್ಲಿ ಜನ ಹಸಿವಿನಿಂದ ಸಾಯುತ್ತಿದ್ದಾಗ ಐರ್ಲೆಂಡ್ ದೇಶದಿಂದ ಗೋಧಿ, ಓಟ್ಸ್, ದನಕರುಗಳು, ಹಂದಿಗಳು, ಮೊಟ್ಟೆ ಮತ್ತು ಬೆಣ್ಣೆ ಸಾಲು ಸಾಲು ಹಡಗುಗಳಲ್ಲಿ ಹೋಗುತ್ತಿದ್ದವು. ಅದೂ ಯಥೇಚ್ಛವಾಗಿ ಆಹಾರ ಪದಾರ್ಥಗಳಿದ್ದ ಶ್ರೀಮಂತ ಇಂಗ್ಲೆಂಡಿಗೆ. ಹೀಗಾಗಿ, ಸರ್ಕಾರದ ಮಧ್ಯಪ್ರವೇಶ ಮಾಡಬಾರದೆನ್ನುವ ನೀತಿ ಒಂದು ಕಹಿಸತ್ಯವನ್ನು ಮರೆಯುತ್ತದೆ. ಜನರಿಗೆ ಕೊಳ್ಳುವ ಶಕ್ತಿ ಇಲ್ಲದಿದ್ದಾಗ, ಮುಕ್ತ ಮಾರುಕಟ್ಟೆಗೆ ಅವಕಾಶಕೊಟ್ಟರೆ ಬರವಿರುವ ಜಾಗದಿಂದ ಆಹಾರಧಾನ್ಯ ಶ್ರೀಮಂತ ದೇಶಗಳಿಗೆ ರವಾನೆಯಾಗುತ್ತದೆ.

ಬರಗಾಲಪೀಡಿತ ಪ್ರದೇಶಗಳಿಗೆ ಖಾಸಗಿ ವ್ಯಾಪಾರಿಗಳು ಆಹಾರವನ್ನು ಸರಬರಾಜು ಮಾಡದೆ ಹೋದಾಗ ಮಾರುಕಟ್ಟೆ ವ್ಯವಸ್ಥೆಯನ್ನು ನಂಬಿರುವ ಜನರಿಗೆ ತೀವ್ರ ನಿರಾಶೆಯಾಗುತ್ತದೆ. ಒಡಿಶಾದಲ್ಲಿ 1865–1866ರಲ್ಲಿ ಭೀಕರ ಬರಗಾಲ ಸಂಭವಿಸಿದಾಗ, ಖಾಸಗಿ ವ್ಯಾಪಾರಿಗಳು ಹೊರಗಿನಿಂದ ಹೆಚ್ಚಿನ ಆಹಾರವನ್ನು ತರದೇ ಹೋಗಿದ್ದಕ್ಕೆ ಕಟಕ್ ವಿಭಾಗದ ಕಮಿಷನರ್ ರಾವೆನ್‌ಶಾ ತೀವ್ರ ನಿರಾಶೆ ವ್ಯಕ್ತಪಡಿಸಿದರು. ಜನರ ತೀವ್ರ ಹಸಿವು ಅಥವಾ ಅಗತ್ಯ ಮಾರುಕಟ್ಟೆಗೆ ಮುಖ್ಯವಲ್ಲ. ಮಾರುಕಟ್ಟೆಯನ್ನು ಸೆಳೆಯುವುದು ಬೇಡಿಕೆ. ಜನರ ಕೊಳ್ಳುವ ಶಕ್ತಿ. ಕೈಯಲ್ಲಿ ಕಾಸಿಲ್ಲದ ಬಡವರ ಹಸಿವು ಮುಕ್ತ ಮಾರುಕಟ್ಟೆಯ ಕಣ್ಣಿಗೆ ಬೀಳುವುದಿಲ್ಲ. ಒಡಿಶಾದ ಬಡಜನರ ಬಳಿ ಧಾನ್ಯ ಕೊಳ್ಳಲು ದುಡ್ಡೇ ಇರಲಿಲ್ಲ. ಹಾಗಾಗಿ ಅವರು ಮಾರುಕಟ್ಟೆಯ ಕಣ್ಣಿಗೆ ಬೀಳಲಿಲ್ಲ.

ಆಹಾರ ಲಭ್ಯತೆಯ ಸಿದ್ಧಾಂತ ಬರಗಾಲಕ್ಕೆ ಯಾವುದೇ ಮುನ್ಸೂಚನೆ ನೀಡುವುದಿಲ್ಲ. ಅಷ್ಟೇ ಏಕೆ, ಬರಗಾಲದಲ್ಲಿ ಸಮಾಜದ ಒಂದು ನಿರ್ದಿಷ್ಟ ಗುಂಪಿನ ಜನ (ಉದಾಹರಣೆಗೆ ಬಡ ಕೂಲಿ ಕಾರ್ಮಿಕರು ಅಥವಾ ಪಶುಪಾಲಕರು) ಮಾತ್ರ ಏಕೆ ಸಾಯುತ್ತಾರೆ ಮತ್ತು ಇನ್ನೊಂದು ಗುಂಪಿನ ಜನರಿಗೆ (ಶ್ರೀಮಂತರು) ಯಾಕೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂಬುದಕ್ಕೆ ಯಾವ ವಿವರಣೆಯನ್ನೂ ನೀಡುವುದಿಲ್ಲ. ವಾಸ್ತವವಾಗಿ, "ಜನ ಮತ್ತು ಆಹಾರದ ನಡುವಿನ ಸಂಬಂಧ ಕ್ಷಾಮದ ವಿಶ್ಲೇಷಣೆಗೆ ಅತ್ಯಂತ ನಿರ್ಣಾಯಕವಾದ ವಿಷಯ. ಆದರೆ ಈ ಫ್ಯಾಡ್ ಸಿದ್ಧಾಂತ ಇದನ್ನು ಗಮನಿಸುವುದೇ ಇಲ್ಲ. ಬದಲಿಗೆ ಇದು ಕೇವಲ 'ಒಟ್ಟು ಆಹಾರದ ಲಭ್ಯತೆ' ಎಂಬ ನಿರ್ಜೀವವಾದ ಅಂಕಿಅಂಶಗಳನ್ನು ನಮಗೆ ತೋರಿಸುತ್ತಾ ಸಾಗುತ್ತದೆ.

